ಜಾತಕ ಚಂದ್ರಿಕೆ

ಕನ್ನಡ ಟೀಕೋದಾಹರಣ ಪರಿಶಿಷ್ಟ ಸಹಿತ

— ಲೇ॥ ಪ್ರ: —

ಶಂಭು ಶರ್ಮಾ ನಾಜಗಾರ.

(ಶಂಭು ಶರ್ಮಾ ನಾಜಗಾರಇವರ ಷಷ್ಟ್ಯಬ್ದ ಪೂರ್ತಿ-ಸ್ಮಾರಕ ಗ್ರಂಥ)

ಮೊದಲನೇ ಆವೃತ್ತಿ ಬೆಲೆ ೧—೫೦

ಜಾತಕ ಚಂದ್ರಿಕೆ

ಸವಿಸ್ತರ ಕನ್ನಡಟೀಕಾ ವಿವರಣ ಸಹಿತ

ಶಂಭುಶರ್ಮಾ ನಾಜಗಾರ ಇವರ ಷಷ್ಟ್ಯಬ್ದ ಪೂರ್ತಿ
ಸಮಾರಂಭದ ಕಾಣಿಕೆ-

ಲೇ:- ಪ್ರಕಾಶಕ.

ಶಂಭುಶರ್ಮಾ ನಾಜಗಾರ
(ಸಂಸ್ಕೃತರತ್ನಂ-ವಿದ್ಯಾಲಂಕಾರಃ)

೧೦೦೦ ಪ್ರತಿಗಳು

ಬೆಲೆ ಒಂದು ರೂಪಾಯಿ ಐವತ್ತು ನಯೇಪೈಸೆ.

ನಮ್ಮಲ್ಲಿ ಸಿಗುವ ಪುಸ್ತಕಗಳು

ಸತ್ಯಗಣಪತಿ ವ್ರತಕಥಾ (ಕನ್ನಡ ಟೀಕಾ)

ಬೆಲೆ ೧ ರೂ. ೦೦

ಮೂಹೂರ್ತ ಶತಕ (ಕನ್ನಡ ಟೀಕಾ)

ಮೂಹೂರ್ತ ಮಾಧವಾನುಸಾರಿ

ಬೆಲೆ ೧ರೂ. ೨೫ ನ. ಪೈ.

ಜಾತಕ ಸ್ವಯಂಶಿಕ್ಷಕ (ಕನ್ನಡ)

ಬೆಲೆ ೦ ೬೧ ನ. ಪೈ

ಗಂಗಾಧರ ಶಾಸ್ತ್ರಿ ನಾಜಗಾರ ಕೃತ

ಶಾಕುಂತಲ ನಾಟಕ (ಕನ್ನಡ ರಂಗಭೂಮಿಗೆ ಅನುಗುಣವಾದದ್ದು)

ಬೆಲೆ ೧ ರೂ. ೫೦ ನ. ಪೈ.

ಹಾಗೂ

ಸುಮಸಂಚಯ (ಕಿರುಗವನ ಸಂಗ್ರಹ) ೦.೨೦ ನ. ಪೈ.

ಇದಲ್ಲದೆ ಜಾತಕ ಕುಂಡಲಿಗಳ ಪ್ರಿಂಟೆಡ್ ಬಿಡಿ ಫಾರ್ಮು ಹಾಗೂ ಬ್ಯಾಂಡಿಂಗ್ ಮಾಡಿದ ಪುಸ್ತಕಗಳೂ ಸಿಗುವವು. ಮತ್ತು ಪರಿಶುದ್ಧವಾದ ಜಾತಕಗಳನ್ನೂ ತಯಾರಿಸುವೆವು.

ವಿಶೇಷ—ಸ್ಫುಟ ಜಾತಕಮಾಡಿ ಇಡೀ ಆಯುಷ್ಯದ ಫಲಾಫಲಗಳನ್ನೂ ಬರೆಯಲಾಗುವದು. ಪತ್ರ ಮೂಲಕ ಸಂಪರ್ಕ ಬೆಳಿಸಬಹುದು.

ಶಂಭು ಶಾಸ್ತ್ರೀ ನಾಜಗಾರ.

ದುರ್ಗಾಕೇರಿ ಪೋ: ಹೊನ್ನಾವರ (ಉ. ಕ.)

—ಪ್ರಸ್ತಾವನೆಯ ಅನುಕ್ರಮಣಿಕೆ—

ಜಾತಕ ಚಂದ್ರಿಕಾ ಅನುಕ್ರಮಣಿಕೆ

—ಪ್ರಸ್ತಾವನೆಯ ಅನುಕ್ರಮಣಿಕೆ—

ಜಾತಕ ಚಂದ್ರಿಕಾ ಅನುಕ್ರಮಣಿಕೆ

॥ ಯೋಗಾಧ್ಯಾಯ ॥

॥ ಆಯೂರ್ದಾಯಾಧ್ಯಾಯ ॥

॥ ದಶಾಫಲಾಧ್ಯಾಯ ॥

॥ ಪರಿಶಿಷ್ಟ ॥

॥ ಕಿಂಚಿದಾತ್ಮನಿವೇದನಂ ॥

ನಮ್ಮ ನಾಜಗಾರ ಜ್ಯೋತಿಷಕಾರ್ಯಾಲಯವೆಂಬ ಸಂಸ್ಥೆಯು ೩೨ ವರ್ಷಗಳ ಹಿಂದೆ ಸ್ಥಾಪಿತವಾಗಿ ತನ್ನವೇ ಆದ ಕೆಲವೊಂದು ಗೊತ್ತುಗುರಿಗಳನ್ನು ನಿರ್ದಿಷ್ಟಪಡಿಸಿಕೊಂಡಿತ್ತು. ಅದರಲ್ಲಿ ಆಚಾರವಿಧಿ, ಶ್ರಾದ್ಧಪ್ರಯೋಗ, ಪ್ರಯೋಕಾರಿಕಾ ಸಂಗ್ರಹ, ಜಾತಕ ಶಿಕ್ಷಕ ಇತ್ಯಾದಿ ಗ್ರಂಥಗಳನ್ನು ಸಂಸ್ಥೆಯುವತಿಯಿಂದ ಪ್ರಕಟಿಸಲಾಗಿತ್ತು. ಗ್ರಂಥಗಳೇನೋ ಜನಪ್ರಿಯಗಳಾಗಿವೆ ಖರ್ಚಿನ ಪ್ರಮಾಣವನ್ನವಲೋಕಿಸಿದರೆ, ನಿರಾಶೆಯೇ ಮುಂದೆ ನಿಲ್ಲುತ್ತದೆ. ೧೦೦೦ ಆಚಾರವಿಧಿ ಖರ್ಚಾಗಲು ೩೦ ವರ್ಷ ಹಿಡಿದವು !! ಇದರ ಅರ್ಥವಿಷ್ಟೇ ಕಥೆ ಕಾದಂಬರಿಗಳಂತೆ ಸಾಮಾನ್ಯ ಜನರಿಗೆ ಇವು ಬೇಕಿಲ್ಲ. ಕೆಲವಷ್ಟೇ ತಜ್ಞರಿಗೆ ಅತ್ಯಾವಶ್ಯಕಗಳು ಧನಲಾಭದೃಷ್ಟಿಯನ್ನಿರಿಸಿಕೊಳ್ಳದೆ ಬರೇ ಕೀರ್ತಿ ಕಾಮರಾಗಿ ಮಾಡುವವ್ಯವಹಾರವಿದು.

ನಮಗೆ ಇದೊಂದು ಚಟ. ಉತ್ಕಟೇಚ್ಛೆ ಇವುಗಳಿಂದ ನಷ್ಟವನ್ನಾದರೂ ಸಹಿಸಿಕೊಂಡು ಈ ಗ್ರಂಥ ಪ್ರಕಟನೆಯನ್ನು ಕೈಕೊಂಡಿರುವದರಿಂದ ನನ್ನ ಇಡೀ ಆಯುಷ್ಯದಲ್ಲಿ “ ಸ್ವಾತ್ಮನ್ಯೇವ ಚ ಸಂತುಷ್ಟ: ” ಎಂಬಂತೆ ಇದು ಮನ: ಶಾಂತಿಗೆ ವಿಶೇಷ ಸಾಧನವಾದಂತಾಗಿದೆ. ನನ್ನ ಅರವತ್ತನೇ ವಯಸ್ಸಿನಲ್ಲಿ “ ಜಾತಕ ಚಂದ್ರಿಕೆ ” ಯ ಟೀಕಾ ವಿವರಣಗಳ ಬರವಣಿಗೆ ಮುಗಿದುದರಿಂದ ನನ್ನ “ ಷಷ್ಟ್ಯಬ್ದಪೂರ್ತಿ ” ಸ್ಮಾರಕವೆಂದು ಇದನ್ನು ಪ್ರಕಟಿಸಿದೆನು. ಬಾಲ್ಯದಲ್ಲಿಯೇ ನನ್ನ ಲಕ್ಷ್ಯವನ್ನು ಸೆಳೆದಿರುವ “ ಈ ಚಂದ್ರಿಕೆ ” ಯು ಇಳಿವಯಸ್ಸಿನಲ್ಲಾದರೂ ಪ್ರಕಟವಾಯಿತಲ್ಲ ! ಇದೇ ಒಂದು ಸಮಾಧಾನ. ಸಂಸಾರ ತಾಪತ್ರಯದ ಜಂಜಾಟಧಲ್ಲಿ ಇನ್ನೂ ಎಷ್ಟೋ ಗ್ರಂಥಗಳ ಪ್ರಕಟಣೆಯು ಮನಸ್ಸಿನ ಮಂಡಿಗೆಯೇ ಆಗಿಬಿಟ್ಟಿದೆ. ಆದರೂ ನಿರಾಶನಾಗಲಾರೆ. ಮುಂದಿನದೆಲ್ಲಾ ದೇವರ ಇಚ್ಛೆ !

ಆಯುಷ್ಯದ ಕೊನೆಯುಲ್ಲೊಂದು ಮಹಾ ಸಾಹಸದ ಕಾರ್ಯವನ್ನು ಮಾಡಿಬಿಡಬೇಕೆಂದಿದೆ ಅದು ಧನವಂತರಾದ **ಸುಶಿಕ್ಷಿತರ** ಸಹಕಾರದಿಂದ ಮಾತ್ರ ಸಾಧ್ಯ. ಅದೇನೆಂದರೆ “ **ಕನ್ನಡ ಧರ್ಮಸಿಂಧುಃ** ” ಸಾವಿರಾರು ಪುಟಗಳು ೩-೪ ಸಾವಿರ ಖರ್ಚಿನದು. ಯಾರಾದರೂ ಪ್ರೋತ್ಸಾಹಿಸಿದಲ್ಲಿ ಇದು ಶಕ್ಯ. ಇಲ್ಲವಾದರೆ ಇಲ್ಲ. ಇದರ ಪ್ರಥಮ ಖಂಡವು ಭಾಷಾಂತರಿತವಾಗಿದೆ. ಮುಂದೆ

॥ ಪ್ರಸ್ತಾವನೆ ॥

(ಫಲಜ್ಯೋತಿಃಶಾಸ್ತ್ರ ನಿರೀಕ್ಷಣ)

ಪೂರ್ವಜನ್ಮಾರ್ಜಿತಂಕರ್ಮಶುಭಂವಾಯದಿವಾಶುಭಂ ।
ತಸ್ಯಪಕ್ತಿಂಗ್ರಹಾಃಸರ್ವೇಸೂಚಯಂತೀಹಜನ್ಮನಿ ॥

ವೇದಾಂಗವೆನ್ನಿಸಿಕೊಂಡ ಜ್ಯೋತಿಃಶಾಸ್ತ್ರವು ಅವಶ್ಯ ಅಧ್ಯೇತವ್ಯವೆಂದು ಬೇರೆ ಹೇಳಬೇಕಾಗಿಲ್ಲ. ಸಂಹಿತಾ, ಗಣಿತ, ಹೋರಾ ಎಂಬದಾಗಿ ಈ ಶಾಸ್ತ್ರವು ಮೂರು ವಿಭಾಗಗಳನ್ನೊಳಗೊಂಡಿದೆ. ಅಪ್ರಕೃತವಾದುದರಿಂದ, ಸಂಹಿತಾ, ಗಣಿತ, ವಿಭಾಗಗಳನ್ನು ಬಿಟ್ಟು ಬರೇ ಹೋರಾಶಾಸ್ತ್ರ ಅರ್ಥಾತ್ ಫಲಜ್ಯೋತಿಷ ಶಾಸ್ತ್ರದ ಸಲುವಾಗಿ ಕೆಲ ವಿಚಾರಗಳನ್ನು ಓದುಗರ ಮುಂಗಡೆಯಿಟ್ಟಿರುವೆನು. ಕಟು ಆದರೂ ಸತ್ಯ ಸಂಗತಿಗಳನ್ನು ಕೊಟ್ಟಿರುವೆನೆಂದು ನನ್ನ ದೃಢವಾದ ನಂಬಿಗೆ. ಫಲಜ್ಯೋತಿಷ ಶಾಸ್ತ್ರರಹಸ್ಯವೇನೆಂಬದನ್ನು ಇದರಿಂದ ಕೆಲಮಟ್ಟಿಗಾದರೂ ತಿಳಿಯಲನುಕೂಲವಾದಲ್ಲಿ ನನ್ನ ಪ್ರಯತ್ನವು ಫಲಿಸಿದಂತೆಯೇ.

॥ ಜ್ಯೋತಿಃಶಾಸ್ತ್ರ ॥

ಬುದ್ಧಿಜೀವಿಯಾದ-ಮಾನವನು-ತನ್ನ ಚಕ್ಷುರಾದಿ-ಇಂದ್ರಿಯಗಳ ಸಹಾಯದಿಂದ ವಿಷಯಗಳನ್ನು ಸಾಧ್ಯವಾದಷ್ಟು ಪರಿಶೀಲಿಸುತ್ತಿರುವದು ಸಹಜ.

ತೀರ ಹತ್ತಿರ ಹತ್ತಿರದ ವಿಷಯಗಳ ಜ್ಞಾನವಾದಮೇಲೆ ದೂರ ದೂರದ ವಿಷಯಗಳಿಗೂ ದೃಷ್ಟಿ ಹಾಯಿಸುವನು. ಅಂತೆಯೇ ಅಂತರಿಕ್ಷ-ನಿರೀಕ್ಷಣ ಮಾಡುವಾಗ ಪ್ರಚಂಡ ಕಿರಣನಾದ ರವಿ ಪ್ರಶಾಂತರಶ್ಮಿಯಾದ ಚಂದ್ರ ಮೊದಲಾದ ಗ್ರಹರನ್ನೂ ಇವರ ಕಕ್ಷೆಯಲ್ಲಿ ನಿಯಮಿತವಾಗಿ ತೋರುವ ನಕ್ಷತ್ರಾದಿಗಳ ಪರಾಮರ್ಶೆ ಮಾಡಿ ಇವುಗಳ ಕ್ರಮಬದ್ಧವಾದ ಚಲನವಲನ"-ಅಸ್ತೋದಯಾದಿಗಳನ್ನು ನಿರ್ದಿಷ್ಟಪಡಿಸಿ ಬರೆದಿಟ್ಟುಕೊಂಡನು. ಇದೇ ಜ್ಯೋತಿಃಶಾಸ್ತ್ರ. ಇವುಗಳಿಂದ ಸಾಮೂಹಿಕವಾಗಿ ಹಾಗೂ ವೈಯ್ಯಕ್ತಿಕವಾಗಿ ಜಗತ್ತಿನಲ್ಲಿ ಎಂಥೆಂಥ ಪರಿಣಾಮಗಳುಂಟಾಗುವವು? ಇವುಗಳನ್ನೆಲ್ಲ ಅನುಭವದಿಂದ ಬರೆದಿಟ್ಟಿರುವದು ಫಲಜ್ಯೋತಿಃಶಾಸ್ತ್ರವು. ಇವುಗಳ ಪರಿಣಾಮಗಳನ್ನು ಒರೆಗೆ ಹಚ್ಚಿ ಸರೀ

ಷ್ಪಿಸುವ ಸಂಶೋಧಕರು ಒಬ್ಬರ ಹಿಂದೊಬ್ಬರಂತೆ ಬರೆಯುತ್ತ ಸಾಗಿದರು. ಹೀಗಾಗಿ ಗ್ರಂಥಸಾಗರವೇ ನಿರ್ಮಿತವಾಯಿತು. ಸಂಶೋಧನೆಗೂ-ಸಂಶೋಧಕರಿಗೂ ಕೊನೆಯೆಂಬುದಿದೆಯೇ?

॥ ಅಪಾರಗ್ರಂಥರಾಶಿಗಳು ॥

ಫಲಜ್ಯೋತಿಃಶಾಸ್ತ್ರದಿಂದ ಮನುಷ್ಯನ ಆಯುರ್ಮಾನದಲ್ಲಿ ಜರುಗುವ ಸಾಮಾನ್ಯ ಹಾಗೂ ವಿಶೇಷ ಘಟನೆಗಳನ್ನೆಲ್ಲ ಕಾಲನಿರ್ದೇಶಪೂರ್ವಕ ಹೇಳಲು ಶಕ್ಯವೇ? ಇದು ಮಹತ್ವದ ಪ್ರಶ್ನೆ. ಅಥವಾ ಯಾವದಾದರೊಂದು ಮಹಾ ಗ್ರಂಥಬಂದರಿಂದ, ಅಥವಾ ಇಂತಿಷ್ಟು ಗ್ರಂಥಗಳಿಂದ ಹೇಳಲು ಬರುವದೆನ್ನುವಂತಿಲ್ಲ. ಹಾಗಿರುತ್ತಿದ್ದರೆ ಈ ಗ್ರಂಥರಾಶಿಗಳೆಲ್ಲ ಯಾಕೆ? ಫಲಹೇಳುವ ರೀತಿ, ಕಲ್ಪನೆಗಳಲ್ಲಾದರೂ ಮತ್ತೈಕ್ಯವಿದೆಯೇ ? ಪರಾಶರ ಮತವೊಂದಾದರೆ ಜೈಮಿನಿಯ ಮತವೇ ಬೇರೆ? ಭೃಗುಮತವು ಮತ್ತೊಂದು ರೀತಿಯದು. ಆರ್ಷ ಗ್ರಂಥಗಳಲ್ಲೇ ಮತಭೇದವಿರುವಾಗ ತದನುಸಾರಿ ಗ್ರಂಥಕರ್ತರ ಪಾಡೇನು? ಆದಕ್ಕೆಲ್ಲ ಆರ್ಷಗಳಲ್ಲಾದರೂ ಯಾವದನ್ನು ಪ್ರಮಾಣವೆಂದು ಹಿಡಿಯಬೇಕು? ಆದಕ್ಕೆಲ್ಲ ಆಧಾರವೇನು? ಇತ್ಯಾದಿ ಪ್ರಶ್ನೆಗಳಿಗೆಲ್ಲ ಸಮರ್ಪಕವಾಗಿ ಉತ್ತರ ಹೇಳುವದು ಸುಲಭವಲ್ಲ. ಇದರ ಮಥಿತಾರ್ಥವೇನೆಂದರೆ- ಅಥದೀಂದ ಇತಿವರೇಗೂ ಸಂಶೋಧನಾತ್ಮಕವಾಗಿಯೇ ಈ ಶಾಸ್ತ್ರವು ಮುಂದುವರಿಯುತ್ತ ಹೋಗುವದು.

॥ ನಾಡೀಗ್ರಂಥ ॥

ಜ್ಯೋತಿರ್ವಿದರು ಲಕ್ಷೋಪಲಕ್ಷವಾಗಿ ಗ್ರಂಥಗಳನ್ನು ನಿರ್ಮಿಸಿರುವದರಿಂದ ಅವುಗಳನ್ನೆಲ್ಲ ವಿಮರ್ಶಿಸುವದು ಒಂದು ಆಯುರ್ಮಾನಕ್ಕೆ ಮೀರಿದ ವಿಷಯ. ಇನ್ನೂ ಎಷ್ಟೋ ನಾಡೀಗ್ರಂಥಗಳೆನ್ನಿಸಿಕೊಳ್ಳುವ ಮಹಮಹಾ ಗ್ರಂಥಗಳು ಅಪ್ರಕಟಿತವಾಗಿವೆಯೆಂದು ಹೇಳುತ್ತಾರೆ. ಇತ್ತಲಾಗಿ "ಚಂದ್ರನಾಡೀ" ಮೊದಲಾದ ಗ್ರಂಥಗಳು ಬೆಳಕಿಗೆ ಬಂದಿವೆ. ಫಲಜ್ಯೋತಿಷದ ರಹಸ್ಯವೆಲ್ಲ ನಾಡೀಗ್ರಂಥಗಳಲ್ಲಿವೆಯೆಂದು ಹೇಳಲಾಗುತ್ತಿದೆ. ಪ್ರಕಟವಾದ ನಾಡೀಗ್ರಂಥವು ಆ ಬಗ್ಗೆ ಅಷ್ಟೇನೂ ಆಶಾದಾಯಕವಿಲ್ಲ. ಇನ್ನು ಅಪ್ರಕಟಿತ ಗ್ರಂಥಗಳಿಗೆ ಆ ಮಾನವನ್ನು ಸಲ್ಲಿಸಬಹುದೇ? ಸರ್ವಸಾಮಾನ್ಯ-ಪ್ರಚಲಿತವಿರುವ ಯಾವದೇ ಒಂದು ಗ್ರಂಥದಿಂದ ನೂರಕ್ಕೆ ನೂರರಷ್ಟು ಫಲಹೇಳುವ ಪರಿಸ್ಥಿತಿ ಕಂಡುಬರುವ

ದಿಲ್ಲ. ಅಲ್ಪಗ್ರಂಥಗಳನ್ನೋದಿದ ನನ್ನಂಥವನಿಗೆ ಅದು ಸಿಗಲಿಲ್ಲವೆನ್ನಬಹುದಾದರೂ ಇಡೀ ಆಯುಷ್ಯವನ್ನೇ ಫಲಜ್ಯೋತಿಃಶಾಸ್ತ್ರಕ್ಕಾಗಿ ಸವೆಸಿರುವ ಅನೇಕ ಜ್ಯೋತಿಷ್ಕರು ಜಗತ್ತಿನಲ್ಲಿಲ್ಲವೇ? ಯಾರೊಬ್ಬರೂ ಅಂಥಗ್ರಂಥೋಪಲಬ್ಧಿಗೆ ಯತ್ನಿಸಿರದೆ ಇರುವದು ಶಕ್ಯವೇ? ಹಾಗೆಂದು ರೂಪಾಯಿಗೆ ರೂಪಾಯಿ ಫಲವನ್ನು ಹೇಳುವವರೂ ಇಲ್ಲದೇ ಇಲ್ಲ. ಅದು ಯಾವ ರಹಸ್ಯವೋ? ಯಾರಿಗೆ ಗೊತ್ತು? ಪೂರ್ಣ ಭವಿಷ್ಯವನ್ನು ಹೇಳುವ ವಿದ್ಯೆಯು ಸಾರ್ವತ್ರಿಕವಾಗಿ ಗ್ರಂಥಗಳಿಂದ ಉಪಲಬ್ಧವಾದರೆ ಆಗ ಆ ಶಾಸ್ತ್ರವು ಪೂರ್ಣವಾದಂತೆಯೇ. ಮತ್ತೆ ಗ್ರಂಥನಿರ್ಮಿತಿಯ ಆವಶ್ಯಕತೆಯೇ ಇಲ್ಲ. ಪರಿಪೂರ್ಣವಾಗಿ ಹಾಗೆ ಸಾಮಾನ್ಯರಿಗೆ ಫಲ ಹೇಳಲು ಬರುತ್ತಿದ್ದರೆ ಇಂದು ಜಗತ್ತಿನ ಸ್ಥಿತಿಯೇ ಬದಲಾಗುತ್ತಿತ್ತು. ನಾಡೀಗ್ರಂಥದಂತೆಯಾದರೂ ಸಾಮಾನ್ಯ ಫಲವನ್ನು ಹೇಳಬೇಕಾದರೆ ಒಂದು ಜಾತಕಕ್ಕೆ ೧೮೦೦೦ ಅಂಶಗಳ ಪರಾಮರ್ಶೆಯಿಂದಲೇ ಸಾಧ್ಯ! ಅಷ್ಟು ಯೋಗಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವದು ಎಷ್ಟು ಕಠಿಣವೆಂಬದನ್ನು ಹೊಸದಾಗಿ ಹೇಳುವದು ಬೇಡ. ಕಠಿಣವಾದರೂ ಪೂರ್ಣ ಫಲ ಹೇಳಲು ಬರುತ್ತಿದ್ದರೆ ಅಡ್ಡಿ ಇಲ್ಲ. ಇದೆಲ್ಲ ಊಹೆಗೇಗವ್ಯ!!

॥ ಭೃಗುಸಂಹಿತಾ ॥

ಭೃಗುಸಂಹಿತೆಯೆಂಬ ಬೃಹದ್ಗ್ರಂಥದಲ್ಲಿ ಜಗತ್ತಿನ ಎಲ್ಲಾ ಜನರ ಕುಂಡಲಿ ಫಲಗಳನ್ನೂ ನೋಡಲಿಕ್ಕೆ ಸಿಗುವದೆಂದೂ ಜನ್ಮದಾರಭ್ಯ ಮರಣಪರ್ಯಂತ ಯಾವತ್ತೂ ಮಹತ್ವದ ಘಟನೆಗಳನ್ನೆಲ್ಲ ಕಂಡು ಕೊಳ್ಳಬಹುದೆಂದು ಹೇಳಲಾಗುತ್ತಿದೆ. ಇದೂ ಪೂರ್ಣನಿಜವೆನ್ನುವಂತಿಲ್ಲ. ಹಾಗಿದ್ದರೆ ಇದೂ ಅನನ್ಯ ಸನ್ಮಾನ್ಯಗ್ರಂಥವಾಗಿ ಬಿಡುತ್ತಿತ್ತು. ಆದರೆ ಇದು ನಿರುಪಯುಕ್ತವಾದ ಒಂದು ಗ್ರಂಥವೆಂದಭಿಪ್ರಾಯವಲ್ಲ. ಯಾವ ಗ್ರಂಥವಾದರೂ ಫಲ ಜ್ಯೋತಿಷಕ್ಕೆ ಸಹಾಯಕವೇ ಆಗುವದು. ಈ ಮಹಾಗ್ರಂಥದಲ್ಲಿ ಸಾವಿರಾರು ಕುಂಡಲಿಗಳಿರಬಹುದು. ಆದರೆ ಜಗತ್ತಿನ ಎಲ್ಲರ ಕುಂಡಲಿಗಳಿರಬೇಕಾದರೆ ಬೇರೆ ಬೇರೆ ಲಗ್ನಗಳಿಗೆ ಬೇರೆ ಬೇರೆ ಸ್ಥಾನಗಳಲ್ಲಿರುವ ಗ್ರಹರಮಾನದಿಂದ ೭೪೬೪೯೬೦೦ (ಸುಮಾರು ೭॥ ಕೋಟಿ) ಕುಂಡಲಿಗಳಿರಬೇಕಾಗುತ್ತದೆಂದು ಒಬ್ಬರು ಲೆಕ್ಕ ಹಾಕಿರುತ್ತಾರೆ. (ಶಂಕರ ಬಾಳಕೃಷ್ಣ ದೀಕ್ಷಿತರು ತಮ್ಮ ಭಾರತೀಯ ಜ್ಯೋತೀಷಾಸ್ತ್ರ) ಎಂಬ ಗ್ರಂಥದಲ್ಲಿ ಬರೆದಿರುವದನ್ನು ನೋಡಬಹುದು ಕಾಶ್ಮೀರ ಜಮ್ಮೂ ಸರಕಾರಿ ಪ್ರುಸ್ತಕಾಲಯದಲ್ಲಿರುವ ಭೃಗು ಸಂಹಿತೆಯಲ್ಲಿ

೧೬೦೦೦ ಶ್ಲೋಕಗಳು ೨೫೦೦ ಜಾತಕಗಳೂ ಇವೆಯೆಂದೂ ಅದೇ ದೀಕ್ಷಿತರು ಹೇಳುತ್ತಾರೆ.

॥ ಫಲಜ್ಯೋತಿಃಶಾಸ್ತ್ರದ ಅಪೂರ್ಣತೆ ॥

ಗ್ರಹಗೋಲಗಳ ಕಿರಣಪರಿಣಾಮವು ಪ್ರಾಣಿಮಾತ್ರದ ಮೇಲೆ ಆಗೇತೀರುವದೆಂಬುದು ನಿರ್ವಿವಾದ. ಚಂದ್ರನು ಮೂಡಿ ಮುಳುಗುವಾಗ ಭರತಿಯಾಗುವದು ಯಾರಿಗೆ ಗೊತ್ತಿಲ್ಲ. ರವಿಯು ಉದಿಸಿದ ಕೂಡಲೆ ಮುಕುಲಿತ ಕಮಲಗಳು ಯಾಕೆ ವಿಕಸಿತವಾಗುವವು? ಚಂದ್ರಕಿರಣ ಪರಿಣಾಮದಿಂದ ಚಂದ್ರಕಾಂತ ಶಿಲೆಯು ಒಸರುವದು ಯಾಕೆ? ಇವೆಲ್ಲ ವಸ್ತುಗಳ ಮೇಲೆ ಆಗುವ ಗೋಲಗಳ ಕಿರಣ ಪರಿಣಾಮವಲ್ಲವೇ? ಕಿರಣ ಪ್ರತಿಕ್ರಿಯೆಯು ಮನುಷ್ಯನ ಮೇಲೆ ಎಷ್ಟರ ಮಟ್ಟಿಗೆ ಹೇಗೆ ಆಗುತ್ತಿದೆಯೆಂಬುದನ್ನು ತಕ್ಕಷ್ಟು ಸೂಕ್ಷ್ಮವಾಗಿ ಕಂಡು ಹಿಡಿದದ್ದಕ್ಕಾಗಿ ಶಾಸ್ತ್ರಕಾರರಿಗೆ ನಾವು ಋಣಿಗಳು. ಫಲಜ್ಯೋತಿಷವು ಅಪೂರ್ಣವೆಂದು ಬಿಡದೆ ಸಂಶೋಧನ ಅನುಭವಗಳನ್ನು ಅಭ್ಯಸಿಸುವದು ನಮ್ಮ ಕರ್ತವ್ಯ. ನೂರಕ್ಕೆ ಎಪ್ಪತ್ತೈದರಷ್ಟು ಫಲವು ಸರಿಬರುತ್ತದೆಂದು ಪಾಶ್ಚಾತ್ಯ ಜ್ಯೋತಿಷ್ಕರು ಹೇಳುತ್ತಾರೆ. ಭಾರತೀಯರ ಫಲಜ್ಯೋತಿಷದಿಂದ ನೂರಕ್ಕೆ ೫೦-೬೦ ರಷ್ಟು ಫಲಹೇಳಲು ಬರುವದೆಂದೆನ್ನಲಾಗುತ್ತಿದೆ. ಆದರೆ ಫಲಜ್ಯೋತಿಷವು ಬರೀ ಸುಳ್ಳಿನ ಕಂತೆಯೆಂದು ಹೇಳುವವರಿದ್ದರೂ ಅದು ಅವರ ಆ ಶಾಸ್ತ್ರದ ಜ್ಞಾನದ ಅಭಾವವೆನ್ನಬಹುದು. ಮುಂದುವರಿದ ಅಮೇರಿಕಾ ಮೊದಲಾದ ರಾಷ್ಟ್ರಗಳಲ್ಲಿ ಫಲಜ್ಯೋತಿಷದ ಬಗ್ಗೆ ಅನೇಕ ಸಂಘ ಸಂಸ್ಥೆಗಳಿವೆಯೆಂದು ನೋಡಿದವರು ಹೇಳುತ್ತಾರೆ. ಹಾಗೆ ನೋಡಿದರೆ ನಮ್ಮತ್ತಲಾಗಿನ ಜೋಯಿಸರೇ ಬಹಳ ಹಿಂದುಳಿದಿರುತ್ತಾರೆ. ಎಷ್ಟೋ ಜ್ಯೋತಿಷ್ಕರಿಗಿರುವದೇ ಗ್ರಹಗೋಲನಕ್ಷತ್ರಾದಿಗಳ ಗುರುತುಸಹಾ ಇಲ್ಲ. ಏಳು ಗ್ರಹರನ್ನು ಇಪ್ಪತ್ತೇಳು ನಕ್ಷತ್ರಗಳನ್ನೂ ತೋರಿಸಿರಿ ಎಂದರೆ ಈಗ ಫಲಾಫಲ ಹೇಳುವ ಎಷ್ಟು ಜೋಯಿಸರು ತೋರಿಸಬಲ್ಲರು? ಎಷ್ಟೋ ಫಲಜ್ಯೋತಿಷಿಗಳಿಗೆ ಸೂರ್ಯ ಚಂದ್ರಾದಿಗಳ ಅಂತರಿಕ್ಷ ಗತಿಯು ಪಶ್ಚಿಮದಿಂದ ಪೂರ್ವಕ್ಕಿದೆಯೆಂಬುದು ಸಹಾ ಗೊತ್ತಿಲ್ಲ!! "ಶತಶ್ಲೋಕೇನಪಂಡಿತಃ" ಎನ್ನುವ ಹಾಗೆ ಗ್ರಹಗೋಲಗಳ ಪರಿಜ್ಞಾನವಿಲ್ಲದೆ ಸಂಹಿತಾದಿ ಗ್ರಂಥಗಳನ್ನು ನೋಡದೇ ಒಂದೆರಡು ಫಲಜ್ಯೋತಿಷ ಗ್ರಂಥಗಳನ್ನು ನೋಡಿಕೊಂಡು ಫಲಾಫಲ ಹೇಳುವ ಜೋಯಿಸರೇನೂ ಕಡಿಮೆಯಿಲ್ಲ. ಇಂಥ ಪರಿಸ್ಥಿತಿಗೆ ಕಾರಣವಿಲ್ಲದೆಯೂ ಇಲ್ಲ.

ಪರಿಶ್ರಮಕ್ಕೆ ತಕ್ಕ ಆಶ್ರಯ ಪ್ರತಿಫಲಗಳಿಲ್ಲ. ಇಡೀ ಆಯುಷ್ಯವನ್ನು ಶಾಸ್ತ್ರಾಭ್ಯಾಸದಲ್ಲಿ ಸವೆಸಿರುವವನ ಮತ್ತು ಶತಶ್ಲೋಕ ಪಂಡಿತನ ಸ್ಥಾನಮಾನದಲ್ಲಿ ಏನೂ ಹೆಚ್ಚುಕಡಿಮೆಯಾಗುವದಿಲ್ಲ. ಫಲಜ್ಯೋತಿಷಿಯ ಅರ್ಹತೆಯೇನು? ಇದರ ವಿಚಾರ ಮಾಡುವರ‍್ಯಾರು? ಶಾಸ್ತ್ರಜ್ಞರು ಏನನ್ನುತ್ತಾರೆ ನೋಡಿರಿ– "ಅನೇಕ ಹೋರಾತಂತ್ರಜ್ಞಃ ಪಂಚಸಿದ್ಧಾಂತಕೋವಿದಃ॥ ಊಹಾಪೋಹಪಟುಃ ಸಿದ್ಧಮಂತ್ರೋಜಾನಾತಿಜಾತಕಂ" ಅಂದರೆ–ಅನೇಕ ಹೋರಾಶಾಸ್ತ್ರಗಳನ್ನಭ್ಯಾಸಮಾಡುವನಿರಬೇಕು. ಖಗೋಲ, ಗಣಿತ, ಸಿದ್ಧಾಂತಗಳಲ್ಲಿ ನಿಷ್ಣಾತನಿರಬೇಕು. ಬುದ್ಧಿಶಾಲಿಯೂ ಆಗಿರಬೇಕು. ಮಂತ್ರ ಜಪಾದಿಗಳಲ್ಲಿ ಸಿದ್ಧಿ ಹೊಂದಿ ವಾಕ್ಯ ಸಿದ್ಧಿ ಪಡೆದವನಿರಬೇಕು. ಇಂಥವನೇ ಜಾತಕ ಫಲ ಹೇಳಲು ಅಧಿಕಾರಿ. ಅನಧಿಕಾರಿಗಳಲ್ಲಿ ಫಲಜ್ಯೋತಿಷವು ಸೇರಿದಲ್ಲಿ "ವಿಶ್ವಗುಣಾದರ್ಶ ಚಂಪೂ"ವಿನಲ್ಲಿ ಕೃಶಾನುಪ್ರೋಕ್ತ ಜ್ಯೋತಿಷಿಯಂತಾಗುವದು. "ವಿಲಿಖತಿ ಸದಸದ್ವಾಜನ್ಮಪತ್ರಂಜನಾನಾಂಫಲತಿಯದಿತದಾನೀಂ ದರ್ಶಯತ್ಯಾತ್ಮದಾಕ್ಷ್ಯಂ॥ ನ ಫಲತಿಯ ದಿಲಗ್ನಂದ್ರಷ್ಟುರೇ ವಾಹಮೋಹಂ ಹರತಿಧನಮಿಥ್ಯೈವಂ ಹಂತ! ದೈವಜ್ಞಪಾಶಃ॥ ಅಂದರೆ ಜನ್ಮ ಪತ್ರಿಕೆಯ ಶುಭಾಶುಭ ಫಲಗಳನ್ನು ಬರೆದನಂತರ ಬರೆದಂತೆ ಆಗದಿದ್ದರೆ ಲಗ್ನವು ತಪ್ಪಿದೆ ಎಂದೂ, ನಿಜವಾದರೆ ತನ್ನ ಭವಿಷ್ಯವು ಎಂದೂ ಸುಳ್ಳಾಗುವದಿಲ್ಲವೆಂದೂ ಜಾರಿಕೊಂಡು ಪ್ರತಿಷ್ಠೆ ಬೆಳೆಯಿಸಿ ಕೊಳ್ಳುವ ಜೋಯಿಸನು ಜನರ ಧನವನ್ನಪಹರಿಸುವ "ದೈವಜ್ಞಪಾಶ" ವೇ.

ಬಹಳಷ್ಟು ಕಲಿತವನ ಭವಿಷ್ಯಫಲವು ಕದಾಚಿತ್ ಸುಳ್ಳಾದರೂ ಚಿಂತೆಯಿಲ್ಲ. ಶಾಸ್ತ್ರಾಭ್ಯಾಸವಿಲ್ಲದವನ ಭವಿಷ್ಯವು ನಿಜವಾಗುವದು ಚಲೋದಲ್ಲ. ಯಾಕಂದರೆ ಶಾಸ್ತ್ರವನ್ನು ಬಿಟ್ಟು ಹೇಳಲಾಗದು. ಜ್ಯೋತಿಃಶಾಸ್ತ್ರದಲ್ಲಿ ಊಹಾಪೋಹಕ್ಕೆ ಅವಕಾಶವಿದ್ದರೂ, ಶಾಸ್ತ್ರಬಾಹಿರವಾಗಿ ಬುದ್ಧಿಯನ್ನೋಡಿಸಿದರೆ ಅದಕ್ಕೆ ನಿಲುಗಡೆಯೆಲ್ಲಿ? ಕಡಿವಾಣವಿಲ್ಲದ ಕುದುರೆಯ ಗತಿಯೇ ಆಗುವದು. ಶಾಸ್ತ್ರದಿಂದ ಎಷ್ಟು ಫಲವನ್ನು ಹೇಳಲು ಶಕ್ಯ? ಅದರ ಇತಿಮಿತಿಯೆಷ್ಟು? ಎಂಬದನ್ನು ಲಕ್ಷ್ಯದಲ್ಲಿಡಬೇಕಾಗುವದು. ಅಂತರ್ಜ್ಞಾನಿ, ಅಥವಾ ಯೋಗಸಿದ್ಧಿ ಹೊಂದಿದವ. ಇಲ್ಲವೇ ಕರ್ಣಪಿಶಾಚವನ್ನು ವಶಪಡಿಸಿಕೊಂಡವನು. ಬಹುಮಟ್ಟಿಗೆ ಭೂತ, ಭವಿಷ್ಯಫಲಗಳನ್ನು ಹೇಳಬಹುದು. ಇಂಥ ವಿಶಿಷ್ಟ ಜನರಿಂದ ಸಾಮಾನ್ಯ ಫಲಜ್ಯೋತಿಷಕ್ಕೇನೂ ಲಾಭವಾಗಲಾರದು. ಮೇಲೆ ಹೇಳಿದ ಭವಿಷ್ಯವಾದಿಗಳು ನಿಜವಾಗಿ ಜ್ಯೋತಿಷಗಳೇ ಅಲ್ಲ. "ಕುಹಕಾವೇಶಪಿಹಿತ್ಯೈಃ ಕರ್ಣೋಪಶ್ರುತಿಹೇತುಭಿಃ। ಕೃತಾದೇಶೋನಸರ್ವತ್ರ ಪ್ರಷ್ಟವ್ಯೋನಸ

ದೈವವಿತ್" ಎಂದು ವರಾಹ ಮಿಹಿರರೇ ಹೇಳಿರುವರು. ಅಧಿಕಾರ ವಾಣಿಯಿಂದ ಫಲಹೇಳಲು ಅಂಥ ಅಧಿಕಾರಿಯೇ ಆಗಬೇಡವೇ? ಅಂಥ ಶಿಕ್ಷಣ ಸಂಸ್ಥೆಗಳು ತಲೆಯೆತ್ತಿದಾಗಲೇ ಸುಧಾರಣೆ ಸಾಧ್ಯ.

॥ ಫಲಜ್ಯೋತಿಃಶಾಸ್ತ್ರದ ಇತಿ-ಮಿತಿ ॥

ಪೂರ್ಣ ಭವಿಷ್ಯಫಲವನ್ನಪೇಕ್ಷಿಸುವ ಪ್ರುಚ್ಛಕನೂ, ತಾನು ಸರ್ವಜ್ಞನೋ ಎನ್ನುವಂತೆ ಫಲಹೇಳುವ ಅಲ್ಪ ಜ್ಯೋತಿಷಜ್ಞನೂ, ಕೂಡಿಯೇ-ಶಾಸ್ತ್ರವನ್ನು ಹೊಂಡಕ್ಕೆ ತಳ್ಳುವರು. ಸಾಮಾನ್ಯ ಆಯುಷ್ಯದಲ್ಲಿಯ ಶುಭಾಶುಭಗಳನ್ನು ಗ್ರಹಗಳ ಭಾವಸ್ಥಿತಿ, ಯೋಗ ಇತ್ಯಾದಿಗಳಿಂದ ತಿಳಿಯಲಪೇಕ್ಷಿಸಬಹುದೇ ಹೊರತು ಪ್ರತಿಯೊಂದು ಘಟನೆಯನ್ನು ಚಾಚೂ ಬಿಡದೇ ತಿಳಕೊಳ್ಳುವ ಹವ್ಯಾಸವು ಕೊನೆಗೆ ನಿರಾಶಾಮಯವಾಗುವದು. ಜಾತಕ ಕುಂಡಲಿಯು ಮನುಷ್ಯನ ಯೋಗ್ಯತೆ, ಸ್ಥಾನ, ಮಾನ, ಮಾತಾಪಿತೃಗಳ ಸುಖ, ಕಳತ್ರಸೌಖ್ಯ, ಧನಯೋಗ, ದಾರಿದ್ರ್ಯಯೋಗ ಮೊದಲಾದವುಗಳ ಜ್ಞಾನಕ್ಕೆ ಉಪಯುಕ್ತವಾಗುವದು. ನೂರಕ್ಕೆ ಆರವತ್ತರಷ್ಟು ಖರೆಯಾಗುವದಾದರೂ, ಇಂಥ ವಿಷಯಗಳಲ್ಲೇ. ಇನ್ನು ದಿನಾಂಕ ಮೊದಲಾದ ವಿವರಗಳನ್ನು ಕೇಳಬಹುದೇ ಹೊರತು ಹಾಗೆ ಸಾಮಾನ್ಯ ಹೇಳಲು ಶಕ್ಯವಿಲ್ಲ. ಹಾಗೆ ಹೇಳಲಿಕ್ಕೆ ಬಂದರೆ, ಶಾಸ್ತ್ರವು ಪೂರ್ಣವೇ ಆಗುವದು. ಇಂಥದಿನ ವಿವಾಹವಾಗುವದು, ಇಂಥ ತಾರೀಖಿಗೆ ಲಾಟರಿಯಲ್ಲಿ ಧನ ಇಂತಿಷ್ಟು ಸಿಗುವದು, ಇಂತಿಷ್ಟನೇ ವರ್ಷ. ಇಂಥ ದಿನ ದಲ್ಲಿ ಪುತ್ರನು ಜನಿಸುವನು. ಈ ಮೊದಲಾದ ನಿರ್ದಿಷ್ಟ ಫಲಗಳನ್ನು ಬರೇ ಊಹಾಪೋಹಶಕ್ತಿಯಿಂದ ಹೇಳಲು ಬರಲಾರದು. ಸಾಮಾನ್ಯ ಆಯಾಯ ಸಂದರ್ಭಕ್ಕೆ ಕಾಲವು ಅನುಕೂಲವೋ? ಪ್ರತಿಕೂಲವೋ? ಎಂದು ಹೇಳಬಹುದು. ಹಿಂದಿನ ಜನ್ಮದ ಸುಕೃತ ದುಷ್ಕೃತಗಳಿಂದುಂಟಾಗುವ ಶುಭಾಶುಭ ಪರಿಣಾಮಗಳನ್ನು ಸೂಚಿಸುವದೇ "ಜಾತಕ"ವು. "ಯದುಪಚಿತ ಮನ್ಯಜನ್ಮನಿ ಶುಭಾಶುಭಂಕರ್ಮಣಃ ಪಕ್ತಿಂ। ವ್ಯಂಜಯತಿ ಶಾಸ್ತ್ರ)ಮೇತತ್" ಎಂಬ ಉಕ್ತಿಯಂತೆ ಜ್ಯೋತಿಃಶಾಸ್ತ್ರದ ಗುರಿಯೇ ಇದು.

ದುರೂಹ, ಹಾಗೂ ಗಹನವಾದ ಪ್ರಶ್ನೆಗಳನ್ನು ಉತ್ತರಿಸಿಯೇ ತೀರುವೆಂಬ ಹೆಮ್ಮೆಯು ಸಲ್ಲದು. .ಕೊನೆಗೆ ಏನಾದರೂ ಹೇಳಿ ಪಾರಾಗುವದಕ್ಕಿಂತ ತಿಳಿಯದ್ದನ್ನು ಗೊತ್ತಿಲ್ಲವೆಂದು ಹೇಳುವಲ್ಲಿ ಸಂಕೋಚವೇಕೆ? ಲಗ್ನ

ದಿಂದ ಸರಿಬಾರದಿದ್ದರೆ ಚಂದ್ರ ಲಗ್ನದಿಂದ, ಚಂದ್ರನಿಂದ ಸರಿಯಾಗದಿದ್ದರೆ, ಯಾವ ಗ್ರಹರು ಬಲಿಷ್ಠರೋ ಅವರ ಲಗ್ನದಿಂದ ಕೊನೆಗೂ ಸರಿಯಾಗದಿದ್ದರೆ, "ಪ್ರಶ್ನಮಾರ್ಗ" ದಲ್ಲೊಂದೆಡೆ ಹೇಳಿದಂತೆ. ಪೃಚ್ಛಕನ ದುರ್ದೈವ !! ಕೋವಕ್ತಾತಾರತಮ್ಯಸ್ಯ ತಮೇಕಂವೇಧಸಂವಿನಾ" ಎಂದು ಇದೇ ಜಾತಕ ಚಂದ್ರಿಕೆಯಲ್ಲಿದ್ದ ಗ್ರಂಥಕರ್ತನ ಉದ್ಗಾರವು ಲಕ್ಷಿಸುವಂಥದ್ದು. ಗ್ರಂಥಕರ್ತನೇ ಸೂಕ್ಷ್ಮವಾಗಿ ಪರಿಪೂರ್ಣ ಫಲಗಳನ್ನು ಹೇಳಲಿಕ್ಕಾಗುವದಿಲ್ಲ. ಎಂದು ಹೇಳಿದ ನಂತರ ಸಾಮಾನ್ಯ ಜ್ಯೋತಿಷ್ಕರ ಪಾಡೇನು ?

॥ ಭವಿಷ್ಯ ಕೇಳುವ ಆತುರತೆ ॥

ಭವಿಷ್ಯ ಫಲವನ್ನು ಕೇಳುವ ಪೃಚ್ಛಕನು ಪೂರ್ಣ ಫಲವನ್ನಪೇಕ್ಷಿಸಿ ಜೋಯಿಸರ ಕಡೆಗೆ ಹೋಗುವದು ಸಹಜ. ಫಲಕೇಳುವ ಆತುರತೆಯು ಯಾರಿಗಿಲ್ಲ? "ವನಂಸಮಾಶ್ರಿತಾಯೇಪಿನಿರ್ಮಮಾನಿಷ್ಪರಿಗ್ರಹಾಃ । ಅಪಿತೇಪರಿಪೃಚ್ಛಂತಿ ಜ್ಯೋತಿಷಾಂಗತಿಕೋವಿದಂ" ಅಂದರೆ ನಿರ್ಮಾನಮೋಹರಾದ ವಿರಕ್ತರಾದರೂ ತಮ್ಮ ಭವಿಷ್ಯ ಶ್ರವಣಕ್ಕಾಗಿ ಜ್ಯೋತಿಷಜ್ಞರ ಕಡೆಗೆ ಹೋಗುವರು. ಎಂದು ವರಾಹ ಮಿಹಿರರೇ ಒಂದುಕಡೆ ಹೇಳಿರುತ್ತಾರೆ. ಇಂಥ ಮಾನವನ ಸಹಜವೃತ್ತಿಯೇ ಇನ್ನೂ ಫಲಜ್ಯೋತಿಷವನ್ನುಳಿಸಿಕೊಂಡಿದೆ. ಮುಂದೂ ಉಳಿಸಿಕೊಳ್ಳುವದು. ಅಪೂರ್ಣ ಫಲಶ್ರವಣದಿಂದ ಜ್ಯೋತಿಷ್ಕರ ಮೇಲಿನ ಶ್ರದ್ಧೆಯೇನೂ ಕಡಿಮೆಯಾಗಲಾರದು. ಆದರೆ ಹೇಳುವವನು ಬರೇ ಊಹಾಪೋಹದಿಂದ ಶಾಸ್ತ್ರವನ್ನು ತಳ್ಳಿ ಕಥನಕ್ಕಿಳಿದು ಕೇಳುವವರನ್ನು ಮತ್ತಿಷ್ಟು ಮರುಳುಗೊಳಿಸುವದು ತರವಲ್ಲ. "ನಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ" ಎಂಬಂತೆ ಫಲಶಾಸ್ತ್ರದ ಮಿತಿಯನ್ನಷ್ಟೇ ಹೇಳದೇ ಪೂರ್ಣ ಭವಿಷ್ಯ ಕಥನದ ಹೊಣೆಗಾರಿಕೆಯನ್ನು ಹೊರಲಾಗದು.

॥ ಬೃಹತ್ಪರಾಶರಹೋರಾಶಾಸ್ತ್ರ ॥

ಸೂರ್ಯಃ ಪಿತಾಮಹೋವ್ಯಾಸೊವಸಿಷ್ಠೋತ್ರಿಃ ಪರಾಶರಃ ॥
ಕಶ್ಯಪೋನಾರದೋಗರ್ಗೋ ಮರೀಚಿರ್ಮನುರಂಗಿರಾಃ ।
ಲೋಮಶಃಪೌಲಿಶಶ್ಚೈವಚ್ಯವನೋಯವನೋಮಯಃ ।
ಶೌನಕೋಷ್ಟಾದಶಶ್ಚೈತೇಜ್ಯೋತಿಃಶಾಸ್ತ್ರಪ್ರವರ್ತಕಾಃ ॥

ಇತ್ಯಾದಿ ವಚನಗಳಿಂದ ಪರಾಶರ ಮುನಿಯೂ, ಜ್ಯೋತಿಃಶಾಸ್ತ್ರ ಪ್ರವ-
ರ್ತಕರಲ್ಲೊಬ್ಬನೆಂಬದು ನಿರ್ವಿವಾದ. ಪರಾಶರಕೃತ ಗ್ರಂಥವು "ಆರ್ಷ"
ವಾದ್ದರಿಂದ ಅಪ್ರಾಮಾಣ್ಯಕ್ಕೆಡೆಯಿಲ್ಲ. ಪರಾಶರನು ಸ್ಕಂಧತ್ರಯದಮೇಲೂ
ಗ್ರಂಥಗಳನ್ನು ಬರೆದಿರುವನೆಂದು ತಿಳಿಯಲಾಗುತ್ತದೆ. ಪರಾಶರ ಸಂಹಿತೆಯು
ಪ್ರಸಿದ್ಧವೇ ಇದೆ ಆಶ್ಚರ್ಯವೆಂದರೆ ಪರಾಶರ ಹೋರಾಶಾಸ್ತ್ರವು ಬಹುಕಾಲ
ಕೇವಲ ಬಹುಜ್ಯೋತಿಷ್ಕರಿಗೂ ತಿಳಿದಿರಲಿಲ್ಲ. "ಪಾರಾಶರೀಯಾಸಂಹಿತಾ ಪರಾಶರಸ್ಯೇತಿ.
ಮಸ್ಮಾಭಿರ್ದೃಷ್ಟಾ ನಜಾತಕಂ। ಶ್ರೂಯತೇಸ್ಕಂಧತ್ರಯಂ ಎಂಬದಾಗಿ ಬೃಹಜ್ಜಾತಕದಪ್ರಸಿದ್ಧ ಟೀಕಾಕಾರರಾದ ಭಟ್ಟೋತ್ಪಲರು ಹೇಳು
ತ್ತಾರೆ. ಪರಾಶರ ಹೋರಾ ಶಾಸ್ತ್ರವು ಭಟ್ಟೋತ್ಪಲರಂಥ ಘನಜ್ಯೋತಿಷಿಗಳಿಗೇ
ನೋಡಲು ಸಿಗಲಿಲ್ಲವೆಂದಮೇಲೆ ಅದು ಎಷ್ಟು ಗುಪ್ತವಾಗಿತ್ತೆಂದು ಹೇಳುವದೇ
ಬೇಡ. ಅದನ್ನು ಇತ್ತಲಾಗಿನ ಶ್ರೀಧರ ಜ್ಯೋತಿಷಿಯು ಹನ್ನೆರಡು ವರ್ಷ ಸತತ
ಅನ್ವೇಷಣ ನಡೆಸಿ ಪೂರ್ವಾರ್ಧ-ಉತ್ತರಾರ್ಧಗಳನ್ನೊಳಗೊಂಡ ಗ್ರಂಥವನ್ನು
ಪ್ರಕಟಿಸಿರುವನು. ಇದರಲ್ಲಿ ಪ್ರಕ್ಷಿಪ್ತವೆಷ್ಟು? ಮೂಲವೆಷ್ಟು? ಎಂದು ತಿಳಿಯಲೂ
ಶಕ್ಯವಿಲ್ಲ. ಮುಂಬಯಿಯ ವೆಂಕಟೇಶ್ವರ ಪ್ರೆಸ್ಸಿನಲ್ಲಿ ಶಕೆ ೧೮೭೩ರಲ್ಲಿ ಮೂರನೇ
ಮುದ್ರಣ ಪ್ರಕಟವಾಗಿದೆ. ಹೀಗೆ ಇನ್ನೆಷ್ಟು ಆರ್ಷಗ್ರಂಥಗಳು ಗೆದ್ದಲಿಯ ಪಾಲಾ
ಗಿವೆಯೋ ಹೇಳಲು ಬರುವಂತಿಲ್ಲ. ಅಚ್ಚಾದ ಪುಸ್ತಕವೂ ಅಪೂರ್ಣವೇ ಆಗಿದೆ.

"ಏವಂಹೋರಾಶತಾಧ್ಯಾಯೀಸರ್ವಪಾಪಪ್ರಣಾಶಿನೀ" ಎಂದು ಅದ
ರಲ್ಲೇ ಹೇಳಿರುವಂತೆ ನೂರು ಅಧ್ಯಾಯಗಳಿರಬೇಕು. ಇದರಲ್ಲಿ ಪೂರ್ವಖಂಡ
ಉತ್ತರಖಂಡಗಳೆಂಬೆರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ "ಸಸಹಸ್ರಾ
ಯುತೈರ್ಗ್ರಂಥೈರಶೀತ್ಯಧ್ಯಾಯ ಸಂಯುತೈಃ" ಎಂದು ಉಲ್ಲೇಖವಿದೆ. ಇದರ
ಪ್ರಕಾರ ಎಂಭತ್ತು ಅಧ್ಯಾಯಗಳೂ ಹತ್ತು ಸಾವಿರ ಶ್ಲೋಕಗಳೂ ಆಗಬೇಕು.
ಎರಡನೇ ಭಾಗದಲ್ಲಿ ಇಪ್ಪತ್ತು ಅಧ್ಯಾಯಗಳೂ ಎರಡು ಸಾವಿರ ಶ್ಲೋಕಗಳಾಗ
ಬೇಕು. ಅಂತೂ ನೂರು ಅಧ್ಯಾಯಗಳಿಂದ ಹನ್ನೆರಡು ಸಾವಿರ ಶ್ಲೋಕಗಳಾಗ
ಬೇಕು! ಪ್ರಕಟವಾದ ಪುಸ್ತಕದಲ್ಲಿ ಐದುಸಾವಿರ ಶ್ಲೋಕಗಳು ಮಾತ್ರ ಉಪಲ
ಬ್ಧವಿರುವವು. ಇನ್ನೇಳು ಸಾವಿರ? ಇದು ಮೂರನೇ ಆವೃತ್ತಿಯನ್ನು ಕಂಡರೂ
ಅಶುದ್ಧ ಭೂಯಿಷ್ಠವಾದದ್ದು ವಿಷಾದಕರ!

॥ ದಶಾವೈವಿಧ್ಯ ॥

ಫಲಜ್ಯೋತಿಷದಲ್ಲಿ ಕಾಲನಿರ್ಣಯಕ್ಕೆ ಬಹಳ ಮಹತ್ವವಿದೆ. ಅದು

ಅಷ್ಟೇ ತೊಡಕಿನದೂ ಹೌದು. ಗ್ರಹಗಳ-ಭಾವಸ್ಥಿತಿ, ಯೋಗಾದಿಗಳಿಂದ ಸಂತತಿ, ಧನಪ್ರಾಪ್ತಿ ಮೊದಲಾದವುಗಳನ್ನು ನಿರ್ದಿಷ್ಟಪಡಿಸಬಹುದಾದರೂ ಅದು ಯಾವ ಕಾಲದಲ್ಲಿ (ವರ್ಷಾದಿಗಳಲ್ಲಿ) ನಿಶ್ಚಯವಾಗಿ ಕಂಡುಬರುವದು? ಎಂಬದನ್ನು-ನಿರ್ಣಯಿಸಲಿಕ್ಕಾಗಿಯೇ ದಶಾಂತರ್ದಶಾ ಶಾಖೆಗಳು ಹೇಳಲ್ಪಟ್ಟವೆ. ಆದರೆ ಅವುಗಳಲ್ಲೂ ಅನೇಕ ಅಡಚಣಿಗಳು ಮುಂದೆ ನಿಲ್ಲುವವು. ಅವೇ ದಶಾವೈವಿಧ್ಯಗಳು. ಬೃಹತ್‌ಪರಾಶರಹೋರಾಶಾಸ್ತ್ರದಲ್ಲಿ ಈ ದಶಾಪ್ರಕರಣಕ್ಕಾಗಿ ೧೫ ಅಧ್ಯಾಯಗಳು ಖರ್ಚಾಗಿವೆ. ದಶಾಪ್ರಕರಣಕ್ಕಾಗಿ ಅನೇಕ ಗ್ರಂಥಗಳು ಪ್ರಸಿದ್ಧವಾಗಿವೆ. ಜಾತಕಪಾರಿಜಾತ, ಬೃಹಜ್ಜಾತಕ, ಜಾತಕಾದೇಶ, ಸಾರಾವಳೀ, ದಶಾಪ್ರದೀಪ, ಉಡುದಶಾದೀಪ ಮೊದಲಾದ ಗ್ರಂಥಗಳಲ್ಲಿ ದಶೆಗಳನ್ನು ವಿಸ್ತಾರವಾಗಿ ಕೊಟ್ಟಿರುವರು. "ಉಡುದಶಾದೀಪ"ದಲ್ಲಿ ಒಂದು ಕಾಲು ಲಕ್ಷ ಶ್ಲೋಕಗಳಿರುವಂತೆ! ತಂಜಾವೂರಿನಲ್ಲಿ ಅದು ಇರುವದೆಂದು ಹೇಳಲಾಗುತ್ತದೆ. ಒಂದೇ ಗ್ರಂಥದಲ್ಲಾದರೂ ದಶಾವೈವಿಧ್ಯಕ್ಕೆ ಕೊರತೆಯಿಲ್ಲ. ಬೃಹತ್ಪರಾಶರ ಹೋರಾಶಾಸ್ತ್ರವೊಂದರಲ್ಲೇ ನಾಲ್ವತ್ತೆರಡು ದಶೆಗಳಿರುವವು! ಕಾಲಚಕ್ರದಶಾ, ನೈಸರ್ಗಿಕದಶಾ, ಜೈಮಿನಿದಶಾ ಮೊದಲಾದ ಗ್ರಂಥಾಂತರ ದಶೆಗಳು ಅನೇಕವಿರುವವು. ಅವುಗಳನ್ನೆಲ್ಲ ವಿಸ್ತರಿಸುವದು ಇಲ್ಲ ಅಪ್ರಸ್ತುತ. ಪ್ರಸ್ತುತವಾದ ಪರಾಶರೀಯ ದಶೆಗಳ ಪರಾಮರ್ಶೆಯನ್ನು ಮಾತ್ರ ಇಲ್ಲಿ ದಿಗ್ದರ್ಶಿಸಲಾಗಿದೆ. ಪದ್ಧತಿ ಯಾವದಾದರೇನು? ನಿಶ್ಚಿತವಾದ ಒಂದು ಪದ್ಧತಿಯಲ್ಲಿ ಹೋದರೆ ಸರಿ.

ಪರಾಶರ ಶಾಸ್ತ್ರದಲ್ಲಿ ನಾಲ್ವತ್ತೆರಡು ದಶಾಭೇದಗಳಿದ್ದರೂ, ಅವಕ್ಕೆಲ್ಲ ಒಂದು ವ್ಯವಸ್ಥಿತ ರೂಪವನ್ನು ಕೊಡಲಾಗಿದೆ. "ಕೃಷ್ಣೇ ತುರವಿಹೋರಾಯಾಂ ಚಂದ್ರ ಹೋರಾಗತೇಸಿತೇ" (ಪು. ೨೧೫) ಅಂದರೆ ಕೃಷ್ಣಪಕ್ಷದಲ್ಲಿ ಸೂರ್ಯ ಹೋರೆಯಲ್ಲಿ ಜನಿಸಿದವನಿಗೆ ಅಥವಾ ಶುಕ್ಲಪಕ್ಷದಲ್ಲಿ-ಚಂದ್ರ ಹೋರೆಯಲ್ಲಿ ಜನಿಸಿದವನಿಗೆ "ವಿಂಶೋತ್ತರೀ" (೧೨೦) ದಶಾ ಪದ್ಧತಿಯಿಂದ ಫಲ ಹೇಳುವದು ಇತ್ಯಾದಿ. ಷೋಡಶೋತ್ತರಿ (೧೧೬) ದಶೆಯಲ್ಲಿ ರಾಹುವಿಗೆ ಸ್ಥಾನವಿಲ್ಲ. "ಸೂರ್ಯಹೋರಾಗತೇ ಶುಕ್ರೇ" ಇತ್ಯಾದಿ ವ್ಯವಸ್ಥೆಯನ್ನು ಹೇಳಲಾಗಿದೆ. "ದ್ವಾದಶೋತ್ತರೀ (೧೧೨) ದಶೆಯಲ್ಲಿ ರಾಹುಕೇತುಗಳಿಬ್ಬರಿಗೂ ಸ್ಥಾನವುಂಟು ಆಶ್ಚರ್ಯವೆಂದರೆ ಶುಕ್ರನನ್ನೇ ಬಿಟ್ಟು ಬಿಡಲಾಗಿದೆ! ದಶೆಯನ್ನು ಬಿಟ್ಟರೂ ಶುಕ್ರನ ನವಾಂಶದಲ್ಲಿ ಜನಿಸಿದವನಿಗೆ ಈ ದಶೆಯು ಅನ್ವಯಿಸುವದು. "ಅಷ್ಟೋತ್ತರೀ (೧೦೮) ದಶೆಯಲ್ಲಿ ಕೇತುವಿಗೆ ಸ್ಥಾನವಿಲ್ಲ. "ಲಗ್ನೇಶಾತ್ ಕೇಂದ್ರಕೋ

ಆಷ್ಟೋತ್ತರೀದ್ವಿಧಾಪ್ರೋಕ್ತಾ ಶಿವಾದ್ಯಾಕೃತ್ತಿಣಸ್ಥೇ ರಾಹೌಲಗ್ನೇಸ್ಥಿತಂವಿನಾ! ಆಷ್ಟೋತ್ತರೀದ್ವಿಧಾಪ್ರೋಕ್ತಾ ಶಿವಾದ್ಯಾಕೃತ್ತಿ ತ್ರಿಕೋಣಾದಿತಃ॥ ರಾಹುವು ಲಗ್ನಾಧಿಪತಿಯಿಂದ-ಕೇಂದ್ರ ಅಥವಾ ತ್ರಿಕೋಣದಲ್ಲಿರುವಾಗ ಈ ದಶಾ ಪದ್ಧತಿಯ ವಿನಿಯೋಗವು. ಇದರಂತೆ "ಪಂಚೋತ್ತರೀ (೧೦೫) ಶತಾಬ್ದಿಕಾ (೧೦೦) ಚತುರಶೀತ್ಯಬ್ದಿಕಾ (೮೪) ದ್ವಿಸಪ್ತತಿಕಾ (೭೨) ಷಷ್ಟಿಹಾಯನೀ (೬೦) ಈ ಮೊದಲಾದ ದಶೆಗಳೆಲ್ಲ ಜಾತಕ ಭೇದದಿಂದ ವ್ಯವಸ್ಥೆಗೊಳಿಸಲ್ಪಟ್ಟವೆ. ಹೀಗೆ ಪರಾಶರ ಮತವಿದ್ದರೂ, ನಮ್ಮಲ್ಲಿ ಈ ಪದ್ಧತಿಯಿಂದ ದಶಾಫಲಗಳನ್ನು ಹೇಳುವ ಜೋಯಿಸರೆಷ್ಟುಮಂದಿ?

"ಲಘುಪಾರಾಶರಿ" ಎಂಬದೊಂದು ಗ್ರಂಥವು ಕೇವಲ ಪರಾಶರ ಮತಾನುಸಾರಿಯೆನ್ನಿಸಿಕೊಂಡರೂ "ದಶಾವಿಂಶೋತ್ತರೀ ಚಾತ್ರಗ್ರಾಹ್ಯಾನಾಷ್ಟೋತ್ತರೀ ದಶಾ" ಅಂದರೆ ವಿಂಶೋತ್ತರೀಅಷ್ಟೋತ್ತರೀ-ದಶೆಗಳಲ್ಲಿ- ಅಷ್ಟೋತ್ತರಿಯನ್ನು ಬಿಟ್ಟು ವಿಂಶೋತ್ತರಿಯನ್ನೇ ಗ್ರಾಹ್ಯಮಾಡಬೇಕೆಂದಿದೆ. ಹೀಗೆ ಬರೆಯಬೇಕಾದರೆ. ವಿಂಶೋತ್ತರೀ-ಅಷ್ಟೋತ್ತರೀ-ಹೀಗೆ ಎರಡೇ ದಶೆಗಳಿವೆಯೆಂಬ ಅಭಿಪ್ರಾಯಪಟ್ಟಂತೆ ಕಾಣುತ್ತದೆ. ಇದು ಪಾರಾಶರಹೋರಾಶಾಸ್ತ್ರವನ್ನು ಅನುಸರಿಸಿದಂತಾಗುವದೇ? ಗೌರೀಜಾತಕವೆಂಬ ಗ್ರಂಥದಲ್ಲಿ ಶಿವನು ಸಾಕ್ಷಾತ್ ಪಾರ್ವತಿಗೆ ಹೇಳಿದ್ದರಿಂದ ಅಷ್ಟೋತ್ತರಿಯೇ ಗ್ರಾಹ್ಯವೆಂದಿದೆ. ದೇಶಭೇದಗಳಿಂದ-ಇವುಗಳನ್ನು ಪಯೋಗಿಸಬೇಕೆಂದಿರುವ ಮಧ್ಯಸ್ಥರೂ ಅನೇಕರಿದ್ದಾರೆ! "ನಮ್ಮೀ ಜಾತಕಚಂದ್ರಿಕೆಯೂ "ಪಾರಾಶರೀ-ಹೋರೆಯನ್ನೇ ಅನುಸರಿಸಿದ್ದೆಂದು "ವಯಂಪಾರಾಶರೀಂಹೋರಾಮನುಸೃತ್ಯ" ಎಂದಿರುವದರಿಂದ ಪರಾಶರಾನುಸಾರಿಯೆಂಬದು ಸ್ಪಷ್ಟ. ಆದರೂ ನಮ್ಮಲ್ಲಿಯ ಚಂದ್ರಿಕಾಭಿಮಾನಿಜ್ಯೋತಿಷಿಗಳು ಜಾತಕ ಭೇದದಿಂದ ದಶಾಫಲ ಹೇಳುವದನ್ನು ಬಿಟ್ಟು ಬರೀ ವಿಂಶೋತ್ತರಿಯನ್ನೇ ಅನುಸರಿಸುವದು ಆಶ್ಚರ್ಯಕರವಾದರೂ, ವಿಂಶೋತ್ತರಿಯು ಬಹು ಜ್ಯೋತಿಷಜ್ಞರ ಸಮ್ಮತವೆಂಬದು ಸತ್ಯ.

ಜಾತಕಚಂದ್ರಿಕೆ

"ಲಘುಪಾರಾಶರಿ" ಉಡುದಾಯಪ್ರದೀಪ" ಜಾತಕಚಂದ್ರಿಕೆ" ಈ ಮೂರು ಗ್ರಂಥಗಳೂ ಸ್ವಲ್ಪ ಹೆಚ್ಚುಕಡಿಮೆ ಒಂದೇ ಗ್ರಂಥವೆನ್ನಬಹುದು. ಈ ಜಾತಕ ಚಂದ್ರಿಕೆಯು ಸಣ್ಣ ಗ್ರಂಥವಾದರೂ, ಗಂಭೀರಾರ್ಥವುಳ್ಳದ್ದೂ, ಊಹಾಪೋಹಗಳಿಗೆ ಸಾಕಷ್ಟು ಅವಕಾಶವುಳ್ಳದ್ದೂ ಆಗಿರುವದರಿಂದ ಜ್ಯೋತಿಷಿಗಳಿಗೆ ಅತ್ಯುಪ

ಯುಕ್ತವಾದ "ಕೈಪಿಡಿ" ಎನ್ನಬಹುದಾಗಿದೆ. ಶ್ರೀ ವೆಂಕಟೇಶ್ವರಾರ್ಯೇಣರಚಿತಾ" ಎಂಬದಾಗಿ ಕೊನೆಯಲ್ಲಿ ಹೇಳಿರುವದರಿಂದ ವೆಂಕಟೇಶದೀಕ್ಷಿತರೆಂಬವರು ಬರೆದಿರುವರೆಂದು ಸಕೃದ್ದರ್ಶನಕ್ಕೆ ಬಂದರೂ ಅದು ನಿಜವೆನ್ನುವಂತಿಲ್ಲ. "ಉಡುದಾಯಪ್ರದೀಪ" ಇಲ್ಲವೆ "ಲಘುಪಾರಾಶರೀ" ಎಂಬದಾಗಿ-ಮಹಾರಾಷ್ಟ್ರ ಹಾಗೂ ಉತ್ತರ ಪ್ರಾಂತಗಳಲ್ಲಿ ಪ್ರಚಾರದಲ್ಲಿವೆ. ಲಘುಪಾರಾಶರಿಯ ಟೀಕೆಯಲ್ಲಿ "ಪರಾಶರ ಮುನಿಕೃತ" ಎಂದಿದೆ. ವೆಂಕಟೇಶ್ವರರ ಹೆಸರಿಲ್ಲ. ಲಘುಪಾರಾಶರಿ ಅಥವಾ "ಉಡುದಾಯ ಪ್ರದೀಪ" ದಲ್ಲಿ ಮಂದಸೌಮ್ಯಸಿತಾಃಪಾಪಾಃ ಇತ್ಯಾದಿ ಪ್ರತಿಲಗ್ನಕ್ಕೆ ತಾರಕಮಾರಕತ್ವವನ್ನು ಹೇಳಿದ ಸುಮಾರು ೨೫ ಶ್ಲೋಕಗಳಿರುವದಿಲ್ಲ. ಈ ಶ್ಲೋಕಗಳು "ಮಧ್ಯಪಾರಾಶರೀಯ" ವೆಂಬ ಮತ್ತೊಂದು ಪುಸ್ತಕದಲ್ಲಿ ಬರೆಯಲಾಗಿದೆ. ಆದರೆ ಇವು ಬೃಹತ್ಪಾರಾಶರ ಹೋರಾಶಾಸ್ತ್ರದಲ್ಲಿರುವವರಿಂದ "ಪಾರಾಶರೀಯ" ವೆಂದೇ ಹೇಳಬೇಕಾಗುವದು. ಈ "ಚಂದ್ರಿ"ಕೆಯಾದರೂ ಅವುಗಳಂತೆ ಪಾರಾಶರೀಯ" ವೆಂದೇ ತೋರುವದು. ತಾರಕ-ಮಾರಕಾದಿ ವಿಷಯಗಳ ಶ್ಲೋಕಗಳು ಸ್ವಲ್ಪ ಹೆಚ್ಚುಕಡಿಮೆ ಬೃಹತ್ಪರಾಶರ ಶಾಸ್ತ್ರದಲ್ಲಿರುವಂತೆಯೇ ಇವೆ. ಅಂತೂ ಇದು ದೀಕ್ಷಿತರು ಬರೆದ ಸ್ವತಂತ್ರ ಗ್ರಂಥವಲ್ಲ. ಅವರು ಸಂಗ್ರಹಿಸಿ ಪ್ರಚಾರ ಮಾಡಿದವರಿರಬೇಕು. ಅಷ್ಟೇ ಪರಾಶರ ಹೋರಾಶಾಸ್ತ್ರವು "ಆರ್ಷ" ವಿರುವದರಿಂದ ತದನುಸಾರಿಯಾದ ಈ ಗ್ರಂಥವೂ "ಆರ್ಷ" ದಂತೆ ಪ್ರಮಾಣ್ಯಕ್ಕೆ ಅರ್ಹವಾದದ್ದೇ. ಇದರಲ್ಲಿ ಬರೀ ೭೮ ಶ್ಲೋಕಗಳಿರುವದರಿಂದ ಪಾಠಪ್ರವಚನಕ್ಕೆ ಹಗುರಾಗಿರುವದು. ನಮ್ಮತ್ತ ಕಡೆಯಲ್ಲಿರುವ ಕೈಬರೆಹದ ಪ್ರತಿಗಳೂ,ಅಚ್ಚಾದ ಪುಸ್ತಕಗಳೂ ಸಹ ಅಶುದ್ಧ ಭೂಯಿಷ್ಠಗಳಾಗಿವೆ. ಆದರಿಂದ ಅನ್ವಯಿಸಿ ಅರ್ಥಮಾಡುವದು ಕಠಿಣ. ಆದರೂ ಹೊಂದಿಕೆಯಾಗುವದಿಲ್ಲ. ಕಾರಣ ಮೊದಲು ಶ್ಲೋಕ ಶುದ್ಧೀಕರಣಕ್ಕೆ ತೊಡಗಿದೆ. ಅನ್ವಯಾರ್ಥಕ್ಕೆ ಸರಿಬರುವಂತೆ ಟೀಕೆಯನ್ನು ರಚಿಸಿದ್ದಾಯಿತು. ಆದರೆ ಶ್ಲೋಕಾರ್ಥವು ಸ್ಪಷ್ಟವಾಗುವಂತಿಲ್ಲವಾದ್ದರಿಂದ ವಿಶೇಷ ವಿವರಣವನ್ನು-ಸಂಶೋಧನಾತ್ಮಕವಾಗಿ-ಸೋದಾಹರಣವಾಗಿ ಬರೆದಿರುವೆನು. ಎಲ್ಲಿಯಾದರೂ ಶ್ಲೋಕಾಕ್ಷರದಲ್ಲಿ ಅಶುದ್ಧವಾಗಿದ್ದರೆ ಅದು ಮುದ್ರಣದೋಷವೆಂದೆಣಿಸಬೇಕೇ ಹೊರತು ವಸ್ತುತಃ ಶುದ್ಧಗಳೇ ಇರುವವೆಂದು ತಿಳಿಯತಕ್ಕದ್ದು. ಈ ವಿಷಯದಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾಗಿದ್ದೇನೆಂದು ಬರೆಯಲು ಸಂತೋಷವಾಗುತ್ತಿದೆ. "ಬೃಹತ್ ಪಾರಾಶರಹೋರಾಶಾಸ್ತ್ರ" ಇದರ ಸಲುವಾಗಿಯೇ ತರಿಸಿ ಅವಲೋಕಿಸಿ ಸಾಧಕಬಾಧಕಗಳನ್ನೂ ವಿಷಯ ವೈವಿಧ್ಯವನ್ನೂ ಅಲ್ಲಲ್ಲಿ ವಿವರಣದಲ್ಲಿ ಕೊಟ್ಟರುವೆನು. ಇನ್ನೂ ಎಷ್ಟೋ ಗ್ರಂಥಗಳನ್ನವಲೋಕಿಸಬೇಕಾಗಿ ವರ್ಷಗಟ್ಟಲೆ ಕಾಲ

॥ ಶ್ರೀ ॥

॥ಶ್ರೀ ಗಣೇಶಾಯ ನಮಃ॥

ಶುಭಮಸ್ತು

॥ಜಾತಕ ಚಂದ್ರಿಕಾ॥

(ಅಧ್ಯಾಯ ೧)

ಸಿದ್ಧಾಂತಮೌಪನಿಷದಂ ಶುದ್ಧಾಂತಂ ಪರಮೇಷ್ಠಿನಃ॥
ವೀಣಾಧರಂಮಹಃ ಕಿಂಚಿಚ್ಛೋಣಾಧರಮುಪಾಸ್ಮಹೇ ॥ ೧ ॥

ಟೀಕಾಃ- ವೇದಾಂತಪ್ರತಿಪಾದ್ಯವಾದ ಬ್ರಹ್ಮನ ಅಂತಃಪುರರೂಪವಾದ (ಪತ್ನಿಯಾದ) ವೀಣೆಯನ್ನು ಧರಿಸಿರುವ ಕೆಂಪಾದ ತುಟಿಯುಳ್ಳ ಅನಿರ್ವಚನೀಯವಾದ ತೇಜಸ್ಸನ್ನು ಧ್ಯಾನಿಸುವೆವು. ಅರ್ಥಾತ್ ಸರಸ್ವತೀ ದೇವಿಯನ್ನು ಉಪಾಸನೆ ಮಾಡುವೆವು.

ವಿವರಣಃ- ಸಮಾಪ್ತಿ ಕಾಮೋಮಂಗಲಮಾಚರೇತ್. ಅಂದರೆ ನಿರ್ವಿಘ್ನದಿಂದ ಗ್ರಂಥ ಸಮಾಪ್ತಿಮಾಡಬೇಕೆಂಬುವನು ಪ್ರಥಮದಲ್ಲಿ ಮಂಗಲವನ್ನು ಮಾಡಬೇಕೆಂಬ ಉಕ್ತಿಗನುಸಾರ ಗ್ರಂಥಕರ್ತನು ಇಷ್ಟದೇವತೆಯಾದ ಸರಸ್ವತೀ ದೇವಿಯನ್ನು ಪ್ರಾರ್ಥಿಸುತ್ತಾನೆ. ಪರಮಾತ್ಮನು ವಾಸ್ತವ ನಿರಾಕಾರನಾದರೂ ಭಕ್ತರ ಉಪಾಸನೆಗಾಗಿ ಸಾಕಾರನೂ ಆಗುವನು. ಸರಸ್ವತೀ ಎಂಬ ಬ್ರಹ್ಮನ ರಾಣಿಯ ಆಕಾರ ವಿಶೇಷವು ಶುದ್ಧ ಬ್ರಹ್ಮ ವಸ್ತುವೇ ಆದ್ದರಿಂದ ವೇದಾಂತದ ಸಿದ್ಧಾಂತ (ಪರವಸ್ತು) ಅದು ಪ್ರಕಾಶ ರೂಪವಾದದ್ದು. (ಚಿದ್ರೂಪ) ಅನಿರ್ವಚನೀಯ ತೇಜಸ್ಸು ಸಾಕಾರೋಪಾಸಕರಾದ ಭಕ್ತರು ತಂತಮಗೆ ಇಷ್ಟವಾದ ರೂಪವನ್ನಾರಾಧಿಸಿದರೆ ಆ ರೂಪದಿಂದಲೇ ಪರಮಾತ್ಮನು ಫಲವನ್ನು ಕೊಡುವನು. "॥ಯೋಯೋಯಾಂಯಾಂತನುಂಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ॥" (ಗೀತಾ) ಇಲ್ಲಿ ಬಹುವಚನವು ಮುಂದಿನ ಶ್ಲೋಕದ "ವಯಂ" ಎಂಬದಕ್ಕೆ ಅನ್ವಯಿಸುವದು. ॥೧॥

ಶ್ಲೋ. ಫಲಾನಿನಕ್ಷತ್ರದಶಾಪ್ರಕಾರೇಣವಿವೃಣ್ಮಹೇ॥
ವಯಂಪಾರಾಶರೀಂಹೋರಾಮನುಸೃತ್ಯಯಥಾಮತಿ ॥ ೨ ॥

ಟೀ:- ನಾವೀಗ್ರಂಥದಲ್ಲಿ ಪರಾಶರಹೋರಾಶಾಸ್ತ್ರವನ್ನಾಧರಿಸಿ ಬುದ್ಧಿ
ಶಕ್ತ್ಯನುಸಾರವಾಗಿ ನಕ್ಷತ್ರದಶಾಪದ್ಧತಿಯಿಂದ ಫಲಗಳನ್ನು ವಿವರಿಸುವೆವು.

ವಿವರಣ:- ಫಲಾದೇಶಕ್ಕೆ ಅನೇಕ ಗ್ರಂಥಗಳೂ ಅನೇಕ ರೀತಿಗಳೂ ಇವೆ.
ಆದರೂ ಪರಾಶರರಂಥ ಮಹರ್ಷಿಗಳು ವಿಶೇಷವಾಗಿ "ದಶೆ"ಗಳ ಮೇಲಿಂದ ಫಲ
ಗಳನ್ನು ಹೇಳಿರುವರು. ''ನಕ್ಷತ್ರದಶಾ'' ಎಂದರೆ ಬರೇ ವಿಂಶೋತ್ತರೀ
ಎಂದೇನೂ ಅರ್ಥವಲ್ಲ. ''ಅಷ್ಟೋತ್ತರೀ'' ಮೊದಲಾದ ದಶೆಗಳೂ ನಕ್ಷ
ತ್ರಗಳಿಂದಲೇ ಬರುವವು. ನಮ್ಮಲ್ಲಿಯ ರೂಢಿಗನುಸಾರ ''ವಿಂಶೋತ್ತರೀ''
ಎಂಬುದೇ ವಿವಕ್ಷಿತನೆನ್ನಲಡ್ಡಿಯಿಲ್ಲ. ಈ ಗ್ರಂಥ-ಸ್ವರೂಪವೇ ಆದ ''ಉಡು
ದಾಯಪ್ರದೀಪದಲ್ಲಿ'' "ದಶಾವಿಂಶೋತ್ತರೀಚಾತ್ರ" ಎಂದು ಕಂಠೋಕ್ತವಾಗಿ ॥ ೨ ॥
ಯೇ ಹೇಳಿದೆ.

ಶ್ಲೋ:- ಬುಧೈರ್ಭಾವಾದಯಃ ಸರ್ವೇಜ್ಞೆಯಾಃ ಸಾಮಾನ್ಯಶಾಸ್ತ್ರತಃ॥
ಏತಚ್ಛಾಸ್ತ್ರಾನುಸಾರೇಣ-ಸಂಜ್ಞಾಂಬ್ರೂಮೋವಿಶೇಶತಃ ॥ ೩ ॥

ಟೀ:- ಲಗ್ನಾದಿಭಾವ, ಮೊದಲಾದವುಗಳನ್ನೆಲ್ಲ ಸಾಮಾನ್ಯ ಜ್ಯೋತಿಃ
ಶಾಸ್ತ್ರಗಳ ಮೂಲಕ ತಿಳಿದುಕೊಳ್ಳುವದು. ಈ ಪರಾಶರ ಶಾಸ್ತ್ರದಲ್ಲಿ ವಿಶೇಷ
ಸಂಜ್ಞೆಗಳನ್ನು ಹೇಳುತ್ತೇವೆ.

ವಿವರಣ:- ಲಗ್ನಾದಿಭಾವಗಳು,ಮೇಶಾದಿ ರಾಶಿಗಳು,ಕೇಂದ್ರತ್ರಿಕೋಣ,
ಪಣಪರ ಇತ್ಯಾದಿಗಳು, ಉಪಚಯ, ಲಗ್ನ,ಹೋರಾದಿಗಳು, ರಾಶಿಸ್ವಭಾವಾದಿ
ಗಳು, ಸೂರ್ಯಾದಿಗ್ರಹರು, ಹಾಗೂ ಕಾರಕತ್ವ ಮೊದಲಾದ ವಿಶೇಷಗಳು,
ಈ ಸಂಜ್ಞೆಗಳೆಲ್ಲವೂ ಫಲಾದೇಶಕ್ಕೆ ಅಗತ್ಯವಾದವುಗಳೇ. ಅವುಗಳನ್ನೆಲ್ಲ ಈ
ಚಿಕ್ಕ ಗ್ರಂಥದಲ್ಲಿ ವಿವರಿಸುವದು ಶಕ್ಯವಿಲ್ಲ. ಕಾರಣ ಅವುಗಳನ್ನೆಲ್ಲ ಸಾಮಾನ್ಯ
ಮುಹೂರ್ತ ಗ್ರಂಥಗಳಿಂದಲೂ ಬೃಹಜ್ಜಾತಕಾದಿ ಶಾಸ್ತ್ರಗಳಿಂದಲೂ ತಿಳಕೊಳ್ಳು
ವದು. ಈ ಗ್ರಂಥದಲ್ಲಿ ವಿಶೇಷ ಸಂಜ್ಞೆಗಳನ್ನು ಮಾತ್ರ ಹೇಳುತ್ತೇವೆ. ಅನ್ಯ
ಗ್ರಂಥಗಳಲ್ಲಿ ಹೇಳದಿರುವ ಪರಂತು ಫಲಾದೇಶಕ್ಕೆ ಅತ್ಯಗತ್ಯವಾದ, ತಾರಕಮಾ
ರಕಮೊದಲಾದ ವಿಶೇಷಸಂಜ್ಞೆಗಳನ್ನು ನಾವು ಹೇಳುತ್ತೇವೆ. ಎಂದರ್ಥ ॥ ೩ ॥

ಶ್ಲೋ: ಪಶ್ಯಂತಿಸಪ್ತಮಂಸರ್ವೇಶನಿಜೀವಕುಜಾಃಪುನಃ॥
ವಿಶೇಷತಶ್ಚತ್ರಿದಶತ್ರಿಕೋಣಚತುರಷ್ಟಮಾನ್ ॥ ೪ ॥

ಟೀ:- ಸಾಮಾನ್ಯ ಎಲ್ಲಾ ಗ್ರಹೆಗಳು ತಾವಿದ್ದ ಸ್ಥಾನದಿಂದ ಏಳನೇಸ್ಥಾನ
ವನ್ನು ನೋಡುತ್ತಾರೆ. ಶನಿ, ಗುರು, ಕುಜರು ಮಾತ್ರ ಅನುಕ್ರಮವಾಗಿ ೩-೧೦।
೫-೯। ೪-೮। ಈ ಸ್ಥಾನಗಳನ್ನು ವಿಶೇಷ ದೃಷ್ಟಿಯಿಂದ ನೋಡುತ್ತಾರೆ.

ವಿವರಣ:- ಶನಿ, ಗುರು, ಕುಜರಿಗೆ ಸಾಮಾನ್ಯ ಸಪ್ತಮ ಸ್ಥಾನವಲ್ಲದೇ
ಬೇರೆ ಸ್ಥಾನಗಳಲ್ಲಿ ವಿಶೇಷ ದೃಷ್ಟಿಯಿದೆ. ಶನಿಯು ತಾನಿದ್ದ ಸ್ಥಾನದಿಂದ
ಮೂರನೇ-ಮತ್ತು ಹತ್ತನೇ ಸ್ಥಾನಗಳನ್ನೂ, ಗುರುವು ತ್ರಿಕೋಣ ಅಂದರೆ ತಾನಿ
ದ್ದ ಸ್ಥಾನದಿಂದ ಐದು ಒಂಬತ್ತನೇ ಸ್ಥಾನಗಳನ್ನೂ, ಕುಜನು ನಾಲ್ಕನೇ-ಎಂಟ
ನೇ ಸ್ಥಾನಗಳನ್ನೂ ವಿಶೇಷವಾಗಿ ನೋಡುತ್ತಾನೆ. ಉದಾಃ ಮಿಥುನದಲ್ಲಿ ಶನಿ
ಯಿದ್ದನೆಂದು ತಿಳಿಯಿರಿ. ಆಗ ಆ ಮಿಥುನದ ಮೂರನೇದಾದ ಸಿಂಹವನ್ನೂ
ಹತ್ತನೇದಾದ ಮೀನ ರಾಶಿಯನ್ನೂ ವಿಶೇಷವಾಗಿ ನೋಡುತ್ತಾನೆ. ಇದ
ರಂತೆ ಮೇಷದಲ್ಲಿ ಗುರುವು ಇದ್ದನೆಂದು ತಿಳಿಯಿರಿ. ಆಗ ಅದರ ತ್ರಿಕೋಣಗ
ಳಾದ ಐದನೇರಾಶಿ ಸಿಂಹವನ್ನೂ ಒಂಬತ್ತನೇದಾದ ಧನುವನ್ನೂ ವಿಶೇಷವಾಗಿ
ನೋಡುತ್ತಾನೆ. ಈ ದೃಷ್ಟಿವಿಷಯದಲ್ಲಿ ಅನೇಕ ಮತಭೇದಗಳಿವೆ. ''ಮುಹೂ
ರ್ತಮಾಧವ"ದಲ್ಲಿ ಸೌರಿಸ್ತ್ರ್ಯತೀಯದಶಾಮೌಗುರುಸ್ತ್ರಿಕೋಣಂ ಕುಜಸ್ತುಚತು
ರಶ್ರಂ। ಪಶ್ಯತಿಸಮಗ್ರಮಿತರೇ ಚರಣವಿವೃಧ್ಯಾಥಸಪ್ತಮಂಸರ್ವೇ ಅಂದರೆ
ಹಿಂದೆ ಹೇಳಿದಂತೆ ವಿಶೇಷ ದೃಷ್ಟಿ ಸರಿ. ಆದರೆ ರವಿ, ಚಂದ್ರ, ಬುಧ, ಶುಕ್ರರು
ಮೂರು-ಹತ್ತನೇ ಸ್ಥಾನಗಳನ್ನು ಪಾದ ದೃಷ್ಟಿಯಿಂದಲೂ ಐದು-ಒಂಭತ್ತನೇ
ಸ್ಥಾನಗಳನ್ನು ಅರ್ಧದೃಷ್ಟಿಯಿಂದಲೂ ನಾಲ್ಕು ಎಂಟನೇ ಸ್ಥಾನಗಳನ್ನು ಮುಕ್ಕಾ
ಲು ದೃಷ್ಟಿಯಿಂದಲೂ ನೋಡುತ್ತಾರೆ. ಸಪ್ತಮ ಸ್ಥಾನವನ್ನು ಎಲ್ಲಾ ಗ್ರಹಗಳು
ಪೂರ್ಣವಾಗಿ ನೋಡುತ್ತಾರೆ. ಇದರಂತೆ ಬೃಹಜ್ಜಾತಕಾದಿಕಳಲ್ಲೂ ಹೇಳಿದೆ.
ಇಷ್ಟಲ್ಲದೇ ಬೃಹತ್ ಪರಾಶರಹೋರಾಶಾಸ್ತ್ರದಲ್ಲಿ ಸಹ ಪಾದವಿಭಾಗದಿಂದ
ದೃಷ್ಟಿಯನ್ನು ಹೇಳಿದೆ. ಇಷ್ಟಕ್ಕೇನಿಲ್ಲದೆ ಚರರಾಶಿಯು ಸ್ಥಿರರಾಶಿಯನ್ನು
ನೋಡುತ್ತದೆ. ಇತ್ಯಾದಿ ರಾಶಿದೃಷ್ಟಿಯನ್ನೂ ಹೇಳಿದೆ. ಪರಾಶರಹೋರಾ
ಶಾಸ್ತ್ರವನ್ನನುಸರಿಸಿ ಬರೆದ ಈ ಗ್ರಂಥದಲ್ಲಿ ಅವುಗಳನ್ನೆಲ್ಲ ಕೈಬಿಟ್ಟದ್ದು ಸೋಜಿ
ಗವಾಗಿಯೇ ಕಾಣುತ್ತದೆ. ಆದರೆ-ಪಾದದೃಷ್ಟಿಯಿಂದ ಜಾತಕ ನೋಡುವ
ಪದ್ಧತಿಯು ರೂಢಿಯಲ್ಲೇನೂ ಬಹುಶಃ ಕಾಣುವದಿಲ್ಲ. ಈ ಗ್ರಂಥದಲ್ಲಿ ಹೇಳಿದ
ದೃಷ್ಟಿವಿಚಾರವೇ ಎಲ್ಲೆಡೆಗೆ ಪ್ರಚಾರದಲ್ಲಿದೆ. ಇದು ಯುಕ್ತವೇ ಎಂದು ಹೇಳ
ಬಹುದು. ಭಟ್ಟೋತ್ಪಲ ಮೊದಲಾದ ಟೀಕಾಕಾರರೂ ಇದು ಸರಿಯೆಂದಭಿ
ಪ್ರಾಯಪಡುತ್ತಾರೆ.
॥೪॥

ಶ್ಲೋ: ಸರ್ವೇತ್ರಿಕೋಣನೇತಾರೋಗ್ರಹಾಃಶುಭಫಲಪ್ರದಾಃ||
ಪತಯಸ್ತ್ರಿಷಡಾಯಾನಾಂಯದಿಪಾಪಫಲಪ್ರದಾಃ ||೫||

ಟೀ. ಎಲ್ಲ ಗ್ರಹಗಳೂ ತ್ರಿಕೋಣಾಧಿಪತಿಗಳಾದಲ್ಲಿ ಶುಭ ಫಲವನ್ನೇ ಕೊಡುವರು. ಮೂರು, ಆರು, ಹನ್ನೊಂದನೇ ಸ್ಥಾನಾಧಿಪತಿಗಳು ಅಶುಭ ಫಲವನ್ನೇ ಕೊಡುವರು.

ವಿವರಣಃ- ತ್ರಿಕೋಣರಾಶಿಗಳೆಂದರೆ ಲಗ್ನದಿಂದ ೫-೯ನೇ ಸ್ಥಾನಗಳು. ಶುಭಗ್ರಹರಿರಲಿ, ಪಾಪಗ್ರಹರಿರಲಿ, ಈ ತ್ರಿಕೋಣ ಸ್ಥಾನದ ಅಧಿಪತಿಗಳಾದರೆ ಶುಭಫಲವನ್ನು ಕೊಡುವರು. ಸಾಮಾನ್ಯ ನಿಯಮದಂತೆ ಅಶುಭ ಗ್ರಹರು ಅಶುಭಫಲವನ್ನೂ, ಶುಭಗ್ರಹರು ಶುಭಫಲವನ್ನೂ ಕೊಡಬೇಕು. ಆದರೆ ತ್ರಿಕೋಣಾಧಿಪತಿಗಳಾದರೆ ಎಲ್ಲ ಗ್ರಹರೂ ಶುಭಾಶುಭ ಭೇದವಿಲ್ಲದೇ ಶುಭರೇ ಆಗುವರೆಂದರ್ಥ. ಮೇಷಲಗ್ನಕ್ಕೆ ರವಿ, ಗುರುಗಳು ತ್ರಿಕೋಣಾಧಿಪತಿಗಳಾಗುವರು. ಇವರ ದಶಾಂತರ್ದಶೆಗಳಲ್ಲಿ ಪಾಪಗ್ರಹನಾದ ರವಿಯೂ ಶುಭಗ್ರಹನಾದ ಗುರುವೂ ತಾರತಮ್ಯವಿಲ್ಲದೇ ಶುಭಫಲಗಳನ್ನೇ ಕೊಡುತ್ತಾರೆ. ಎಲ್ಲ ಗ್ರಹರೂ ೩-೬-೧೧ನೇ ಸ್ಥಾನಾದಿಪತಿಗಳಾದರೆ ಅಶುಭಫಲವನ್ನೇ ಕೊಡುವರು. ಈ ಅಶುಭಫಲ ಕೊಡುವದರಲ್ಲಿ ಶುಭಾಶುಭ ಎಲ್ಲ ಗ್ರಹರೂ ಸಮಾನರೇ. ಉದಾಃ- ಮೇಷ ಲಗ್ನಕ್ಕೆ ೩-೬ನೇ ಸ್ಥಾನಾಧಿಪತಿ ಬುಧ. ೧೧ನೇ ಸ್ಥಾನಾಧಿಪತಿ ಶನಿ. ಈ ಶುಭಾಶುಭ ಎರಡು ಗ್ರಹಗಳೂ ಅಶುಭಫಲವನ್ನು ಕೊಡುವರು. ಅಶುಭಫಲವನ್ನು ಕೊಡುವದರಲ್ಲಿ ಶುಭಾಶುಭ ಎಲ್ಲ ಗ್ರಹರೂ ಸಮಾನರೇ. ಬುಧ, ಗುರು, ಶುಕ್ರ, ವೃದ್ಧಿಚಂದ್ರ ಇವು ಶುಭಗ್ರಹಗಳು. ಸೂರ್ಯ, ಕುಜ, ಶನಿ, ಕ್ಷೀಣ ಚಂದ್ರ, ಇವು ಅಶುಭಗ್ರಹಗಳು. ತಮೋಗ್ರಹರಾದ ರಾಹು ಕೇತುಗಳೂ ಅಶುಭ ಗ್ರಹರಲ್ಲೇ ಬರುವರು. ಉಳಿದ ಗ್ರಹರಂತೆ ರಾಹುಕೇತುಗಳು ಕಣ್ಣಿಗೆ ಕಾಣುವ ಗ್ರಹಗಳಲ್ಲ. ಚಂದ್ರನ ಪಾತಗಳಿಗೆ ಆ ಸಂಜ್ಞೆಯನ್ನು ಕಲ್ಪಿಸಿರುವರು. ಆದರೂ ಇವುಗಳ ಪರಿಣಾಮವು ಪ್ರಾಣಿಗಳ ಮೇಲಾಗುವದರಿಂದ ಫಲಕ್ಕಾಗಿ ಆಧುನಿಕ ಜ್ಯೋತಿಷಿಗಳು ಗ್ರಹಗಳೆಂದೇ ಗೃಹೀತ ಮಾಡಿರುವರು. ರಾಹುವಿಗೆ ಮಿಥುನವು ಸ್ವಕ್ಷೇತ್ರವೆಂದೂ, ಕನ್ಯಾರಾಶಿಯು ಉಚ್ಚರಾಶಿಯೆಂದೂ, ಮೀನರಾಶಿಯು ನೀಚಸ್ಥಾನವೆಂದೂ ಇದರ ಪ್ರತಿಯೋಗಿ ಕೇತುವಿಗೆ ಧನುರಾಶಿಯು, ಸ್ವಕ್ಷೇತ್ರವೆಂದೂ, ಮೀನರಾಶಿಯು ಉಚ್ಚಸ್ಥಾನವೆಂದೂ, ಕನ್ಯಾರಾಶಿಯು ನೀಚಸ್ಥಾನವೆಂದೂ ಕಲ್ಪಿಸಿರುವರು. ಅತ್ಯಾಧುನಿಕ ಕೆಲ ಜ್ಯೋತಿಷಿಗಳು

ಹರ್ಶಲ (ಇಂದ್ರ) ನೆಪ್‌ಚ್ಯೂನ್ (ವರುಣ) ಎಂಬ ಪಾಶ್ಚಾತ್ಯರು ದುರ್ಬಿನಿನಿಂದ ಕಂಡುಹಿಡಿದ ಎರಡು ಗ್ರಹಗಳನ್ನು ಜಾತಕದಲ್ಲಿ ಪಾಪಗ್ರಹರ ಸ್ಥಾನದಲ್ಲಿ ಕೂಡ್ರಿಸಿರುವರು. ನಾಡೀಗ್ರಂಥಗಳಲ್ಲಿ ಇವುಗಳ ಉಲ್ಲೇಖವಿದೆಯೆಂದೂ ಇದನ್ನು ಪಾಶ್ಚಾತ್ಯರೇ ಕಂಡುಹಿಡಿದರೆಂಬದು ಸರಿಯಲ್ಲವೆಂದೂ ‘‘ಜ್ಯೋತಿರ್ಗನ್ನಡಿ’’ ಕಾರರು ಬರೆಯುತ್ತಾರೆ. ಹರ್ಶಲ ಗ್ರಹಕ್ಕೆ “ಕಟಂಕ’’ ಎಂಬದಾಗಿ ಆದರಲ್ಲಿ ಉಲ್ಲೇಖವಿದೆಯಂತೆ. ಈ ಕಟಂಕ ಗ್ರಹವು ಒಂದು ರಾಶಿಯನ್ನು ೭॥ ವರ್ಷಗಳಿಂದ ದಾಟುವದು. ‘‘ನೆಪ್‌ಚ್ಯೂನ್” ಗ್ರಹಕ್ಕೆ “ಸಮುರಸ” ಎಂಬ ಹೆಸರಿರುವದಂತೆ. ಈ ಗ್ರಹವು ಒಂದು ರಾಶಿಯನ್ನು ೧೫ ವರ್ಷ ೯ ತಿಂಗಳಿಂದ ದಾಟುವದು. ಈ ಹರ್ಶಲ-ನೆಪ್‌ಚ್ಯೂನ್ ಗತಿಗೆ ಇದು ಹೊಂದುವದರಿಂದ, ಹಾಗೂ ಫಲಸಾಮ್ಯವೂ ಇರುವದರಿಂದ ‘‘ಜ್ಯೋತಿರ್ಗನ್ನಡಿ” ಕಾರರ ಮತವು ಸರಿ ಎಂದು ನಾವು ತಿಳಿಯಬಹುದು. ಇವುಗಳಿಗೆ ಸ್ವಕ್ಷೇತ್ರಾದಿಗಳನ್ನು ಕಲ್ಪಿಸಿದ ಸರಿಯಾದ ಆಧಾರಗಳು ದೊರೆಯದೆ ಇರುವದರಿಂದ ಗೋಚರೀ ಪದ್ಧತಿ. ಅಥವಾ ಜನ್ಮಕಾಲೀನ ಸ್ಥಿತಿಗಳಿಂದಷ್ಟೇ ಫಲಗಳನ್ನು ಊಹಿಸಲು ಬರುವದು. ಅಂತೂ ಸಾಮಾನ್ಯ ಪಾಪಗ್ರಹರಲ್ಲಿ ಇವುಗಳನ್ನು ಕಲ್ಪಿಸಬೇಕಾಗುವದು. ||೫||

ಶ್ಲೋ:- ನದಿಶಂತಿಶುಭಂನೃಣಾಂಸೌಮ್ಯಾಃಕೇಂದ್ರಾಧಿಪಾಯದಿ ||
ಕ್ರೂರಾಶ್ಚೇದಶುಭಂತ್ವೇತೇ ಪ್ರಬಲಾಶ್ಚೋತ್ತರೋತ್ತರಂ ||೬||

ಟೀ:- ಶುಭಗ್ರಹರು ಕೇಂದ್ರಾಧಿಪತಿಗಳಾದಲ್ಲಿ ಶುಭಫಲವನ್ನು ಕೊಡುವದಿಲ್ಲ. ಅದೇ ಪಾಪಗ್ರಹಗಳಾದರೆ ಅಶುಭಫಲವನ್ನು ಕೊಡುವದಿಲ್ಲ. ಇದರಲ್ಲಿ ಮುಂದು ಮುಂದಿನದು ಪ್ರಬಲವು.

ವಿವರಣ:- ಶಭಗ್ರಹರಿಗೆ ಕೇಂದ್ರಾಧಿಪತ್ಯವು ಒಳ್ಳೆಯದಲ್ಲ. ಪಾಪಗ್ರಹರಿಗೆ ಕೇಂದ್ರಾಧಿಪತ್ಯವು ಒಳ್ಳೆಯದು. ಪಾಪಗ್ರಹರಿಗೆ ತ್ರಿಕೋಣಾಧಿಪತ್ಯ ಹಾಗೂ ಕೇಂದ್ರಾಧಿಪತ್ಯ ಇವೆರಡೂ ಒಳ್ಳೆಯದೇ. ಶುಭಗ್ರಹರಿಗೆ ತ್ರಿಕೋಣಾಧಿಪತಿತ್ವ ಮಾತ್ರ ಒಳ್ಳೆಯದೆಂದರ್ಥ. ಇಲ್ಲಿ ಉತ್ತರೋತ್ತರ ಬಲಿಷ್ಠಗಳೆಂದರೆ, ತ್ರಿಕೋಣಾಧಿಪತಿತ್ವಕ್ಕಿಂತ ತ್ರಿಷಡಾಯಪತಿತ್ವವೂ, ತ್ರಿಷಡಾಯಪತಿತ್ವಕ್ಕಿಂತ ಕೇಂದ್ರಾಧಿಪತಿತ್ವವೂ ಪ್ರಬಲವಾಗುವದು. ತ್ರಿಕೋಣದಲ್ಲಿ ೫ನೇ ಸ್ಥಾನಕ್ಕಿಂತ ೯ನೇ ಸ್ಥಾನಾಧಿಪತಿತ್ವವೂ, ತ್ರಿಷಡಾಯಗಳಲ್ಲಿ ೩ನೇ ಸ್ಥಾನಾದಿ

ಅದಕ್ಕಿಂತ ೧೧ನೇ ಸ್ಥಾನಾಧಿಪತಿತ್ವವೂ,
ಪತಿತ್ವಕ್ಕಿಂತ ೬ನೇ ಸ್ಥಾನಾದಿಪತಿತ್ವ, ಅದಕ್ಕಿಂತ ಸಪ್ತ
ಕೇಂದ್ರಾಧಿಪತ್ಯದಲ್ಲಿ ಲಗ್ನಕೇಂದ್ರಕ್ಕಿಂತ ಚತುರ್ಥಕೇಂದ್ರವೂ, ಅದಕ್ಕಿಂತ ಸಪ್ತ
ಮ ಕೇಂದ್ರವೂ, ಆದಕ್ಕಿಂತ ದಶಮಕೇಂದ್ರವೂ ಬಲಿಷ್ಠವು. (ಇವುಗಳಲ್ಲಿ
ಆಧಿಪತ್ಯವು ಬಲಿಷ್ಠ ಎಂಬ ಭಾವವು) ಫಲವು ಶುಭವಿರಲಿ, ಅಶುಭವಿರಲಿ,
ಸ್ಥಾನ

ಸಾಮಾನ್ಯ ಎಲ್ಲ ಜ್ಯೋತಿಷಗ್ರಂಥಗಳಲ್ಲಿ ಸೂರ್ಯಾದಿ ಗ್ರಹಗಳಿಗೆ ಸ್ಥಾನ
ಹೇಳುವ ಪದ್ಧತಿ ಇರುವದು.
ಪರತ್ವದಿಂದ ಬಲಾಬಲ-ಶುಭಾಶುಭತ್ವಗಳನ್ನು ಯೋಗ, ಇತ್ಯಾದಿಗಳಿಂದಲೂ
ಸ್ವಕ್ಷೇತ್ರ, ಉಚ್ಚಕ್ಷೇತ್ರ, ಮಿತ್ರಕ್ಷೇತ್ರ, ದೃಷ್ಟಿ, ಮೊದಲಾದ ಕಾರಣಗಳಿಂ
ಷಡ್ವರ್ಗ-ಅಷ್ಟವರ್ಗಗಳಲ್ಲಾಗುವ ಶುಭಾಶುಭಾಧಿಕ್ಯ ಶುಭಗ್ರಹರಾದರೂ, ಅಶು
ದಲೂ ಫಲವು ಹೇಳಲ್ಪಟ್ಟಿದೆ. ಒರೇ ಆಧಿಪತ್ಯದಿಂದ ಕಂಡುಬರುವದೊಂದು
ಭರಾಗುವರೆಂಬ ವಿಧಾನವು ಈ "ಚಂದ್ರಿಕೆ" ಯಲ್ಲಿಯೇ ಅಧ್ಯಾಯದಲ್ಲಿ
ವಿಶೇಷವೆನ್ನಬೇಕು. ಬೃಹತ್ಪಾರಾಶರಹೋರಾಶಾಸ್ತ್ರದ ೧೩ನೇ ಸೌಮ್ಯಾಃ ಶುಭಂ
ಈ ಸಂಗತಿಯು ನೋಡ ಸಿಗುವದು. "ಕೇಂದ್ರಾಧಿಪತಯಃ ಕೋಣಪಾಶುಭದಾಯಕಾ"
ನೈವದಿಶಂತಿಚ। ಕ್ರೂರಾನ್ನೈವಾಶುಭಂಕುರ್ಯುಃ ಎಂಬ ಗ್ರಂಥಕಾರನ ಪ್ರತಿ
ಇತ್ಯಾದಿ. "ವಯಂಪಾರಾಶರೀಹೋರಾಮನುಸೃತ್ಯ" ಇದೆಯೆಂದರೆ ಅತ್ಯುಕ್ತಿ
ಜ್ಞೆಯು ಈ ಪ್ರಕರಣ ಸಂಬಂಧದಿಂದಲೇ ಹೆಚ್ಚಾಗಿ ಇದು ಸ್ವಲ್ಪವು
ಯಲ್ಲ. ಇಲ್ಲಿ ಅನ್ಯ ಜ್ಯೋತಿಷಗ್ರಂಥಕಾರರ ಅಭಿಪ್ರಾಯಕ್ಕೆ ಕೇಂದ್ರಾಧಿಪತಿಯಾದ
ಟ್ಟಿಗೆ ವಿಸಂಗತವೆನ್ನಿಸುವದು ಅನಿವಾರ್ಯ. ಗ್ರಹರು ತೊಂದರೆಯಾಗಲಾರ
ಮಾತ್ರದಿಂದ ಶುಭಗ್ರಹವೂ ಆಶುಭವಾದಲ್ಲಿ ಭಾವ ಫಲಕ್ಕೆ ಚತುರ್ಥಕೇಂದ್ರ
ದೇ? ಕುಂಡಲಿಯಲ್ಲಿಯ, ಲಗ್ನ ಕೇಂದ್ರ (ದೇಹಭಾವ) (ಕರ್ಮಸ್ಥಾನ)
(ಸುಖಸ್ಥಾನ) ಸಪ್ತಮ ಕೇಂದ್ರ (ಕಳತ್ರಸ್ಥಾನ) ದಶಮಕೇಂದ್ರ ಕುಂಡ
ಇವುಗಳ ಅಧಿಪತಿಗಳು ಶುಭಗ್ರಹರಿರಕೂಡದೆಂದಭಿಪ್ರಾಯವಾಗುವದು.
ಲಿಯ ಮಹತ್ವದ ಸ್ಥಾನಗಳಾದ ಈ ಕೇಂದ್ರಾಧಿಪತ್ಯವು ಪಾಪಗ್ರಹಗಳಿಗಿದ್ದರೆ
ಚಲೋದು ಎಂದಲ್ಲವೇ ಇದರ ಅರ್ಥ? ಮೀನಲಗ್ನಕ್ಕೆ ಕರ್ಕದಲ್ಲಿರುವ, ಗುರು
ವಿನಿಂದ, ಶುಭವಾಗುವದೋ ಅಶುಭವೋ? ಲಗ್ನದಶಮ ಕೇಂದ್ರಾಧಿಪತಿಯಾದ
ಕರ್ಕಸ್ಥ ಗುರುವಿನಿಂದ ಅನಿಷ್ಟವನ್ನು ನಿರೀಕ್ಷಿಸಬಹುದೇ? "ಹೋರಾಧೀಶೇ
ಪಾಪಖೇಟೇ-ರಿಪುಸ್ಥೇ (ಜಾತಕಪಾರಿಜಾತ ಅಧ್ಯಾಯ ೧೧ಶ್ಲೋ।೨೬) ಇತ್ಯಾ
ದಿಯಾಗಿ ಲಗ್ನಾಧಿಪತಿಯು ಪಾಪಗ್ರಹರಾದರೆ ಅರಿಷ್ಟ ಫಲವುಂಟಾಗುವದೆಂದಿ
ರುವದು. "ಬಂಧು ಸ್ಥಾನೇಶ್ವರೇಸೌಮ್ಯೇ ಸೌಮ್ಯಗ್ರಹನಿರೀಕ್ಷತೇ। ಕಾರಕೇ
ಬಲಸಂಪೂರ್ಣೇ ಬಂಧುಪೂಜ್ಯೋಭುವೇನ್ನರಃ॥ (ಜಾತಕ ಪಾರಿಜಾತ ಅಧ್ಯಾ

ಯ ೧೨ ಶ್ಲೋ. ೯೧ (ಚತುರ್ಥಾಧಿಪತಿಶುಭಗ್ರಹವಾಗಿರಬೇಕೆಂಬ ಇದರ ಅರ್ಥ
ವನ್ನು ಲಕ್ಷಿಸುವದು.

"ಸುಖಾಧಿಪೋ ದೇವಗುರುಃ ಪಿತೋವಾ ಬಲೀವಿಲಗ್ನಾನ್ನವಮೋಪ
ಯಾತಃ। ತ್ರಿಕೋಣಕೇಂದ್ರೋಪಗತಃ ಶುಭೇಶಃ ಸಮೇತಿ ಜಾತೋಬಹು
ವಾಹನಾನಿ। (ಜಾತಕಪಾ-ಅ।೧೨ ಶ್ಲೋ।೧೨೨) ಅಂದರೆ ಚತುರ್ಥ(ಕೇಂದ್ರ)
ಅಧಿಪತಿ, ಗುರು, ಅಥವಾ ಶುಕ್ರನಾದರೆ ಈ ಶುಭಫಲವಾಗುವದು, ಇದರ ತಾತ್ಪ
ರ್ಯವು. ಕೇಂದ್ರಾಧಿಪತಿಗಳಾಗಲೀ ತ್ರಿಕೋಣಾಧಿಪತಿಗಳಾಗಲೀ ಶುಭಗ್ರಹ
ರಾದರೆ ಶುಭಫಲವೇ ಆಗುವದೆಂದರ್ಥವಾಗುವದಿಲ್ಲವೇ? "ಯಜ್ಞಾಕರ್ಮಪತೌ
ಶುಭೇಶತಿಯುತೇ" (ಜಾ. ಪಾ. ಅ. ೧೫. ಶ್ಲೋ. ೮)ದ ಶಮಾಧಿಪತಿ
(ಕೇಂದ್ರ) ಶುಭಗ್ರಹರಾದಲ್ಲಿ-ಶುಭವಾಗುದದು ಸ್ಪಷ್ಟವಿದೆ. "ಅಜ್ಞಾಸ್ಥಾನಾಧಿ
ಪೇಸೌಮ್ಯೇಶುಭಯುಕ್ತೇಕ್ಷಿತೇಪಿವಾ। ಶೋಭನಾಂಶಗತೇ ವಾಪಿಜಾತಸ್ತಾತ್ವ
ಜ್ಞಾಧರೋಭವೇತ್॥ (ಜಾ. ಪಾ. ಅ।೧೫। ಶ್ಲೋ. ೬೦) ಇದರಮೇಲಿಂದ
ಯಾವದೇ ಭಾವಾಧಿಪತಿಯು ಶುಭಗ್ರಹರಾದಲ್ಲಿ ಆ ಭಾವಕ್ಕೆ ಪುಷ್ಟಿಯೇ ಹೊರ
ತು ಹಾನಿಯಲ್ಲವೆಂಬದಾಗಿ ಸಾಮಾನ್ಯ ಎಲ್ಲಾ ಫಲಜ್ಯೋತಿಷಗಳ ಅಭಿಪ್ರಾಯ
ವಿರುವಲ್ಲಿ ಈ ಪರಾಶರಮತವೇ ಬೇರೊಂದು ತೆರನಾಗಿ ಪ್ರತಿಪಾದಿತವಾದಂತಿದೆ.
ಇದು ಈ ಗ್ರಂಥದ ವೈಶಿಷ್ಟ್ಯವೂ ಹೌದು. ಫಲಾಫಲಕಥನಕ್ಕೆ ಸರಿ ಹೋದರೆ
ತೀರಿತು. ಯಾವ ಜ್ಯೋತಿಷ್ಕರಮತ ಹೇಗಿದ್ದರೇನು? ಮತ್ತು ಫಲಜ್ಯೋತಿ
ಷವು, ಒರೇ ಶಾಸ್ತ್ರ ಅಥವಾ ತರ್ಕದ ಮೇಲೆಯೇ ನಿಂತಿರದೆ ಹೇಳುವವನ ಯೋ
ಗ್ಯತೆ, ಕೇಳುವವನ ನಂಬಿಕೆಯ ಮೇಲೆ ನಿಂತಿರುವದರಿಂದ-ವಾದಾಸ್ಪದಗೊ
ಡವೆಯಾಕೆ?

ಮತಭೇದವು ಸಾಮಾನ್ಯ ಎಲ್ಲಾ ಶಾಸ್ತ್ರಗಳಲ್ಲಿಯೂ ಇದ್ದೇ ಇರುವದ
ರಿಂದ ಅವುಗಳಲ್ಲಿ ಇದೊಂದು ಅಪವಾದವಾಗಿ ಹೇಗುಳಿದೀತು?

ಶ್ಲೋಃ- ॥ಲಗ್ನಾದ್ವ್ಯಯದ್ವಿತೀಯೇಶೌಪರೇಷಾಂಸಾಹಚರ್ಯತಃ॥
ಸ್ಥಾನಾಂತರಾನುಗುಣ್ಯೇನ-ಭವತಃಫಲದಾಯಕೌ ॥ ೭ ॥

ಟೀಃ- **ಲಗ್ನದಿಂದ-ವ್ಯಯ-ದ್ವಿತೀಯ** ಸ್ಥಾನಾಧಿಪತಿಗಳು ಬೇರೆ ಗ್ರಹಗಳ
ಸಂಬಂಧವಶದಿಂದಲೂ,ಆಯಾಯ ಸ್ಥಾನಾನುಗುಣವಾಗಿಯೂ ಶುಭಾಶುಭ ಫಲ

ಗಳನ್ನು ಕೊಡುವರು.

ವಿವರಣ:- ಈವರೇಗೆ ಲಗ್ನ, ತೃತೀಯ, ಚತುರ್ಥ, ಪಂಚಮ, ಷಷ್ಠ,
ಸಪ್ತಮ, ನವಮ, ದಶಮ, ಏಕಾದಶ, ಈ ೯ ಸ್ಥಾನಾಧಿಪತಿಗಳ ಶುಭಾಶುಭತ್ವ
ವನ್ನು ವಿವರಿಸಿದ್ದಾಯಿತು. ಈಗ ದ್ವಿತೀಯ ಹಾಗೂ ವ್ಯಯ ಸ್ಥಾನಾಧಿಪತಿಗಳ
ಸ್ಥಿತಿಯನ್ನು ಈ ಶ್ಲೋಕದಿಂದ ಹೇಳಲಾಗಿದೆ. ವ್ಯಯ ಅಥವಾ ದ್ವಿತೀಯ
ಸ್ಥಾನಾಧಿಪತಿಗಳು ಶುಭರಾಗಲೀ ಪಾಪರಾಗಲೀ, ಸ್ವತಂತ್ರವಾಗಿ ಫಲವನ್ನು
ಕೊಡುವದಿಲ್ಲ. ಸಾಹಚರ್ಯ (ಸಂಬಂಧ) ಮೂಲಕವಾಗಿ ಫಲಗಳನ್ನು
ಕೊಡುವರು. ಸಂಬಂಧವು ನಾಲ್ಕು ತೆರನಾಗಿದೆ—

ವೃತ್ಯಸ್ತಾಶ್ರಯಸಂಬಂಧಶ್ಚಾನ್ಯೋನ್ಯಾಲೋಕಸಂಭವಃ।
।।ವೃತ್ಯಸ್ತಾತ್ರಯಸಂಬಂಧಶ್ಚಾನ್ಯೋನ್ಯಾಲೋಕನಾದಪಿ।।
ಏಕಸ್ಯ-ರಾಶೌಸಂಸ್ಥಿತ್ಯಾ-ತದೀಶಾಲೋಕನಾದಪಿ।।
।।ಸಹವಾಸಾಚ್ಚ ಸಂಬಂಧಾ ಇತ್ಯೇತೇಸ್ಯುಶ್ಚತುರ್ವಿಧಾಃ।।
ಅತ್ರಾಪಿಪೂರ್ವಪೂರ್ವಾಃಸ್ಯುಃಸಂಬಂಧಾಬಲವತ್ತರಾಃ।।

(೧) ಅನ್ಯೋನ್ಯಸ್ಥಾನಸ್ಥಿತಿಸಂಬಂಧ (೨) ಪರಸ್ಪರದೃಷ್ಟಿ ಸಂಬಂಧ
(೩) ಅನ್ಯತರ ದೃಷ್ಟಿಸಂಬಂಧ (೪) ಏಕರಾಶಿಸ್ಥಿತಿ ಸಂಬಂಧ. ಹೀಗೆ
ಸಂಬಂಧಗಳು ನಾಲ್ಕು ವಿಧಗಳು. ಅನ್ಯೋನ್ಯರಾಶಿ ಸ್ಥಿತಿಸಂಬಂಧವೆಂದ
ರೆ- ಉದಾ:- ಮೇಷದಲ್ಲಿ ಅಥವಾ ವೃಶ್ಚಿಕದಲ್ಲಿ ರವಿ-ಸಿಂಹದಲ್ಲಿ ಕುಜ, ಹೀಗಿ
ದ್ದಲ್ಲಿ ಈ ಎರಡೂ ಗ್ರಹಗಳಿಗೆ ಕ್ಷೇತ್ರಸಂಬಂಧವಾದಂತಾಗುತ್ತದೆ. ಇನ್ನು
ಅನ್ಯೋನ್ಯ ದೃಷ್ಟಿಸಂಬಂಧವೆಂದರೆ ಹೀಗೆ ಉದಾ:- ಮೇಷದಲ್ಲಿ ರವಿ, ತುಲೆ
ಯಲ್ಲಿ ಶನಿ, ಹೀಗಿದ್ದರೆ ಈ ಸಂಬಂಧವುಂಟಾಗುತ್ತದೆ. ಅನ್ಯತರ ದೃಷ್ಟಿ
ಸಂಬಂಧವೆಂದರೆ ಹೀಗೆ ಉದಾಃ- ಸಿಂಹದಲ್ಲಿ ಕುಜ, ಮೀನದಲ್ಲಿ ರವಿ, ಹೀಗಿ
ದ್ದಾಗ ಕುಜನು ರವಿಯನ್ನು ನೋಡುತ್ತಾನೆ. ರವಿಯು ಕುಜನನ್ನು ನೋಡು
ವದಿಲ್ಲ. ಇನ್ನು ಏಕರಾಶಿಸ್ಥಿತ ಸಂಬಂಧವೆಂದರೆ ಹೀಗೆ ಉದಾ:- ಸೂರ್ಯ
-ಬುಧರು ವೃಷಭದಲ್ಲಿ ಇದ್ದಾರೆಂದು ತಿಳಿಯೋಣ. ಆಗ ಈ ಸಂಬಂಧವು
ಒಂದೇ ರಾಶಿಯಲ್ಲಿರುವಿಕೆಯ ಸಂಬಂಧವಾಯಿತು. ಇತ್ಯಾದಿ. ವ್ಯಯ ದ್ವಿತೀಯಾ
ಧಿಪತಿಗಳಿಗೆ, ಈ ಹಿಂದೆ ಹೇಳಿದ ಶುಭಗ್ರಹರ ಸಂಬಂಧವಾದರೆ ಶುಭಫಲವೂ
ಪಾಪಗ್ರಹರ ಸಂಬಂಧವಾದರೆ ಪಾಪಫಲವೂ ಉಂಟಾಗುವದು. ।। ೭ ।।

।।ಶ್ಲೋ।। ಭಾಗ್ಯವ್ಯಯಾಧಿಪತ್ಯೇನರಂಧ್ರೇಶೋನಶುಭಪ್ರದಃ।।

ಫಲವನ್ನು ಕೊಡುವದಿಲ್ಲವೆಂದು ಹೇಳಿದೆ. ಅವುಗಳಲ್ಲಿಯಾದರೂ ಗುರು-ಶುಕ್ರರಿಗೆ
ವಿವರಣಃ ಈ ಹಿಂದೆ “ ನದಿಶಂತಿ ಶುಭಂನ್ನೃಣಾಂಶುಭಾಃ ಕೇಂದ್ರಾಧಿ
ಪಾಯದಿ ” ಎಂಬ ಶ್ಲೋಕದಲ್ಲಿ ಶುಭಗ್ರಹರು ಕೇಂದ್ರಾಧಿಪತಿಗಳಾದರೆ ಶುಭ
ಫಲವನ್ನು ಕೊಡುವದಿಲ್ಲವೆಂದು ಹೇಳಿದೆ. ಅವುಗಳಲ್ಲಿಯಾದರೂ ಗುರು-ಶುಕ್ರರಿಗೆ
ಕೇಂದ್ರಾಧಿಪತ್ಯ ದೋಷವು ಹೆಚ್ಚಿನದು. ಮಾರಕಸ್ಥಾನಗಳಾದ ದ್ವಿತೀಯ
ಸಪ್ತಮ ಸ್ಥಾನಗಳಲ್ಲಿದ್ದರಂತೂ ಇನ್ನೂ ಹೆಚ್ಚಿನ ಮಾರಕರಾಗುವರು.

ಉದಾಃ ಮೇಷಲಗ್ನವಾದರೆ ದ್ವಿತೀಯ ಸಪ್ತಮಾಧಿಪತಿಯು ಶುಕ್ರನಾಗು
ವನು. ಸಪ್ತಮವು ಕೇಂದ್ರಗಳಲ್ಲೊಂದಾಗಿರುವವರಿಂದ ಕೇಂದ್ರಾಧಿಪತ್ಯವು
ಶುಕ್ರನಿಗೆ ಬರುವದು. ಅದೇ ಶುಕ್ರನು ಮೇಷಕ್ಕೆ ದ್ವಿತೀಯವಾದ ವೃಷಭದ
ಲ್ಲಿದ್ದರೆ ಹೆಚ್ಚಿನ ಮಾರಕನಾಗುವನು. ಅವನ ದಶೆಯಲ್ಲಿ ಅಥವಾ ಅಂತರ್ದಶೆ
ಯಲ್ಲಿ ಮರಣವನ್ನೇ ಉಂಟುಮಾಡಬಹುದು. ಇದರಂತೆ ಮಿಥುನ ಲಗ್ನವಾಗಿ
ಗುರುವು ಕರ್ಕದಲ್ಲಿದ್ದರೆ ಸಪ್ತಮ ಕೇಂದ್ರಾಧಿಪತಿಯಾಗಿ ದ್ವಿತೀಯ (ಮಾರಕ) ॥ ೯ ॥
ಸ್ಥಾನದಲ್ಲಿರುವದರಿಂದ ಹೆಚ್ಚಿನ ಮಾರಕನಾದಂತಾಗುವನು.

ತದ್ವಿಧಃ ॥

ಶ್ಲೋ: ಬುಧಸ್ತದನು ಚಂದ್ರೋಪಿಭವೇತ್ತದನು ತದ್ವಿಧಃ ॥
ಬುಧಸ್ತದನು ಚಂದ್ರೋಪಿಭವೇತ್ತದನು ಸೋರ್ಭವೇತ್
ನರಂಧ್ರೇಶತ್ವದೋಷಸ್ತು ಸೂರ್ಯ ಚಂದ್ರಮ ಸೋರ್ಭವೇತ್ ॥ ೧೦ ॥

ಟೀ: ಈ ಕೇಂದ್ರಾಧಿಪತ್ಯದೋಷವು ಗುರು-ಶುಕ್ರರಿಗಿಂತ ಬುಧನಿಗೂ,
ಬುಧನಿಗಿಂತ ಚಂದ್ರನಿಗೂ ಕಡಿಮೆ ಚಂದ್ರ-ಸೂರ್ಯರಿಗೆ ಅಷ್ಟಮೇಶತ್ವ
ದೋಷವಿರುವದಿಲ್ಲ.

ವಿವರಣಃ ಬುಧನು ಕೇಂದ್ರಾಧಿಪತಿಯಾಗಿ ಮಾರಕಸ್ಥಾನದಲ್ಲಿದ್ದರೂ,
ಗುರುಶುಕ್ರರಷ್ಟು ಮಾರಕನಾಗುವದಿಲ್ಲ. ಚಂದ್ರನು ಕೇಂದ್ರಾಧಿಪತಿಯಾಗಿ
ಮಾರಕಸ್ಥಾನದಲ್ಲಿದ್ದರೂ ಬುಧನಷ್ಟು ಮಾರಕನಾಗುವದಿಲ್ಲ. ಈ ಹಿಂದೆ
ಸಾಮಾನ್ಯವಾಗಿ “ರಂಧ್ರೇಶೋನ ಶುಭಪ್ರದಃ” ಎಂದು ಹೇಳಲಾಗಿತ್ತು. ಚಂದ್ರ
ಸೂರ್ಯರಿಗೆ ಇದು ಅಪವಾದವು. ಚಂದ್ರನಾಗಲೀ ಸೂರ್ಯನಾಗಲಿ ಅಷ್ಟಮಾಧಿಪತಿ
ಗಳೆಂಬಕಾರಣದಿಂದ ಅಶುಭಪ್ರದರಾಗುವದಿಲ್ಲವೆಂಬ ಭಾವವು. ಧನುರ್ಲಗ್ನಕ್ಕೆ
ಚಂದ್ರನೂ, ಮಕರ ಲಗ್ನಕ್ಕೆ ಸೂರ್ಯನೂ ಅಷ್ಟಮಾಧಿಪತಿಗಳಾಗುವರು ॥ ೧೦ ॥

ಶ್ಲೋ: ಕುಜಸ್ಯಕರ್ಮನೇತೃತ್ವ ಪ್ರಯುಕ್ತಾ ಶುಭಕಾರಿತಾ ।
ತ್ರಿಕೋಣಸ್ಯಾಪಿ ನೇತೃತ್ವೇ-ನಕರ್ಮೇಶತ್ವ ಮಾತ್ರತ : ॥ ೧೧ ॥

ಟೀ: ಕುಜನಿಗೆ ಬರೀ ದಶಮಾಧಿಪತಿಯೆಂಬ ಕಾರಣದಿಂದಲೇ ಶುಭ
ತ್ವವುಂಟಾಗುವದಿಲ್ಲ. ತ್ರಿಕೋಣಾಧಿಪತಿಯೂ ಆದಲ್ಲಿ ಶುಭಪ್ರದನಾಗುವನು.

ವಿವರಣ: ಈ ಹಿಂದೆ “ ನ ದಿಶಂತಿ=ಯದಿ ” ಎಂಬ ಶ್ಲೋಕದಲ್ಲಿ ಕ್ರೂರಗ್ರಹಗಳು ಕೇಂದ್ರಾಧಿಪತಿಗಳಾದಲ್ಲಿ ಅಶುಭ ಫಲಗಳನ್ನು ಕೊಡುವದಿಲ್ಲ ಎಂಬದಾಗಿ ಹೇಳಿದ್ದರೂ, ಶುಭ ಫಲಗಳನ್ನು ಕೊಡಲಾರರು. ಎಂಬರ್ಥವನ್ನು ಮಾಡಬೇಕಾಗುವದು. ಕರ್ಕ ಲಗ್ನದಲ್ಲಿ ಜನಿಸಿದವನಿಗೆ ಕುಜನು ದಶಮ ಕೇಂದ್ರಾಧಿಪತಿಯಾಗುವನು. ಕಾರಣ ಶುಭವನ್ನು ಕೊಡಲೇಬೇಕಷ್ಟೇ ? ಆದರೆ ಹಾಗೇನೂ ಇಲ್ಲ. ಅವನಿಗೆ ಆಗ ತ್ರಿಕೋಣಾದಿಪತಿತ್ವ ವುಂಟಾಗುವದರಿಂದ (ವೃಶ್ಚಿಕ) ಶುಭಪ್ರದನಾಗುವನು. ಇದರಂತೆ ತುಲಾ ಲಗ್ನಕ್ಕೆ ಚತುರ್ಥ-ಪಂಚಮಾಧಿಪತಿಯಾಗಿ ಶನಿಯು ಇರುವದರಿಂದ ಶುಭಪ್ರದನಾಗುವನು. ಈ ಶ್ಲೋಕದಲ್ಲಿ “ ಕುಜಸ್ಯ ” ಎಂಬದು ಉಪಲಕ್ಷಕವು. ಕುಜನಿಗೆ ಹೇಳಿದ್ದು ಸಾಮಾನ್ಯ ಪಾಪಗ್ರಹಗಳಿಗೂ, ‘ಕರ್ಮ’ ಎಂದು ದಶಮಕ್ಕೆ ಹೇಳಿದ್ದು ಚತುರ್ಥಾದಿ ಕೇಂದ್ರಗಳಿಗೂ ಸಂಬಂಧಿಸುತ್ತವೆ. ‘ ಕುತ್ಸಿತಂ ಜನ್ಮಯಸ್ಯಸಃ ’ ಎಂಬ ವ್ಯುತ್ಪತ್ತಿಯಿಂದ ಕುಜ ಎಂದರೆ ಪಾಪಗ್ರಹ, ಎಂದರ್ಥ ಮಾಡತಕ್ಕದ್ದು. “ ನ ಕೇಂದ್ರೇಶತ್ವಮಾತ್ರತಃ ” ಎಂದು ಕೊನೆಯ ಚರಣವಿದಿದ್ದರೆ ಇನ್ನೂ ಸಮಂಜಸವಾಗುತ್ತಿತ್ತು. ಕೇಂದ್ರಾಧಿಪತ್ಯವನ್ನಾಗಲೀ, ತ್ರಿಕೋಣಾಧಿಪತ್ಯವನ್ನಾಗಲೀ ಕುಜನೊಬ್ಬನಿಗೇ ಹೇಳಲು ಯಾವಕಾರಣವೂ ಇಲ್ಲ. ॥ ೧೧ ॥

ಶ್ಲೋ: ಯದ್ಯದ್ಭಾವಗತಾ ವಾಪಿಯದ್ಯದ್ಭಾವೇಶ ಸಂಯುತಾ ॥
ತತ್ತತ್ಫಲಾನಿಪ್ರಬಲಾ ಪ್ರದಿಶೇತಾಂತಮೋಗ್ರಹಾ ॥ ೧೩ ॥

ಟೀ: ರಾಹು-ಕೇತುಗಳು ಯಾವ್ಯಾವ ಭಾವಗಳಲ್ಲಿರುವರೋ ಯಾವ್ಯಾವ ಭಾವಾಧಿಪತಿಗಳಿಂದ ಕೂಡಿರುವರೋ ಆಯಾಯ ಭಾವಾನುಸಾರ ಆಯಾಯ ಭಾವಾಧಿಪತಿಗಳಿಂದ ಕೂಡಿರುವಿಕೆಗನುಸಾರವಾಗಿ ಹೆಚ್ಚಾಗಿ ಫಲ ಪ್ರದರಾಗುವರು.

ವಿವರಣ: ಈ ಶ್ಲೋಕದ ಅರ್ಥವು ಕಠಿಣವಲ್ಲದಿದ್ದರೂ, ಫಲಾದೇಶಕ್ಕೆ ಹೊಂದಿಸುವದು. ಗಡುಚಾದ ವಿಷಯವೇ ಆಗಿದೆ. ಈ ಶ್ಲೋಕದಲ್ಲಿರುವ “ಪ್ರಬಲಾ” ಶಬ್ದವನ್ನು ಹೇಗೆ ಹೊಂದಿಸುವದು ? ಪ್ರಬಲರಾದ ರಾಹು ಕೇತು

ಗಳೆಂದರೇನು ? ಪ್ರಬಲರಾಗುವದು ಯಾವಾಗ ? ಹನ್ನೆರಡು ಭಾವಗಳಲ್ಲೆಲ್ಲ
ಯಾವದಾದರೊಂದು ಭಾವದಲ್ಲಿದ್ದೇ ಇರುತ್ತಾರಷ್ಟೇ. ಆಯಾಯ ಭಾವಗಳು
ಬಲಿಷ್ಠವಾಗಿದ್ದಲ್ಲಿ ಇವರೂ ಬಲಿಷ್ಠರೇ ! ಉದಾ:- ಯಾವದೇ ಒಂದು ಲಗ್ನದ
ಸಪ್ತಮ ಭಾವವು ಬಲಿಷ್ಠವಾಗಿದೆಯೆಂದಿಟ್ಟು ಕೊಳ್ಳೋಣ. ಅಲ್ಲಿರುವ ರಾಹುವು
ಕಳತ್ರ ಸೌಖ್ಯ ಅಥವಾ ವೃದ್ಧಿಗೆ ಕಾರಣನಾಗಬಹುದೇ ? ಈ ತಮೋಗ್ರಹ
ರಿದ್ದ ಭಾವಕ್ಕೆ ಹಾನಿಯೇ ಹೊರತು ವೃದ್ಧಿಯಾಗುವದೆಂಬದು ಫಲಶಾಸ್ತ್ರಕ್ಕೆ
ಸಮ್ಮತವಾಗುವಂತಿಲ್ಲ. ಇನ್ನು ಭಾವಾಧಿಪತಿಗಳ ಸಂಬಂಧವಾಗಿಯೂ ತೊಡ
ಕುಂಟೇ ಆಗುವದು. ಈ ರಾಹುಕೇತುಗಳ ಯುತಿಯಿಂದ ಭಾವಾಧಿಪತಿಗಳ
ಬಲವೇ ಕುಂದುವಾಗ ಆಭಾವಾಧಿಪತಿಗಳ ಯೋಗದಿಂದ ಹೆಚ್ಚಿನ ಶುಭ ಫಲ
ವನ್ನು ಕೊಡುವದೂ ಅಶಕ್ಯ. ಇನ್ನು ಪಾಪಗ್ರಹಗಳಂತೆ ಇವುಗಳನ್ನು ತಿಳಿ
ಯುವದರಿಂದ ಅವುಗಳಂತೆ ಫಲಾಫಲಗಳನ್ನು ಊಹಿಸುವದು ಸರಳ ಮಾರ್ಗವು.
ಇವರಿರುವ ಭಾವವು ಶುಭಾನ್ವಿತ. ಅಥವಾ ಬಲಶಾಲಿಯಾದರೆ ಇವರ ದಶಾ
ಭುಕ್ತಿಗಳಲ್ಲಿ ಆಗುವ ಪಾಪ ಫಲವು ಕಡಿಮೆಯಾಗುವದೆಂದೇ ಅರ್ಥಮಾಡು
ವದು ಸಮಂಜಸವೆಂತ ಕಾಣುತ್ತದೆ. ಇಲ್ಲವೇ ಪಾಪಗ್ರಹಗಳಿಗೆ ೩-೬-೧೧
ಸ್ಥಾನಗಳು ಇಷ್ಟ ಸ್ಥಾನಗಳಷ್ಟೇ ಆ ಇಷ್ಟ ಭಾವಗಳಲ್ಲಿ ಇರುವ ರಾಹು-ಕೇತು
ಗಳು ಇವರೂ ಪ್ರಬಲರಾದಂತಾಗಿ ತಮ್ಮ ದಶಾಕಾಲದಲ್ಲಿ ಹೆಚ್ಚಿನ ಶುಭಾ
ಶುಭಗಳನ್ನು (ಆ ಭಾವಾನುಸಾರ) ಕೊಡಬಹುದು. ಯಾವ್ಯಾವ ತ್ರಿಕೋಣಾ
ಧಿಪತಿಮೊದಲಾದ ಇಷ್ಟ ಭಾವಾಧಿಪತಿಗಳಿಂದ ಕೂಡಿರುವಾಗಲೂ ಲಿಷ್ಠರಾದಂ
ತಾಗಿ ಆ ಭಾವಾಧಿ ಪತಿಗಳಿಗನುಗುಣವಾದ ಫಲವನ್ನು ವಿಶೇಷಿಸಿ ಕೊಡುವರು
ಈ ಶ್ಲೋಕಕ್ಕೆ ಇಷ್ಟೇ ಅರ್ಥ ಮಾಡಬೇಕಾಗುವದು. ಭಾವಗತ ಅಥವಾ
ಭಾವಾಧಿಪತಿಗಳಯುಕ್ತತ್ವದಿಂದ ಇವರು ಬಲಿಷ್ಠರೆಂದಾಗಲು ಕಾರಣವಿಲ್ಲ.
ಇವರಿರುವ ಸ್ಥಾನವು ಇವರಿಂದ ಯುಕ್ತರಾದ ಭಾವಾಧೀಶರೂ ದುರ್ಬಲರಾ
ಗುವಲ್ಲಿ ಹೆಚ್ಚಾಗಿ ಅಶುಭ ಫಲಕ್ಕೇ ಇದು ಅನ್ವಯಿಸುವದು ॥ ೨ ॥

॥ ಇತಿ ಸಂಜ್ಞಾಧ್ಯಾಯ: ॥

॥ ಅಥಯೋಗಾಧ್ಯಾಯಃ ॥

ಶ್ಲೋ:- ಕೇಂದ್ರತ್ರಿಕೋಣಪತಯಃ ಸಂಬಂಧೇನಪರಸ್ಪರಂ ॥
ಇತರೈರಪ್ರಸಕ್ತಾಶ್ಚೇದ್ವಿಶೇಷಫಲದಾಯಕಾಃ ॥ ೧೩ ॥

ಟೀ:- ಕೇಂದ್ರತ್ರಿಕೋಣಾಧಿಪತಿಗಳು ಪರಸ್ಪರ ಸಂಬಂಧಿಸಿದ್ದಲ್ಲಿ ಇತರ ಅಂದರೆ ಮೂರು-ಆರು ಹನ್ನೊಂದನೇಭಾವಾಧಿಪತಿಗಳ ಯೋಗವಾಗದಿದ್ದರೆ ವಿಶೇಷಫಲದಾಯಕವಾಗುವರು.

ವಿವರಣ:- ಜಾತಕದಲ್ಲಿ ಯೋಗಾವಳಿಯನ್ನು ಆಯಾಯ ಗ್ರಹಗಳ ಸಂಬಂಧದಮೇರೆಗೆ ತಿಳಿಯಬೇಕಾಗುವದು. ಕೇಂದ್ರಾಧಿಪತಿಗಳೂ, ತ್ರಿಕೋಣಾಧಿಪತಿಗಳೂ, ಹಿಂದೆ ಹೇಳಿದ ನಾಲ್ಕು ಪ್ರಕಾರಗಳಾದ ಸಂಬಂಧಹೊಂದಿದವರಾದರೆ(ನಾಲ್ಕರಲ್ಲಿ ಯಾವದೇ ಒಂದು ಸಂಬಂಧಯುಕ್ತರಾದರೆ) ವಿಶೇಷ ಶುಭ ಫಲಗಳನ್ನು ಕೊಡುವರೆಂದು ತಿಳಿಯತಕ್ಕದ್ದು. ಆದರೆ ಆ ಗ್ರಹರಿಗೆ ೩-೬-೧೧ನೇ ಸ್ಥಾನಾಧಿಪತಿಗಳ ಸಂಬಂಧವಿರಕೂಡದು. ಮೇಷಲಗ್ನವನ್ನೇ ತಕ್ಕೊಳ್ಳಿರಿ. ರವಿಚಂದ್ರರು ಸಂಬಂಧವಿಶಿಷ್ಟರಾದಲ್ಲಿ ಯೋಗಕಾರಕರಾಗುವರು. ಯಾಕಂದರೆ ಕೇಂದ್ರ ತ್ರಿಕೋಣಾಧಿಪತಿಗಳ ಸಂಬಂಧವಾದಂತಾಗುವದು. ಆದೇ ಈ ಕೇಂದ್ರ ತ್ರಿಕೋಣಾಧಿಪತಿಗಳಿಗೆ ತೃತೀಯ ಷಷ್ಠಾಧಿಪತಿ ಬುಧ ಅಥವಾ ಏಕದಶಾಧಿಪ ಶನಿಯು ಸಂಬಂಧವಾದರೆ ಶುಭಯೋಗವುಂಟಾಗುವದಿಲ್ಲ. ॥ ೧೩ ॥

ಶ್ಲೋ:- ಕೇಂದ್ರತ್ರಿಕೋಣನೇತಾರೌದೋಷಯುಕ್ತಾವಪಿಸ್ವಯಂ ॥
ಸಂಬಂಧಮಾತ್ರಾದ್ಬಲಿನೌಭವೇತಾಂಯೋಗಕಾರಕೌ ॥ ೧೪ ॥

ಟೀ:- ಕೇಂದ್ರತ್ರಿಕೋಣಾಧಿಪತಿಗಳು ತಾವು ಸ್ವತಃ ದೋಷಯುಕ್ತರಾದರೂ, ಆ ಇಬ್ಬರ ಸಂಬಂಧಮಾತ್ರದಿಂದಲೇ ಬಲಿಷ್ಠರಾಗಿ ಯೋಗಕಾರಕರಾಗುವರು.

ವಿವರಣ:- ಕೇಂದ್ರತ್ರಿಕೋಣಾಧಿಪತಿಗಳ ಯೋಗದಲ್ಲಿ ಕೇಂದ್ರಾಧಿಪತಿಯು ಶುಭಗ್ರಹರಿರಬಹುದು ಶುಭಗ್ರಹರಿಗೆ ಕೇಂದ್ರಾಧಿಪತ್ಯ ದೋಷವಿರುವದು. ಆದರೂ ತ್ರಿಕೋಣಾಧಿಪತಿಯು ಸಂಬಂಧವಾದಲ್ಲಿ ಆ ದೋಷವನ್ನೆಣಿಸುವಂತಿಲ್ಲ. ಅಥವಾ ಕೇಂದ್ರತ್ರಿಕೋಣಾಧಿಪತಿಗಳಲ್ಯಾರಾದರೂ ನೀಚ, ಅಸ್ತರಾಗಿರಬಹುದು. ಅದೂ ದೋಷಕರವಾಗುವದಿಲ್ಲ. ಇಲ್ಲವೇ ಈ ಕೇಂದ್ರ ತ್ರಿಕೋಣಾಧಿಪತಿಗಳು ೩-೬-೧೧ನೇ ಸ್ಥಾನಾಧಿಪತಿಗಳಿರಬಹುದು. ಆದರೂ ಈ ಯೋಗಕ್ಕೆ ಭಂಗತರಲಾರದು. ಕೇಂದ್ರದಲ್ಲಿ ದಶಮವೂ ತ್ರಿಕೋಣದಲ್ಲಿ ನವಮವೂ ಬಲಿಷ್ಠಗಳೆಂದು ಹಿಂದೆ ಹೇಳಿದೆ. ನವಮ-ದಶಮಾಧಿಪತಿಗಳ

ಯೋಗವು ವಿಶೇಷ ರಾಜಯೋಗವಾಗುವದು. ಈ ಕೇಂದ್ರಾಧಿಪ-ತ್ರಿಕೋಣಾ
ಧಿಪರ ಯೋಗವು ಎಂಟು ವಿಧವಾಗಿದೆ. ಲಗ್ನ-ಪಂಚಮಾಧೀಶ ಯೋಗ (೧)
ಚತುರ್ಥಪಂಚಮಾಧಿಪಯೋಗ (೩) ಪಂಚಮ-ಸಪ್ತಮಾಧಿಪಯೋಗ (೨) ಚತು
ಪಂಚಮದಶಮಾಧಿಪತಿಯೋಗ (೪) ಲಗ್ನ-ನವಮಾಧಿಪತಿಯೋಗ (೫) ದಶಮ-
ರ್ಥ-ನವಮಾಧಿಪತಿಯೋಗ (೬) ಸಪ್ತಮ-ನವಮಾಧಿಪತಿಯೋಗ (೭) ದಶಮ- ॥ ೧೪ ॥
ನವಮಾಧಿಪ ಸಂಬಂಧ (೮) ಅಂತು ಎಂಟು ವಿಧಗಳು.

ಶ್ಲೋ:- ॥ ನಿವಸೇತಾಂವ್ಯತ್ಯಯೇನತಾವುಭೌಧರ್ಮಕರ್ಮಣೋಃ ॥
ಏಕತ್ರಾನ್ಯತರೋವಾಪಿವಸೇಚ್ಚೇನ್ಯೋಗಕಾರಕೌ ॥ ೧೫ ॥

ಟೀ:- ನವಮ-ದಶಮಾಧಿಪತಿಗಳು ವ್ಯತ್ಯಸ್ತರಾಗಿ, ಅಥವಾ ಒಂದೇಭಾವ
ಗತರಾಗಿ, ಇಲ್ಲವೆ ನವಮ-ದಶಮಾಧಿಪತಿಗಳಲ್ಲೊಬ್ಬರು ಆ ಎರಡು ಸ್ಥಾನಗಳ
ಪೈಕಿ ಎಲ್ಲಾದರೂ ಇರುತ್ತಿದ್ದರೆ ಯೋಗಕಾರಕರಾಗುವರು.

ವಿವರಣ:- ಕೇಂದ್ರಗಳಲ್ಲಿ ದಶಮಕೇಂದ್ರವೂ, ತ್ರಿಕೋಣಗಳಲ್ಲಿ ನವ
ಮವೂ ಬಲಿಷ್ಠವೆಂದು ಹಿಂದೆಯೇ ಹೇಳಿದೆ. ನವಮ-ದಶಮಾಧಿಪತಿಗಳು
ವ್ಯತ್ಯಾಸವಾಗಿ, ಅಂದರೆ ನವಮಾಧಿಪತಿಯು-ದಶಮದಲ್ಲಿ ದಶಮಾಧಿಪತಿಯು
ನವಮದಲ್ಲಿದ್ದರೆ ಯೋಗಕಾರಕರಾಗುವರು. "ಪಂಚಮಂನವಮಂಚೈವ ವಿಶೇ
ಷಂ ಧನಮುಚ್ಯತೇ। ಚತುರ್ಥಂ ದಶಮಂಚೈವ ವಿಶೇಷಂ ಸುಖಮುಚ್ಯತೇ"
ಎಂಬ ಬ್ರಹತ್ಪರಾಶರಹೋರಾಶಾಸ್ತ್ರ ವಚನದಂತೆ. ನವಮವು ಧನಸ್ಥಾನ, ದಶಮ
ವು ಸುಖಸ್ಥಾನವಾದ್ದರಿಂದ ಈ ಯೋಗದಿಂದ ಜಾತಕನಿಗೆ ಧನಾನುಕೂಲತೆ,
ಸುಖಸಮೃದ್ಧಿಯುಂಟಾಗುವದು. ಈ ನವಮ ದಶಮಾಧಿಪತಿಗಳು ಎರಡು
ಸ್ಥಾನಗಳಪೈಕಿ ನವಮ-ಅಥವಾ-ದಶಮಗಳಲ್ಲಿದ್ದರೆ ಯೋಗಕಾರಕರಾಗುವರು.
ನವಮ ದಶಮಾಧಿಪತಿಗಳಲ್ಲಿ ಒಬ್ಬನಾದರೂ ಆ ಎರಡು ಸ್ಥಾನಗಳಪೈಕಿ ಯಾವ
ಸ್ಥಾನದಲ್ಲಿದ್ದರೂ, ಉತ್ತಮ ಯೋಗವೆಂದು ತಿಳಿಯುವದು.

ಉದಾ: ಕನ್ಯಾಲಗ್ನ—ನವಮದಲ್ಲಿ ಬುಧ, ದಶಮದಲ್ಲಿ ಶುಕ್ರರಿದ್ದರೆ-ಇದೊಂದು
ಯೋಗ (೧) ನವಮದಲ್ಲಿ ಶುಕ್ರ-ದಶಮದಲ್ಲಿ ಬುಧ, ಇದೊಂದು ಯೋಗ (೩)
ದಶಮದಲ್ಲಿ ಶುಕ್ರ-ಬುಧರು ಇದೊಂದು ಯೋಗ (೨) ನವಮದಲ್ಲಿ ಬುಧ-ಶುಕ್ರ
ರು. (೪) ದಶಮದಲ್ಲಿ ಒಬ್ಬನೇ ಶುಕ್ರ (೫) ನವಮದಲ್ಲಿ ಒಬ್ಬನೇ ಶುಕ್ರ

(೬) ನವಮದಲ್ಲಿ ಒಬ್ಬನೇ ಬುಧ (೭) ದಶಮದಲ್ಲಿ ಒಬ್ಬನೇ ಬುಧ (೮) ಅಂತೂ
ಇದು ಒಂದೊಂದು ಲಗ್ನಕ್ಕೆ ೮-೮ ಪ್ರಕಾರವಾಗಿ ಒಟ್ಟು ೯೬ ಯೋಗಗಳಾಗು
ವವು. (೧೨) (ಲಗ್ನಗಳಿಂದ ಕೂಡಿ) ಇಲ್ಲಿ ದಿಙ್ಮಾತ್ರವಾಗಿ ಮಿಥುನಲಗ್ನಕ್ಕೆ
ಪೂರ್ತಿಕೊಟ್ಟದೆ. ॥ ೧೫ ॥

॥ ಶ್ಲೋ:- ತ್ರಿಕೋಣಾಧಿಪಯೋರ್ಮಧ್ಯೇಸಂಬಂಧೋಯೇನ ಕೇನಚಿತ್ ॥
ಕೇಂದ್ರಾಧಿಪಸ್ಯ ಬಲಿನೋಭವೇದ್ಯದಿಸಯೋಗಕೃತ್ ॥ ೧೬ ॥

ಟೀ:- ಪಂಚಮಾಧಿಪತಿಗಾಗಲೀ ನವಮಾಧಿಪತಿಗಾಗಲೀ ಬಲಿಷ್ಠನಾದ
ಕೇಂದ್ರಾಧಿಪತಿಯ ಸಂಬಂಧವುಂಟಾದರೆ ಅದು ರಾಜಯೋಗಕಾರಕವಾಗುವದು.

ವಿವರಣ:- ಬಲಿಷ್ಠಕೇಂದ್ರವು ದಶಮವಾಗಿರುವದರಿಂದ ದಶಮಾಧಿಪತಿ
ಯ ಸಂಬಂಧವು ರಾಜಯೋಗಕಾರಕವಾಗುವದು. ಸಂಬಂಧವು ಹಿಂದೆ ಹೇಳಿ
ದ ರೀತಿಯಿಂದ ಚತುರ್ವಿಧವೆಂಬದನ್ನು ಲಕ್ಷ್ಯದಲ್ಲಿಡತಕ್ಕದ್ದು. "ರಾಜಯೋ
ಗವೆಂದರೆ ರಾಜನೇ ಆಗುವ ಯೋಗವೆಂದು ತಿಳಿಯತಕ್ಕದ್ದಲ್ಲ. "ಯೋಗಾ
ನಾಂರಾಜಾ" ಅಂದರೆ ಶುಭಯೋಗವೆಂದರ್ಥ. ॥ ೧೬ ॥

ಶ್ಲೋ:- ॥ ದಶಾಸ್ವಪಿಭವೇದ್ಯೋಗಃ ಪ್ರಾಯಶೋಯೋಗಕಾರಿಣೋಃ ॥
ದಶಾದ್ವಯೀ ಮಧ್ಯಗತಸ್ತದಯುಕ್ ಶುಭಕಾರಿಣಾಂ ॥ ೧೭ ॥

ಟೀ:- ಯೋಗಕಾರಕರಾದ ಎರಡು ಗ್ರಹಗಳ ದಶೆಗಳು ನಡೆಯುವಾಗ
ಆ ಎರಡು ದಶೆಗಳ ಮಧ್ಯದಲ್ಲಿ ಬರುವ ಸಂಬಂಧರಹಿತಗಳಾದ ಗ್ರಹರ ದಶೆಯು
ಲ್ಲಾದರೂ ಹೆಚ್ಚಾಗಿ ಶುಭಯೋಗವೇ ಉಂಟಾಗುವದು.

ವಿವರಣ:- ಈ ಹಿಂದೆ ಹೇಳಿದ ಯೋಗಕಾರಕ ಎರಡು ದಶೆಗಳು ನಡೆ
ಯುವಾಗ ಯೋಗಕಾರಕಸಂಬಂಧರಹಿತವಾದ ಆದರೆ ಶುಭಕಾರಿಗಳಾದ ಗ್ರಹರ
ಅಂತರ್ದಶೆಯಲ್ಲಿಯೂ ಶುಭವೇ ಆಗುವದು. ಯೋಗಕಾರಕ ದಶೆಯು ನಡೆ
ಯುವಾಗ ಬರುವ ಅಂತರ್ದಶಾ ವಿದಶಾ ಮೊದಲಾದ ಶುಭಗ್ರಹರ ದಶೆಗಳೂ
ಶುಭಕರಗಳೇ ಆಗುವವು. ೩-೬-೮-೧೧-೧೨ ಈ ಸ್ಥಾನಾಧಿಪತಿಗಳ ಹೊರತಾಗಿ
ಉಳಿದ ಸ್ಥಾನಾಧಿಪತಿಗಳು ಹಿಂದೆ ಹೇಳಿದ ರೀತಿಯಿಂದ ಸಾಮಾನ್ಯ ಶುಭಪ್ರದಗ

ಗ್ರಹಗಳಿಗೆ ಸಂಬಂಧವಿಲ್ಲದಿದ್ದ
ಳೆಂದು ತಿಳಿಯತಕ್ಕದ್ದು. ತ್ರಿಕೋಣ ಕೇಂದ್ರ ಅಧಿಪತಿಗಳ ಸಂಬಂಧವಿಲ್ಲದಿದ್ದ ಅಶುಭವನ್ನುಂಟು
ರೂ ಇವರ ದಶಾ ನಡೆಯುವಾಗ ಶುಭಗ್ರಹರ ಅಂತರ್ದಶೆಗಳು ಅಶುಭವನ್ನುಂಟು ||೧೭||
ಮಾಡದೇ ಶುಭಫಲವನ್ನೇ ಕೊಡುವರೆಂದರ್ಥ.

ಶ್ಲೋ: ಯೋಗಕಾರಕ ಸಂಬದ್ಧಾಃ ಪಾಪಿನೋಪಿಗ್ರಹಾಃ ಸ್ಮೃತಃ ||
ತತ್ತದ್ಭುಕ್ತ್ಯನುಸಾರೇಣದಿಶೇಯುರ್ಯೋಗಜಂಫಲಂ ||೧೮||

ಟೀ: ಯೋಗಕಾರಕ ಗ್ರಹಗಳ ಸಂಬಂಧವುಳ್ಳ ಪಾಪಗ್ರಹರಾದರೂ ಯೋಗಕಾರಕ ಗ್ರಹಾನುಸಾರವಾಗಿ ತಮ್ಮ ಅಂತರ್ದಶಾದಿ ಕಾಲಗಳಲ್ಲಿ ಶುಭಫಲವನ್ನೇ ಕೊಡುವರು.

ವಿವರಣಃ- ತೃತೀಯ ಷಷ್ಠ ಏಕಾದಶಸ್ಥಾನಾಧಿಪತಿಗಳೇ ಮೊದಲಾದ ಅನಿಷ್ಟಕಾರಕಗ್ರಹಗಳಾದರೂಯೋಗಕಾರಕರಹಿಂದೆಹೇಳಿದಸಂಬಂಧಉಂಟಾದರೆ ಆ ರಾಜಯೋಗಕಾರಕರ ಮಹಾದಶೆ ನಡೆಯುವಾಗ ಈ ಸಂಬಂಧವುಳ್ಳ ಪಾಪಗ್ರಹಗಳ ಅಂತರ್ದಶೆಯು ನಡೆಯುವಾಗ ಯೋಗಕಾರಕನು ಕೊಡುವಂತೆ ಶುಭವನ್ನೇ ಕೊಡುವರು. ಅಥವಾ ಅದೇ ಯೋಗಕಾರಕರ ಸಂಬಂಧವುಳ್ಳ ಅನಿಷ್ಟ ಗ್ರಹರ ಮಹಾದಶೆಯಲ್ಲಿ ಯೋಗಕಾರಕ ಭುಕ್ತಿ ಬಂದಾಗಲೂ ಶುಭಫಲವೇ ಉಂಟಾಗುವದು. ಇವುಗಳ ಫಲವಾದರೂ ಯೋಗಕಾರಕರ ರೀತಿಯದೇ ಆಗುವದೆಂದಭಿಪ್ರಾಯ. ||೧೮||

ಶ್ಲೋಃ ಕೇಂದ್ರ ತ್ರಿಕೋಣಾಧಿಪಯೋರೇಕತ್ವೇ ಯೋಗಕಾರಕೌ ||
ಅನ್ಯ ತ್ರಿಕೋಣಾಧಿಪತಿನಾಸಂಬಂಧೋಯದಿ ಕಿಂಪರಂ ? ||೧೯||

ಟೀ: ಕೇಂದ್ರ ತ್ರಿಕೋಣಾಧಿಪತಿಗಳಲ್ಲಿ ಒಬ್ಬೊಬ್ಬರದೇ ಸಂಬಂಧವಿದ್ದರೂ ಯೋಗಕಾರಕರಾಗುತ್ತಾರೆ. ಆದಕ್ಕೆ ಬೇರೆ ತ್ರಿಕೋಣಾಧಿಪತಿಯ ಸಂಬಂಧವುಂಟಾದರೆ ಕೇಳುವದೇನು ?

ವಿವರಣೆ: ಇಲ್ಲಿ ಎರಡು ನಮೂನೆಯ ಅರ್ಥವಾಗುತ್ತಿದೆ. ಒಂದು ಕೇಂದ್ರಾಧಿಪತಿಗ್ರಹ. ಇನ್ನೊಬ್ಬ ತ್ರಿಕೋಣಾಧಿಪತಿಗ್ರಹ. ಹೀಗೆ ಒಬ್ಬೊಬ್ಬ ಗ್ರಹರು ಕೂಡಿದಲ್ಲಿ ಯೋಗಕಾರಕರಾಗುತ್ತಾರೆ. ಈ ಯೋಗಕಾರಕ ಎರಡು

ಗ್ರಹಗಳಿಗೆ ಮತ್ತೊಂದು ತ್ರಿಕೋಣಾಧಿಪತಿಯ ಸಂಬಂಧವುಂಟಾದರೆ ಕೇಳುವದೇನಿದೆ ? ಇನ್ನು ಒಂದೇ ಗ್ರಹರಾದರೂ ಕೇಂದ್ರ ತ್ರಿಕೋಣಾಧಿಪತಿಯಾಗಬಹುದು. ವೃಷಭ ಲಗ್ನಕ್ಕೆ ನವಮ-ದಶಮ (ತ್ರಿಕೋಣ ಕೇಂದ್ರ) ಅಧಿಪತಿಯು ಶನಿಯಾಗುವನು. ಇವನಿಗೆ ಅನ್ಯ ತ್ರಿಕೋಣಾಧಿಪತಿ (ಪಂಚಮ) ಬುಧನ ಸಂಬಂಧವಾದರೆ ಉತ್ತಮಯೋಗ. ಕರ್ಕಲಗ್ನಕ್ಕೆ ತ್ರಿಕೋಣ ಕೇಂದ್ರಾಧಿಪತಿ ಕುಜನೊಬ್ಬನೇ ಆಗುವನು. ಅನ್ಯ ತ್ರಿಕೋಣಾಧಿಪತಿ ಗುರುವಿನ ಸಂಬಂಧವಾದರೂ ಅಂತೆಯೇ. ತುಲಾಲಗ್ನಕ್ಕೆ ಕೇಂದ್ರತ್ರಿಕೋಣಾಧಿಪತಿ ಶನಿಯಾಗುತ್ತಾನೆ. ಅನ್ಯ ತ್ರಿಕೋಣಾಧಿಪತಿ ಬುಧನ ಸಂಬಂಧವಾದರೂ ಹಾಗೆಯೇ ಮೂಲದಲ್ಲಿ "ಯೋಗಕಾರಕೌ" ಎಂದಿರುವವಕ್ಕೆ ಸರಿಯಾದ ಅರ್ಥ. ಹೇಗೆಂದರೆ ಮಿಥುನ ಲಗ್ನವನ್ನೇ ಹಿಡಿಯಿರಿ. ಕೇಂದ್ರಾಧಿಪತಿ ಬುಧ ತ್ರಿಕೋಣಾಧಿಪತಿ ಶುಕ್ರ ಇವರಿಬ್ಬರ ಸಂಬಂಧವೇ ಯೋಗಕಾರಕವಾಗುವದು. ಇನ್ನೊಂದು ತ್ರಿಕೋಣಾಧಿಪತಿ ಶನಿಯ ಯೋಗವಾದರೆ ಕೇಳುವದೇನಿದೆ? ವಿಶೇಷ ರಾಜಯೋಗವಾಗುವದೆಂಬದರಲ್ಲಿ ಸಂಶಯವಿಲ್ಲ. ಮೇಷಲಗ್ನಕ್ಕೆ ಕೇಂದ್ರತ್ರಿಕೋಣಾಧಿಪತಿಗಳು ಚಂದ್ರಸೂರ್ಯರಾಗಿದ್ದು ಸಂಬಂಧವುಳ್ಳವರಾದರೆ ಅದಕ್ಕೆ ಅನ್ಯ ತ್ರಿಕೋಣಾಧಿಪತಿ ಗುರುವಿನ ಸಂಬಂಧವಾದರೆ ವಿಶೇಷ ರಾಜಯೋಗವಾಗುವದು. ಇತ್ಯಾದಿ ||೧೯||

ಶ್ಲೋಃ- ಯದಿಕೇಂದ್ರೇತ್ರಿಕೋಣೇವಾನಿವಸೇತಾಂ ತಮೋಗ್ರಹೌ।
ನಾಥೇನಾನ್ಯತರೇಣಾಪಿಸಂಬಂಧಾದ್ಯೋಗಕಾರಕೌ ||೨೦||

ಟೀಃ- ಕೇಂದ್ರದಲ್ಲಾಗಲೀ ತ್ರಿಕೋಣದಲ್ಲಾಗಲೀ ರಾಹು ಕೇತುಗಳಿದ್ದು ಅವುಗಳಿಗೆ ತ್ರಿಕೋಣಾಧಿಪತಿಯು ಇಲ್ಲವೇ ಕೇಂದ್ರಾಧಿಪತಿಯು ಸಂಬಂಧವುಂಟಾದರೆ ಆ ರಾಹು ಕೇತುಗಳು ಯೋಗಕಾರಕರಾಗುವರು.

ವಿವರಣ:- ಕೇಂದ್ರದಲ್ಲಿರುವ ರಾಹು-ಕೇತುಗಳಿಗೆ ಕೇಂದ್ರಾಧಿಪತಿಯ ಸಂಬಂಧವಾಗಲೀ ತ್ರಿಕೋಣಾಧಿಪತಿಯ ಸಂಬಂಧ ಉಂಟಾಗಲೀ ಇಲ್ಲವೇ ತ್ರಿಕೋಣದಲ್ಲಿರುವ ರಾಹು ಕೇತುಗಳಿಗೆ ತ್ರಿಕೋಣ ಅಥವಾ ಕೇಂದ್ರಾಧಿಪತಿಯ ಸಂಬಂಧವುಂಟಾದರೂ ಆ ರಾಹು ಕೇತುಗಳು ಯೋಗಕಾರಕರಾಗಿ ಶುಭವನ್ನುಂಟು ಮಾಡುವರೆಂದು ಭಾವವು. ||೨೦||

ರಾಜಯೋಗ ಭಂಗ

ಶ್ಲೋಃ. ಧರ್ಮಕರ್ಮಾಧಿನೇತಾರೌರಂಧ್ರಲಾಭಾಧಿಪೌಯದಿ।
ತಯೋಃಸಂಬಂಧಮಾತ್ರೇಣ ನಯೋಗಂ ಲಭತೇ ನರಃ ||೨೧||

ಟೀ:- ನವಮ-ದಶಮ (ತ್ರಿಕೋಣ-ಕೇಂದ್ರ) ಅಧಿಪತಿಗಳೇ ಅಷ್ಟಮ
ಏಕಾದಶಾಧಿಪತಿಗಳಾದಲ್ಲಿ ಆ ಸಂಬಂಧಮಾತ್ರದಿಂದ ಯೋಗವು ಭಂಗವಾಗು
ವದು.

ವಿವರಣ:- ಈ ಯೋಗವು ಮೇಷಲಗ್ನ, ಮಿಥುನ ಲಗ್ನಗಳಿಗೆ ಮಾತ್ರ
ಸಂಬಂಧಿಸುವದು. ಮಿಥುನಲಗ್ನಕ್ಕೆ ನವಮಾಧಿಪತಿ ಶನಿಯೇ ಅಷ್ಟಮಾಧಿಪತಿ
ಯಾಗುವನು. ನವಮ-ಕುಂಭವೂ ಮಕರ ಅಷ್ಟಮವೂ ಆಗುವದು. ಆ
ಎರಡು ಸ್ಥಾನಗಳಿಗೂ ಶನಿಯೇ ಅಧಿಪತಿಯು-ಮೇಷಲಗ್ನಕ್ಕೆ ದಶಮ ಹಾಗೂ
ಏಕದಶಸ್ಥಾನಗಳಿಗೆ ಶನಿಯೇ ಅಧಿಪತಿಯಾಗುವನು. ಕಾರಣ ಮೇಷ, ಮಿಥು
ನ ಲಗ್ನಗಳಿಗೆ ಶನಿಯು ತ್ರಿಕೋಣ ಕೇಂದ್ರಾಧಿಪತಿಯಾದರೂ ಯೋಗಕಾರಕನಾ || ೩೧ ||
ಗುವದಿಲ್ಲವೆಂದಭಿಪ್ರಾಯ.

|| ಇತಿ ರಾಜಯೋಗಾಧ್ಯಾಯಃ ||

|| ಅಥ ಆಯುರ್ದಾಯಾಧ್ಯಾಯಃ ||

ಶ್ಲೋ:- ಅಷ್ಟಮಂಹ್ಯಾಯುಷಃಸ್ಥಾನಂಅಷ್ಟಮಾದಷ್ಟಮಂಚಯತ್ ||
ತಯೋರಪಿವ್ಯಯಸ್ಥಾನಂಮಾರಕಸ್ಥಾನಮುಚ್ಯತೇ || ೩೨ ||

ಟೀ: ಲಗ್ನಾತ್ ಅಷ್ಟಮ ಸ್ಥಾನಕ್ಕೆ "ಆಯುಷ್ಯಸ್ಥಾನ" ವೆನ್ನುವರು.
ಅಷ್ಟಮಕ್ಕಿಂತ ಅಷ್ಟಮ ಅಂದರೆ ತೃತೀಯ ಸ್ಥಾನವೂ ಸಹ ಆಯುಷ್ಯ ಸ್ಥಾನವು.
ಇವುಗಳ ವ್ಯಯಸ್ಥಾನಗಳಿಗೆ "ಮಾರಕ" ಸ್ಥಾನಗಳೆನ್ನುವರು.

ವಿವರಣ: ಮೇಷಲಗ್ನಕ್ಕೆ ವೃಶ್ಚಿಕವು ಅಷ್ಟಮವಾಗುವದು. ಆದು
ಆಯುಷ್ಯ ಸ್ಥಾನವಾಯಿತು. ಆ ವೃಶ್ಚಿಕಕ್ಕೆ ವ್ಯಯಸ್ಥಾನವು "ತುಲೆ"ಯಾಗು
ವದು. ಅಂದರೆ ಲಗ್ನದಿಂದ ಸಪ್ತಮವಾಯಿತು. ಅರ್ಥಾತ್ **ಮಾರಕ** ಸ್ಥಾನ
ವಾಯಿತು. ಮೇಷಕ್ಕೆ ತೃತೀಯ ಸ್ಥಾನವೆಂದರೆ ಮಿಥುನ. ಇದೂ ಆಯುಷ್ಯ
ಸ್ಥಾನ. ಇದರ ವ್ಯಯಸ್ಥಾನ ಎಂದರೆ "ವೃಷಭ" ವಾಗುವದು. ಇದು "ಮಾರಕ"
ಸ್ಥಾನವಾದಂತಾಯಿತು. ಅಂತೂ ಯಾವದೇ ಲಗ್ನಕ್ಕೆ ಲಗ್ನದಿಂದ ದ್ವಿತೀಯ,
ಸಪ್ತಮ, ಈ ಎರಡು ಸ್ಥಾನಗಳು ಮಾರಕ ಸ್ಥಾನಗಳಾಗುವವು. || ೩೩ ||

ಶ್ಲೋ: ತತ್ರಾಪ್ಯಾದ್ಯವ್ಯಯಸ್ಥಾನಾತ್ ದ್ವಿತೀಯಂಬಲವತ್ತರಂ ||
ತದೀಶಿತುಸ್ತತ್ರಗತಾಃ ಪಾಪಿನಸ್ತೇನ ಸಂಯುತಾಃ || ೩೪ ||
ತೇಷಾಂದಶಾವಿಪಾಕೇಷು ಸಂಭವೇನಿಧನಂ ನೃಣಾಂ ||
ತೇಷಾಮ ಸಂಭವೇ ಸಾಕ್ಷಾದ್ವ್ಯಯಾಧೀಶದಶಾಸ್ವಪಿ || ೩೫ ||

ಟೀ: ಈ ಹಿಂದೆ ಹೇಳಿದ ಮಾರಕ ಸ್ಥಾನಗಳಲ್ಲಾದರೂ ಸಪ್ತಮಕ್ಕಿಂತ
ದ್ವಿತೀಯ **ಸ್ಥಾ**ನವು ಹೆಚ್ಚಿನ ಮಾರಕವು. ಈ ಮಾರಕ ಸ್ಥಾನಾಧಿಪತಿಗಿಂತ
ಮಾರಕಾಧಿಪತಿಯಿಂದ ಕೂಡಿದ ಮಾರಕಸ್ಥಾನದಲ್ಲಿರುವ ಗ್ರಹರು ವಿಶೇಷ ಮಾರ
ಕರಾಗುವರು. ಈ ಮಾರಕ ಗ್ರಹರ ದಶಾಭುಕ್ತಿ ದಶಾಭುಕ್ತಿಗಳಲ್ಲಿ ಸಂಭವ
ವುಂಟಾಗುತ್ತಿರಲು ಮನುಷ್ಯರಿಗೆ ಮರಣ ಸಂಭವಿಸುವದು. ಆ ಮಾರಕ ಗ್ರಹ
ರ ಅಸಂಭವದಲ್ಲಿ ವ್ಯಯಾಧಿಪನ ದಶೆ ಅಥವಾ ಭುಕ್ತಿಗಳಲ್ಲಿ ಮರಣವುಂಟಾ
ಗುವದು.

ವಿವರಣ: ಅಷ್ಟಮವು ಆಯುಷ್ಯಸ್ಥಾನವಾಗಿದ್ದು ಆ ಅಷ್ಟಮಕ್ಕೆ ವ್ಯಯ
ಸ್ಥಾನವಾದ ಸಪ್ತಮ. ತೃತೀಯ ಆಯುಷ್ಯಸ್ಥಾನಕ್ಕೆ ವ್ಯಯವಾಗಿದ್ದ ದ್ವಿತೀಯ
ಸ್ಥಾನವೂ ಮಾರಕವೆಂದು ಹಿಂದೆಯೇ ಹೇಳಿದೆ. ದ್ವಿತೀಯಸ್ಥಾನವು ವಿಶೇಷ
ಮಾರಕವೆಂದೂ ಹೇಳಿದೆ ಈ ಶ್ಲೋಕದಲ್ಲಿರುವ "ತದೀಶಿತುಃ" ಆಮಾರಕಾಧಿ
ಪತಿಗಿಂತ ಎಂಬ ಅರ್ಥಕ್ಕಿಂತ ಬೇರೆ ಸಮಂಜಸವಾದ ಅರ್ಥವೇ ಉಂಟು. ಅಂದ
ರೆ ದ್ವಿತೀಯ ಮಾರಕಸ್ಥಾನಾಧಿಪತಿಯ ದಶಾಂತರ್ದಶೆಗಳಲ್ಲಿ "**ಸಂಭವವಾದಲ್ಲಿ**"
ಮನುಷ್ಯನಿಗೆ ಮರಣವು ಸಂಭವಿಸುವದು ಎಂಬದಾಗಿ ಮುಂದಿನ ಶ್ಲೋಕಕ್ಕೆ
ಸಂಬಂಧವನ್ನು ಹೊಂದಿಸುವದು. ಇಷ್ಟು ಹೇಳಿ "ತತ್ರಗತಾಃ" ಇತ್ಯಾದಿಗಳ
ಅರ್ಥವನ್ನು ಅನ್ವಯಿಸುವರು. ಆ ದ್ವಿತೀಯ ಸ್ಥಾನವನ್ನು ಹೊಂದಿರುವ, ತ್ರಿಷ
ಡಾಯಾಧಿಪತಿಗಳಾದ ಗ್ರಹಗಳ ದಶಾಭುಕ್ತಿಗಳಲ್ಲಿ ಸಂಭವವಾಗುತ್ತಿರಲು ಮರಣ
ವನ್ನು ಹೇಳತಕ್ಕದ್ದು. ಒಟ್ಟಿನಲ್ಲಿ ಮಾರಕಾಧಿಪತಿಯ ಸಂಬಂಧ ವಿಶಿಷ್ಟಗಳಾದ
ಮಾರಕಾಧಿಪನ ಸ್ಥಾನದಲ್ಲಿರುವ, ಪಾಪಗ್ರಹರ ಎಂಬರ್ಥ. ದಶಾಭುಕ್ತಿ ಅಂತ
ರ್ದಶಾ ಅಥವಾ ಅಂತರಾಂತರ ದಶಾ ಭುಕ್ತಿಗಳಲ್ಲಿ ಮರಣವನ್ನು ಹೇಳತಕ್ಕದ್ದು.

"ಸಂಭವವಾಗುತ್ತಿರಲು" ಅಂದರೆ ಆಮಾರಕಾಧಿಪರ ದಶಾಂತರ್ದಶಾ
ಮೊದಲಾದವುಗಳು ಪುರುಷನ ಆಯುಷ್ಯದ ಅಂತ್ಯದಲ್ಲಿ ಬಂದಾಗ ಎಂದರ್ಥವಾ
ಡಬೇಕಾಗುವದು. ಆಯುರ್ದಾಯಗಳಲ್ಲಿ ಅಲ್ಪ, ಮಧ್ಯಮ, ದೀರ್ಘ ಎಂಬ

ಡಾಗಿ ಮೂರು ವಿಧಗಳು. ಗ್ರಂಥಾಂತರದಿಂದ ಆಯುರ್ದಾಯವನ್ನು ನಿಶ್ಚಯಿಸಿ
ಕೊಂಡು ಅವುಗಳ ಅಂತ ಸಮಯದಲ್ಲಿ ಬರುವ ದಶಾಂತರ್ದಶಾ ಮೊದಲಾದ
ಮರಣಕಾರಕ ಗ್ರಹಸ್ಥಿತಿಯನ್ನೂಹಿಸಿ ಮರಣವನ್ನು ಹೇಳಬೇಕೆಂದರ್ಥ. ಒಬ್ಬ
ಮನುಷ್ಯನಿಗೆ ದೀರ್ಘಾಯುರ್ಯೋಗವಿದ್ದು ನೂರಾರು ವರ್ಷ ಬದುಕುವ ಯೋ
ಗವು ಬಲಿಷ್ಠವಾಗಿರುವಾಗ ಆ ಮೊದಲು ಎಷ್ಟೋ ಮಾರಕದಶಾಂತರ್ದಶೆಗಳು
ಬಂದು ಹೋಗಬಹುದು. ಆ ಸಮಯ ಸಾಕ್ಷಾತ್ ಮರಣವನ್ನು ಹೇಳದೇ
ಮರಣಸದೃಶವಾದ ಆಪತ್ತನ್ನು ಸೂಚಿಸಬಹುದು. ಹೀಗೆ ಸಂಭವವಿಲ್ಲದಿರುವಾ
ಗ ಸಾಕ್ಷಾತ್ತಾಗಿ ದ್ವಿತೀಯಮಾರಕಾಧೀಶನ ಸಂಬಂಧವಿದ್ದ, ದ್ವಿತೀಯ ಮಾರ
ಕಸ್ಥಾನಸ್ಥಿತಿಗ್ರಹನ ದಶಾಭುಕ್ತಿಗಳಲ್ಲಿ ಮರಣವಾಗಲಾರದು. ಸಂಭವಕಾಲಕ್ಕೆ
ಒರೇ ವ್ಯಯಾಧಿಪತಿಯ ದಶೆಯಾದಗೂ ಮಾರಕವಾಗಬಹುದು. ಹೀಗೆ ಮೂಲ
ಆಯುರ್ದಾಯವನ್ನು ನಿಶ್ಚಯಿಸಿಕೊಳ್ಳಬೇಕು. (ನಮ್ಮಿಂದ ತಯಾರಿಸಲ್ಪಟ್ಟ
ದ್ವಾದಶಾಭಾವ ಎಂಬ ಗ್ರಂಥದಲ್ಲಿಯ ಆಯುರ್ದಾಯ ಪ್ರಕರಣ ನೋಡಿರಿ.) ॥ ೨೪ ॥

ಶ್ಲೋ:- ಅಲಾಭೇ ಪುನರೇತೇಷಾಂ ಸಂಬಂಧೇನವ್ಯಯೇಶಿತುಃ ॥ ೨೫ ॥
ಕ್ವಚಿಚ್ಛುಭಾನಾಂಚದಶಾಸ್ವಷ್ಟಮೇಶದಶಾಸುಚ

ಟೀಃ ವಿವರಣಃ- ಹಿಂದೆ ಹೇಳಿದ ಮಾರಕ ದಶೆಗಳ ಅಸಂಭವದಲ್ಲಿ
ವ್ಯಯಾಧಿಪತಿಯ ಸಹಾವಸ್ಥಾನ ಮೊದಲಾದ ಸಂಬಂಧಯುಕ್ತರಾದ ಶುಭ
ಗ್ರಹರ ದಶಾಭುಕ್ತಿಗಳಲ್ಲಾದರೂ, ಕ್ವಚಿತ್ತಾಗಿ ಮರಣವುಂಟಾಗಬಹುದು.
ಅಥವಾ ಅಷ್ಟಮಾಧಿಪತಿಯ - ದಶಾಭುಕ್ತಿಗಳಲ್ಲಾದರೂ ಮರಣವಾಗ ॥ ೨೫ ॥
ಬಹುದು

ಶ್ಲೋಃ- ಕೇವಲಾನಾಂಚಪಾಪಾನಾಂದಶಾಸುನಿಧನಂ ಕ್ವಚಿತ್ ॥
ಕಲ್ಪನೀಯಂ ಬುಧೈ ಸ್ಸರ್ವೇಣಾಂಮಾರಕಾನಾಮದರ್ಶನೇ ॥೨೬॥

ಟೀಃ ವಿವರಣಃ ಅಥವಾ ಅಸಂಭವವಾದಲ್ಲಿ ಸಂಬಂಧ ರಹಿತ
ಗಳಾದ ಪರಂತು, ಪಾಪಿಗಳಾದ (ತ್ರಿಷಡಾಯಾಧಿಪತಿ) ಗ್ರಹರ ದಶಾಂತರ್ದಶೆ
ಗಳಲ್ಲಾಗಲೀ ಮರಣವನ್ನು ಹೇಳುವದು. ಹೀಗೆ ಸಾಕ್ಷಾತ್ ಮಾರಕ ದಶಾಂ
ತರ್ದಶಾಂಭುಕ್ತಿಗಳು (ಆಯಾಯ ಆಯುರ್ದಾಯದ ಅಂತ್ಯದೊಳಗೆ) ಕಂಡು
ಬಾರದಿದ್ದಲ್ಲಿ ಹಿಂದೆ ಹೇಳಿದಂತೆ ಪರಂಪರೆಯಂತೆ ಗ್ರಹಗಳಿಗೆ ಮಾರಕತ್ವವನ್ನು

ಊಹಿಸಿ ಹೇಳತಕ್ಕದ್ದು. ಇಲ್ಲಿ ಆಯುರ್ದಾಯ ವಿಚಾರ ಅತ್ಯಾವಶ್ಯಕ. ಇಲ್ಲ
ವಾದರೆ ಮಾರಕತ್ವವೆಂದರೆ ಪೀಡಾಕರತ್ವವೆಂದೇ ಅರ್ಥ ॥ ೨೭ ॥

ಶ್ಲೋ:- ಮಾರಕೈಃ ಸಹ ಸಂಬಂಧಾನ್ನಿಹಂತಾಪಾಪಕೃಚ್ಛನಿಃ ॥
ಅತಿಕ್ರಮ್ಯೇತರಾನ್ ಸರ್ವಾನ್ ಭವತ್ಯೇವನ ಸಂಶಯಃ ॥೨೮ ॥

ಟೀ: ಹಿಂದೆ ಹೇಳಿದಂತೆ ಮಾರಕಗ್ರಹರ ಸಂಬಂಧ ವಶದಿಂದ ಉಳಿದೆಲ್ಲ
ಮಾರಕಗ್ರಹಗಳಿಗಿಂತ ಶನಿಯು ವಿಶೇಷ ಮಾರಕನಾಗುವದರಲ್ಲಿ ಸಂಶಯ
ವಿಲ್ಲ.

ವಿವರಣಃ "ಶನಿಯು ಸ್ವಭಾವತ: "ಮೃತ್ಯುಕಾರಣ ವಿಪತ್ಸಂಪತ್ ಪ್ರ
ದಾತಾಶನಿ:" ಎಂಬಂತೆ ಮರಣಕಾರಕಗ್ರಹನಾಗಿರುವನು. ಪಾಪಕೃತ್ ಅಂದ
ರೆ ಹಿಂದೆ ಹೇಳಿದ ರೀತಿಯಿಂದ ತ್ರಿಷಡಾಯಾಧಿಪತಿತ್ವಮೊದಲಾದ ಕಾರಣ
ದಿಂದಲೇ ಪಾಪಿಯಾದ ಶನಿಯು ದ್ವಿತೀಯ ಸಪ್ತಮಾದಿ ಮಾರಕಸ್ಥಾನಾಧಿ
ಪತಿಗಳ ಸಂಬಂಧವಶನಾಗಿ ವಿಶೇಷ ಮಾರಕನಾಗುವದರಲ್ಲಿ ಸಂಶಯವೇನು?
ಇದೇ ಸ್ಥಿತಿಯಲ್ಲಿ ಮಾರಕರಾದ ಅನ್ಯಗ್ರಹರನ್ನು ಮೀರಿ ಸ್ವಭಾವತಃ ಮಾರ
ಕನಾದ ಶನಿಯು ಹೆಚ್ಚಿನ ಮಾರಕನಾಗಿರುವನು ಎಂದರ್ಥ. ಉದಾಃ—
ಈ ಕುಂಡಲಿ ನೋಡಿರಿ

	ಚಂ. ರಾ.	ಲಗ್ನ	ಶನಿ
ಬುಧ ರವಿ ಗುರು			
ಶುಕ್ರ		ಕುಜ. ಕೇತು.	

ಈ ಕುಂಡಲಿಯಲ್ಲಿ ವೃಷಭ ಲಗ್ನವಿದ್ದು ಬುಧನು ದ್ವಿತೀಯಾಧಿಪತಿ
ಯಾಗಿರುವರಿಂದ ಮಾರಕ. ಕುಜನು ಸಪ್ತಮಾಧಿಪತಿಯಾದ್ದರಿಂದ ಮಾರಕ.
ಗುರುವು ಅಷ್ಟಮ ಏಕಾದಶಾಧಿಪತಿಯಾಗಿರುವರಿಂದ ಮಾರಕ. ಆದರೂ ದ್ವಿತೀ
ಯಮಾರಕ ಸ್ಥಾನದಲ್ಲಿದ್ದ ದ್ವಿತೀಯೇಶಬುಧನ ಅನ್ಯೋನ್ಯರಾಶಿ ಸ್ಥಿತಿ ಸಂಬಂಧ
ವಿದ್ದ ಶನಿಯು ಸ್ವಭಾವಮಾರಕ ನಾದ್ದರಿಂದ ಮಾರಕತ್ವದಲ್ಲಿ ಆ ಎಲ್ಲಾ
ಗ್ರಹರನ್ನು ಮೀರುವನು. ಬುಧ, ಕುಜ, ಗುರು ಇವರು ತಂತಮ್ಮ ದಶಾ
ಭುಕ್ತಿಗಳಲ್ಲಿ ಕಷ್ಟಪ್ರದರಾಗಬಹುದು. ಆದರೂ ಸಾಕ್ಷಾತ್ ಶನಿಯೇ ಮಾರ
ಕನಾಗುವನು. ಇವನ ದಶಾಭುಕ್ತಿಗಳಲ್ಲಿ ಮರಣಯೋಗವಾಗುವದೆಂದು
ಅಭಿಪ್ರಾಯವು. || ೨೭ ||

|| ಇತಿ ಆಯುರ್ದಾಯಾಧ್ಯಾಯಃ ||

|| ಅಥ ದಶಾಫಲಾಧ್ಯಾಯಃ ||

ಶ್ಲೋಃ ನದಿಶೇಯುರ್ಗ್ರಹಾಃ ಸರ್ವೇಸ್ವದಶಾಸು ಸ್ವಭುಕ್ತಿಷು |
ಶುಭಾಶುಭಫಲಂನೃಣಾಂ ಆತ್ಮ ಭಾವಾನುಸಾರತಃ || ೨೮ ||

ಆತ್ಮಸಂಬಂಧಿನೋಯೇಚಯೇವಾನಿಜ ಸಧರ್ಮಿಣಃ ||
ತೇಷಾಮಂತರ್ದಶಾಸ್ವೇವ ದಿಶಂತಿಸ್ವದಶಾ ಫಲಂ || ೨೯ ||

ಟೀಃ ಎಲ್ಲ ಗ್ರಹರೂ ತಮ್ಮ ದಶೆಗಳಲ್ಲಿ ತಮ್ಮ ಭುಕ್ತಿಗಳ ಕಾಲದಲ್ಲಿ
ತಮ್ಮ ಭಾವಕ್ಕನುಗುಣವಾದ ಶುಭಾಶುಭಫಲಗಳನ್ನು ಕೊಡುವದಿಲ್ಲ. ತಮ್ಮ
ಸಂಬಂಧ ಉಳ್ಳಗ್ರಹರ ಭುಕ್ತಿಬಂದಾಗ ಮತ್ತು ತಮಗೆ ಸಮಾನರಾದ ಗ್ರಹರ
(ಸಮಾನಧರ್ಮವುಳ್ಳ) ಭುಕ್ತಿಬಂದಾಗ ತಮ್ಮ ದಶೆಗನುಗುಣವಾದ ಫಲಗಳನ್ನು
ಕೊಡುವರು.

ವಿವರಣಃ ಸೂರ್ಯಾದಿಗ್ರಹಗಳ ಮಹಾದಶೆಗಳ ಆದಿಯಲ್ಲಿ ಆಯಾಯ
ಗ್ರಹಗಳ ಭುಕ್ತಿಗಳು ಬರುವವಷ್ಟೇ? ತಮ್ಮದೇ ದಶೆಯಲ್ಲಿ ಬರುವ ತಮ್ಮ ಭುಕ್ತಿ
ಯಲ್ಲಿ ತಮ್ಮ ತಮ್ಮ ಭಾವ ಅಂದರೆ ಸ್ವರಾಶಿ ಉಚ್ಚರಾಶಿ ಮೊದಲಾದ ಇಷ್ಟ

ಸ್ಥಾನದಲ್ಲಿದ್ದರೂ ಅಥವಾ ಆ ಭಾವಗಳಿಗೆ ಅಧಿಪತಿಯಾಗಿದ್ದರೂ ಅವುಗಳಿಗೆ
ಸಂಬಂಧಪಟ್ಟ ಶುಭಫಲಗಳನ್ನು ಕೊಡುವದಿಲ್ಲ. ಅದರಂತೆ ನೀಚಸ್ಥಾನಸ್ಥಿ
ತ್ಯಾದಿಸಂಬಂಧವಿದ್ದರೂ ಅಶುಭ ಫಲಗಳನ್ನು ಕೊಡುವದಿಲ್ಲ. (ತಟಸ್ಥರೆನ್ನಬ
ಹುದೇ?) ಅಥವಾ ಆತ್ಮಭಾವವೆಂದರೆ ಆಯಾಯ ಗ್ರಹರ ಸ್ವಭಾವಕ್ಕನುಗುಣ
ವಾದ ಶುಭಾ ಶುಭಫಲಗಳನ್ನು ಕೊಡುವದಿಲ್ಲವೆಂದೂ ಅರ್ಥಮಾಡಬಹುದು.
ಉದಾಃ- ಸೂರ್ಯಾದಾತ್ಮ ಪಿತೃಪ್ರಭಾವನಿರುಜಾಶಕ್ತಿಶ್ರಿಯಶ್ಚಿಂತಯೇತ್''
ಇತ್ಯಾದಿ ಸೂರ್ಯನಾದರೆ ಆತ್ಮಪ್ರಭಾವ ಮೊದಲಾದ ತನ್ನ ಕಾರಕತ್ವ ಗುಣಲ
ಕ್ಷಣವಾದ ಫಲವನ್ನು ಕೊಡುವದಿಲ್ಲ. ಇದರಂತೆ ಎಲ್ಲ ಗ್ರಹಗಳಿಗೂ ಊಹಿಸು
ವದು.

ಇನ್ನು ತಂತಮ್ಮ ಮಹಾದಶೆಗಳಲ್ಲಿ ಹಿಂದೆ ಹೇಳಿದ ಸಹಾವಸ್ಥಾನ ಮೊದ
ಲಾದ ಸಂಬಂಧವುಳ್ಳ ಅಥವಾ ತಮಗೆ ಸಮಾನ ಧರ್ಮಿಗಳಾದ ಅಂದರೆ ತಾನು
ಕೇಂದ್ರಾಧಿಪತಿಯಾಗಿದ್ದು ಭುಕ್ತಿಕಾರಕನು ಕೇಂದ್ರಾಧಿಪತಿಯಾಗಿದ್ದರೆ, ತಾನು
ತ್ರಿಕೋಣಾಧಿಪತಿಯಾಗಿದ್ದೂ ಭುಕ್ತಿಕಾರಕನೂ, ತ್ರಿಕೋಣಾಧಿಪತಿಯಾದರೆ
ಅಂಥ ಗ್ರಹರ ಅಂತರ್ದಶೆ ನಡೆಯುವಾಗ ಮಹಾದಶಾನಾಥನು ತನ್ನ ಭಾವಾನು
ಗುಣವಾದ ಶುಭಾಶುಭಫಲಗಳನ್ನು ಕೊಡುವನೆಂದರ್ಥ. ಅಂತೂ ಇದರ ಮಥಿ
ತಾರ್ಥವೆಂದರೆ ಮಹಾದಶೆಯಲ್ಲಿ ನಡೆಯುವ ಅಂತರ್ದಶಾಕಾರಕ ಗ್ರಹರ ಚಲನ
ವಲನವೇ ಫಲಾದೇಶಕ್ಕೆ ಪ್ರಾಮುಖ್ಯವೆಂದು ಗ್ರಹಿಸಬಹುದು. ಇದನ್ನು ಮುಂದಿ
ನ ಶ್ಲೋಕದಲ್ಲಿ ಇನ್ನೂ ಖುಲಾಸ ಮಾಡಲಾಗಿದೆ.
|| ೨೮ || ೨೯ ||

ಶ್ಲೋಃ **ಇತರೇಷಾಂದಶಾನಾಥವಿರುದ್ಧಫಲದಾಯಿನಾಂ ||**
ತತ್ತತ್ಫಲಾನುಗುಣ್ಯೇನಫಲಾನ್ಯೂಹ್ಯಾನಿಸೂರಿಭಿಃ || ೩೦ ||

ಟೀಃ ಸಂಬಂಧಾದಿರಹಿತಗಳಾದ ವಿರುದ್ಧ ಫಲವನ್ನುಂಟುಮಾಡುವ ಗ್ರಹ
ರ ಅಂತರ್ದಶೆಯಲ್ಲಿ ಆಯಾಯ ಗ್ರಹರು ಕೊಡುವ ಫಲಕ್ಕನುಗುಣವಾಗಿ
ಫಲಗಳನ್ನೂಹಿಸುವದು.

ವಿವರಣ: ಹಿಂದೆ ಹೇಳಿದ ಸಂಬಂಧರಹಿತ ಸಧರ್ಮಿಗಳಲ್ಲದ ಹಾಗೂ
ದಶಾನಾಥನ ಫಲಕ್ಕೆ ವಿರುದ್ಧ ಫಲಗಳನ್ನು ಕೊಡುವ ಗ್ರಹರ ಭುಕ್ತಿಯಲ್ಲಿ ಭುಕ್ತಿ
ಕಾರಕ ಗ್ರಹರ ಫಲಗಳನ್ನೇ ದಶಾನಾಥನು ಕೊಡುವನು. ದಶಾನಾಥನ ಫಲ

ವುಂಟಾಗದೆ ಭುಕ್ತಿಕಾರಕನ ಫಲವೇ ಉಂಟಾಗುವದೆಂದರ್ಥ. ದಶಾನಾಥನು
ಶುಭಫಲವನ್ನು ಕೊಡುವವನಾದರೂ ಭುಕ್ತಿನಾಥನು ಅಶುಭಕಾರಿಯಾದರೆ ಅಶು
ಭಫಲವೇ ಹೆಚ್ಚಾಗುವದು. ದಶಾಸ್ವಾಮಿಯು ಅಶುಭಫಲವನ್ನು ಕೊಡುವವನಾ
ದರೂ, ಭುಕ್ತಿಕಾರಕನು ಶುಭನಾದರೆ ಶುಭಫಲವೇ ಉಂಟಾಗುವದು. ಅಂತೂ
ಇತರ ಗ್ರಹರ ಶುಭಾಶುಭತ್ವದ ಮೇಲಿಂದ ಶುಭಾಶುಭ ಫಲವನ್ನೂಹಿಸಬೇಕೆಂದು
ತಾತ್ಪರ್ಯವು. ಸಂಬಂಧಿಸಧರ್ಮಿ ಗ್ರಹರಲ್ಲಿ ಆರು ಪ್ರಕಾರತ್ವವುಂಟಾಗುವದು.
ಹೇಗಂದರೆ, ಸಂಬಂಧಿಗಳು-ಅಸಂಬಂಧಿಗಳು, ಸಧರ್ಮಿ-ಅಸಧರ್ಮಿಗಳು ಹೀಗೆ
ವಿಭಾಗಿಸಿದನಂತರ (೧) ಸಂಬಂಧಿಗಳು-ಸಧರ್ಮಿಗಳು (೨) ಸಂಬಂಧಿಗಳು-ಅಸ
ಧರ್ಮಿಗಳು. (೩) ಸಂಬಂಧಿಗಳು-ಅನುಭಯಧರ್ಮಿಗಳು. (೪) ಅಸಬಂಧಿಗಳು-
ಸಧರ್ಮಿಗಳು.(೫)ಅಸಂಬಂಧಿಗಳು-ವಿರುದ್ಧಧರ್ಮಿಗಳು (೬) ಅಸಂಬಧಿಗಳು ಅನುಭ
ಯಧರ್ಮಿಗಳು. ಹೀಗೆ ಇಲ್ಲಿ ಸಂಬಂಧಿಗಳೂ ಸಧರ್ಮಿಗಳೂ ಆದಲ್ಲಿ ಉತ್ತಮ.
ಸಂಬಂಧಿಗಳು ಅನುಭಯ ಧರ್ಮಿಗಳಾದಲ್ಲಿ ನ್ಯೂನಫಲವು. ಸಂಬಂಧಿಗಳ
ವಿರುದ್ಧದರ್ಮಿಗಳಾದಲ್ಲಿ ತೀರ ಕಡಿಮೆ ಫಲವೆಂದು ಕೆಲ ಟೀಕಾಕಾರರ ಮತವು.
|| ೩೦ ||

ಶ್ಲೋ: ಸ್ವದಶಾಯಾಂ ತ್ರಿಕೋಣೇಶ ಭುಕ್ತೌ ಕೇಂದ್ರಪತಿಃ ಶುಭಂ ।
ದಿಶೇತ್ಸೋಪಿತಥಾನೋಚೇತ್ ಅಸಂಬಂಧೇನಪಾಪಕೃತ್ || ೩೧ ||

ಟೀ: ಕೇಂದ್ರಾಧಿಪತಿಯು ತನ್ನ ಮಹಾದಶೆಯಲ್ಲಿ ತ್ರಿಕೋಣಾಧಿಪತಿಯ
ಭುಕ್ತಿ ಬಂದಾಗ ಶುಭಫಲವನ್ನು ಕೊಡುವನು. ಆದರೆ ತ್ರಿಕೋಣಾಧಿಪತಿಯು
ಅಸಂಬಂಧಿಯಾದರೆ ಶುಭಫಲವನ್ನು ಕೊಡಲಾರನು.

ವಿವರಣ: ಕೇಂದ್ರಾಧಿಪತಿ ಹಾಗೂ ತ್ರಿಕೋಣಾಧಿಪತಿಗಳ ಸಂಬಂಧವು
ಶುಭಕರವೆಂದು ಹಿಂದೆಯೇ ಹೇಳಿದೆ. ಇನ್ನು ಅಸಂಬಂಧಿ ತ್ರಿಕೋಣಾಧಿಪತಿಗ
ಳ ಭುಕ್ತಿಗಳು ಅನಿಷ್ಟಕಾರಕಗಳಾಗುವವು. ಇದರ ಅರ್ಥವೇನೆಂದರೆ ಕೇಂದ್ರಾ
ಧಿಪತಿ ದಶೆನಡೆಯುವಾಗ ಸಂಬಂಧರಹಿತನಾದರೂ ತ್ರಿಕೋಣಾಧಿಪತಿಯು ಸ್ವತಃ
ಶುಭನಾದರೆ ಶುಭಫಲವುಂಟಾಗಬಹುದು. ಅಶುಭಗ್ರಹರಾದರೆ ಅಶುಭಫಲ
ವುಂಟಾಗಬಹುದು. ಸಂಬಂಧವಿದ್ದರೆ ಅಶುಭನಾದರೂ ಅಶುಭಫಲವನ್ನುಂಟು
ಮಾಡುವದಿಲ್ಲವೆಂದು ಊಹಿಸುವದು. || ೩೧ ||

ಶ್ಲೋ: ಆರಂಭೋರಾಜಯೋಗಸ್ಯಭವೇನ್ಮಾರಕ ಭುಕ್ತಿಷು ।
ಪ್ರಥಯಂತಿತಮಾರಬ್ಧಂಕ್ರಮಶಃಪಾಪಭುಕ್ತಯಃ || ೩೨ ||

ಟೀ: ಮಾರಕ ಭುಕ್ತಿಗಳು ಬಂದಾಗ ರಾಜಯೋಗದ ಆರಂಭವಾಗುತ್ತಿ
ದ್ದರೆ ಆ ಪಾಪಗ್ರಹರ ಭುಕ್ತಿಗಳು ಪ್ರಾರಂಭವಾಗಿರುವ ರಾಜಯೋಗವನ್ನು ಕ್ರಮ
ವಾಗಿ ಮುಂದುವರಿಸುವವು.

ವಿವರಣ:- ರಾಜಯೋಗವು ಆರಂಭವಾಗಲಿಕ್ಕೂ ಪಾಪಭುಕ್ತಿಗಳು ಬರ
ವದಕ್ಕೂ ಸರಿಯಾಯಿತೆಂದು ತಿಳಿಯಿರಿ. ಆಗ ಆ ರಾಜಯೋಗವು ತನ್ನ
ಪ್ರಭಾವವನ್ನು ಬೀರಲಾರದು. ಪಾಪಭುಕ್ತಿಗಳು ಆ ರಾಜಯೋಗವನ್ನು
ತಡೆಹಿಡಿದು ಅಲ್ಪಸ್ವಲ್ಪವಾಗಿ ಮುಂದುವರಿಸುತ್ತ ಹೋಗುವವೆಂದಭಿಪ್ರಾಯ
ಮಾರಕಗ್ರಹಗಳು ಮನುಷ್ಯರ ಪ್ರಕೃತಿಯ ಮೇಲೆ ದುಷ್ಪರಿಣಾಮವನ್ನುಂಟು
ಮಾಡುವದಾದರೂ, ಅಶುಭಭಾವಾಧಿಪತಿಗಳಿರದಿದ್ದರೆ ರಾಜಯೋಗಕ್ಕೇನೂ
ಪ್ರತಿಬಂಧಕಗಳಾಗುವದಿಲ್ಲ. ಪೂರ್ಣರಾಜಯೋಗವನ್ನು ಕೊಡಲಾರವು ಅಷ್ಟೇ
"ಪ್ರಥಯಂತಿ" ಇದಕ್ಕೆ ಪ್ರಸಿದ್ಧಿಯನ್ನುಂಟು ಮಾಡುತ್ತವೆ. ಹೊರತು ಫಲ
ವನ್ನುಂಟು ಮಾಡುವದಿಲ್ಲ. ರಾಜನೆನ್ನಿಸಿಕೊಳ್ಳಬಹುದು. ರಾಜಯೋಗವನ್ನು
ಹೊಂದಲಾರನು ಎಂದು ಕೆಲವ್ಯಾ- ಖ್ಯಾನಕಾರರ ಮತ. || ೩೨ ||

ಶ್ಲೋ: ತತ್ಸಂಬಂಧಿಶುಭಾನಾಂಚ ತಥಾಪುನರಸಂಯುಜಾಂ ||
ಶುಭಾನಾಂತುಸಮುತ್ವೇನ ಸಂಯೋಗೋಯೋಗಕಾರಿಣಾಂ ||೩೩||

ಟೀ: ಯೋಗಕಾರಕ ಗ್ರಹರ ಮಹಾದಶೆಯಲ್ಲಿ ಇವುಗಳ ಸಂಬಂಧ
ವನ್ನು ಹೊಂದಿರುವ ಯೋಗಕಾರಕರ ಭುಕ್ತಿಗಳು ಬಂದಾಗ ನಿಜವಾದ ರಾಜ
ಯೋಗವನ್ನೇ ಕೊಡುವವು. ಅದೇ ಯೋಗಕಾರಕರ ದಶೆಯಲ್ಲಿ ಸಂಬಂಧರ
ಹಿತಗಳಾದ ಗ್ರಹರ ಭುಕ್ತಿ ಬಂದಾಗ ಮಧ್ಯಮ ಫಲವುಂಟಾಗುವದು

ವಿವರಣ: ಯೋಗಕಾರಕರ ಮಹದಾಶೆಯಲ್ಲಿ ಮಾರಕ ಪಾಪಭುಕ್ತಿ
ಭುಕ್ತಿಗಳು ಬಂದಾಗ ಯೋಗವು ನಿ-ಕೃಷ್ಟವಾಗುವದು. ಯೋಗಕಾರಕರ
ದಶೆಯಲ್ಲಿ ಸಂಬಂಧವುಳ್ಳ ಯೋಗಕಾರಕರ ಭುಕ್ತಿ ಬಂದಾಗ ಯೋಗವು
ಉತ್ತಮವಾಗುವದು. ಯೋಗಕಾರಕರ :ದಶೆಯ-ಸಂಬಂಧರಹಿತ ಶುಭಗ್ರಹ
ಭುಕ್ತಿಯಲ್ಲಿ ಯೋಗವು ಮಧ್ಯಮವಾಗುವದೆಂದು ನಿಷ್ಕರ್ಷ. || ೩೩ ||

ಶ್ಲೋ: ಶುಭಸ್ಯಾಸ್ಯ ಪ್ರಸಕ್ತಸ್ಯ ದಶಾಯಾಯೋಗಕಾರಕಾ : ||
ಸ್ವಭುಕ್ತಿಷು ಪ್ರಯಚ್ಛಂತಿ ಕುತ್ರಚಿತ್ ದ್ಯೋಗಜಂಫಲಂ ||೩೪ ||

ಸಂಬಂಧಉಳ್ಳ ಯೋಗಕಾರಕ ಗ್ರಹರದಶೆ

ಟೀಃ ಈ ಹಿಂದೆ ಹೇಳಿದ ಸಂಬಂಧಉಳ್ಳ ಯೋಗಕಾರಕ ಗ್ರಹರದಶೆಯು ನಡೆಯುವಾಗ ಕೆಲವೊಮ್ಮೆ ಯೋಗಕಾರಕನ ಭುಕ್ತಿ ಬಂದಾಗ ರಾಜಯೋಗ ಫಲವನ್ನು ಕೊಡುವವು.

ವಿವರಣಃ- ಈ ಶ್ಲೋಕದಲ್ಲಿ ಹೊಸದನ್ನೇನೂ ಹೇಳಿದಂತಿಲ್ಲ ಯೋಗಕಾರಕಗ್ರಹಗಳ ಸಂಬಂಧವುಳ್ಳ ಶುಭಗ್ರಹರ ಮಹಾದಶೆ ನಡೆಯುವಾಗ ಯೋಗಕಾರಕ ಗ್ರಹರ ಭುಕ್ತಿ ಬಂದಾಗ ರಾಜಯೋಗ ಫಲವಾಗಲೇಬೇಕಲ್ಲ. "ಕುತ್ರಚಿತ್" ಎಂಬ ಪದದಿಂದೇನು ಸಾಧಿಸಿತು? ''ಯಾವಾಗಲಾದರೊಮ್ಮೆ" ಎಂದರೆ ಅಂಥ ಭುಕ್ತಿಗಳು ಎಲ್ಲಿಯೋ ಅಪರೂಪವಾಗಿ ಬರುವದೆಂದು ಅರ್ಥ ಮಾಡಬಹುದೇ? ಇಷ್ಟೇ ಇನ್ನು ಇದೇ ಶ್ಲೋಕಕ್ಕೆ "ಪ್ರಸಕ್ತಸ್ಯ" ಸ್ಥಾನದಲ್ಲಿ ''ವಿಯುಕ್ತಸ್ಯ' ಎಂಬದೊಂದು ಹಳೆಯ ಪಾಠವಿದೆ. ಅದರ ಪ್ರಕಾರ ಸಂಬಂಧರಹಿತನಾದರೂ ಶುಭದಶೆಯಲ್ಲಿ ಯೋಗಕಾರಕ ಗ್ರಹರ ಭುಕ್ತಿ ಬಂದಾಗ, "ಕದಾಚಿತ್" ಶುಭವಾದರೂ ಆಗಬಹುದು. ಪೂರ್ವೋಕ್ತ ಸಂಬಂಧರಹಿತನಾದ ಗ್ರಹರ ಮಹಾದಶೆಯಲ್ಲಿ ಯೋಗಕ್ಕವಕಾಶವಿಲ್ಲವಾದರೂ, ದಶಾಕಾರಕನು ಶುಭಗ್ರಹವಾದರೆ ಕೆಲವುಟ್ಟಿಗೆ ರಾಜಯೋಗವುಂಟಾಗುವದೆಂದಭಿಪ್ರಾಯ. ಈ ಹಳೆಯ ಪಾಠವೇ ಕೆಲವುಟ್ಟಿಗೆ ಸಯುಕ್ತಿಕವಾಗಿ ತೋರುವದು. ಯಾಕಂದರೆ ಹಿಂದು ಮುಂದಿನ ಶ್ಲೋಕದಲ್ಲಿ ''ಅಸಂಬಂಧೇನ" ಇತ್ಯಾದಿ ಸಂಬಂಧ ರಾಹಿತ್ಯವನ್ನೇ ಹೇಳುತ್ತಿದೆ. ॥ ೩೪ ॥

ಶ್ಲೋಃ ತಮೋಗ್ರಹೌಶುಭಾರೂಢಾವಸಂಬಂಧೇನ ಕೇನಚಿತ್ ॥
ಅಂತರ್ದಶಾನುಸಾರೇಣ ಭವೇತಾಂ ಯೋಗಕಾರಕೌ ॥ ೩೫ ॥

ಟೀ:- ರಾಹು ಕೇತುಗಳು ಶುಭಸ್ಥಾನವನ್ನು ಹೊಂದಿರುವಾಗ ಯಾವದಾದರೊಂದು ಗ್ರಹರೊಡನೆ ಸಂಬಂಧ ರಹಿತರಾಗುವ ಮೂಲಕ ಕೊಡಬೇಕಾದ ಅಶುಭ ಫಲವನ್ನು ಕೊಡದೆ ಭುಕ್ತ್ಯನುಸಾರವಾಗಿ ಶುಭ ಫಲವನ್ನೇ ಕೊಡುವರು.

ವಿವರಣಃ ಹಿಂದೆ 'ಯದ್ಯದ್ಭಾವಗತೌವಾಪಿ' ಎಂಬ ಶ್ಲೋಕದಲ್ಲಿ ಹೇಳಿದಷ್ಟೇ ಅಲ್ಲ. ತ್ರಿಕೋಣಾದಿ ಶುಭಭಾವಗಳಲ್ಲಿರುವ ರಾಹುಕೇತುಗಳು ಸಂಬಂಧರಹಿತಗಳಾದರೂ ಶುಭಗ್ರಹರ ದಶಾಭುಕ್ತಿ ಬಂದಾಗ ಶುಭಫಲಗಳನ್ನೇ ಕೊಡುವರೆಂದಭಿಪ್ರಾಯ

ಶ್ಲೋ: ಪಾಪಾಃಯದಿ ದಶಾನಾಥಾ: ಶುಭಾನಾಂತದಸಂಯುಜಾಂ ॥
ಭುಕ್ತಯಃ ಪಾಪಫಲದಾಃ ತತ್ಸಂಯುಕ್ ಶುಭ ಭುಕ್ತಯಃ ॥
ಭವಂತಿ ಮಿಶ್ರಫಲದಾ ಭುಕ್ತಯೋಯೋಗಕಾರಿಣಾಂ।
ಅತ್ಯಂತ ಪಾಪಫಲದಾ ಭವಂತಿತದಸಂಯುಜಾಂ ॥ ೩೬ ॥

ಟೀಃ ಪಾಪಗ್ರಹಗಳ ದಶೆಯು ನಡೆಯುವಾಗ ಅವುಗಳ ಸಂಬಂಧರಹಿತಗಳಾದ ಶುಭಗ್ರಹಗಳು ತಮ್ಮ ಭುಕ್ತಿಗಳಲ್ಲಿ ಶುಭಫಲಗಳನ್ನು ಕೊಡುವದಿಲ್ಲ. ಸಂಬಂಧವುಳ್ಳ ಶುಭ ಭುಕ್ತಿಗಳು ಬಂದಾಗ ಮಿಶ್ರಫಲವುಂಟಾಗುವದು. ಸಂಬಂಧವೂ ಇಲ್ಲದ ಪಾಪಗ್ರಹಗಳ ಭುಕ್ತಿ ಬಂದಾಗ ಅತಿ ಅನಿಷ್ಟ ಫಲವುಂಟಾಗುವದು.

ವಿವರಣಃ ಇಲ್ಲಿ ಹೇಳಿದ ಪಾಪತ್ವ ಶುಭತ್ವಗಳನ್ನು ಹಿಂದೆ ಹೇಳಿದ ರೀತಿಯಿಂದಲೇ ಊಹಿಸಿಕೊಳ್ಳುವದು ಯುಕ್ತವು "ಸರ್ವೇ ತ್ರಿಕೋಣನೇತಾರಃ ನದಿಶಂತಿಶುಭಂನೃಣಾಂ ॥ ಪತಯಸ್ತ್ರಿಷಡಾಯಾನಾಂ" ಇತ್ಯಾದಿ ಶ್ಲೋಕಗಳಲ್ಲಿ ಹೇಳಿದ ಲಕ್ಷಣಗಳಿಂದ ದಶಾಕಾರಕನ. ಹಾಗೂ ಭುಕ್ತಿಕಾರಕನ ಶುಭಾಶುಭತ್ವವನ್ನು ಕಲ್ಪಿಸಿಕೊಂಡು ಸಂಬಂಧ ಚತುಷ್ಟಯದಸಹಿತತ್ವ ರಹಿತತ್ವಗಳಮೇಲಿಂದ ಶುಭಾಶುಭತ್ವಗಳನ್ನೂಹಿಸುವದು.

ಪಾಪಗ್ರಹಗಳು ದಶಾನಾಥರಾದಾಗ ಸಂಬಂಧ ವಿಶಿಷ್ಟಗಳಾದ ಶುಭಗ್ರಹರ ಅಂತರ್ದಶೆಯು ಬಂದಾಗ ಮಿಶ್ರಫಲವುಂಟಾಗುವದು. ಶುಭಾಶುಭಫಲಗಳು ಸಮ್ಮಿಶ್ರವಾಗಿ ಉಂಟಾಗುವವು ಎಂದರ್ಥ. ದಶಾನಾಥರು ಅಶುಭಗ್ರಹಗಳಾಗಿದ್ದಾಗ ರಾಜಯೋಗಕಾರಕ ಗ್ರಹಗಳ ಅಂತರ್ದಶೆಯು ಬಂದರೂ ಸಂಬಂಧ ರಹಿತಗಳಾಗಿದ್ದರೆ ಆ ಭುಕ್ತಿಗಳು ಅತ್ಯಂತ ಅನಿಷ್ಟಫಲಗಳನ್ನೇ ಕೊಡುವವೇ ಹೊರತು ಮಿಶ್ರಫಲವೂ ಸಹ ಉಂಟಾಗಲಾರದು. ॥೩೭

ಶ್ಲೋ: ಸತ್ಯಪಿಸ್ವೇನಸಂಬಂಧೇನಹಂತಿಶುಭಭುಕ್ತಿಷು ॥
ಹಂತಿಸತ್ಯಸ್ಯಸಂಬಂಧೇ ಮಾರಕಃ ಪಾಪಭುಕ್ತಿಷು ॥ ೩೮ ॥

ಟೀಃ ಮಾರಕನಾದ ದಶಾನಾಥನು ತನ್ನಿಂದ ಸಂಬಂಧ ಹೊಂದಿದಾಗ್ಯೂ ಶುಭಗ್ರಹರ ಭುಕ್ತಿ ಬಂದಾಗ ಮಾರಕನಾಗುವದಿಲ್ಲ. (ಮರಣವನ್ನುಂಟುಮಾ

ಡುವದಿಲ್ಲ.) ಅದೇ ಮಾರಕದಶಾನಾಥನು ಸಂಬಂಧರಹಿತ ಶುಭ ಭುಕ್ತಿ ಬಂದಾ
ಗಲೂ ಮಾರಕತ್ವವನ್ನುಂಟುಮಾಡುವನು.

ವಿವರಣಃ ಮಾರಕಗ್ರಹರ ದಶೆಯಲ್ಲಿ ಶುಭಗ್ರಹನ ಅಂತರ್ದಶೆಯು
ಬಂದಾಗ (ಸಂಬಂಧ ಹೊಂದಿದವನೆಂಬ ಕಾರಣದಿಂದ) ಮಾರಕನಾಗುವದಿಲ್ಲ.
ಇಲ್ಲಿ ಸಂಬಂಧವು ಪ್ರಯೋಜಕವಾಗುವದಿಲ್ಲ. ಅದೇ ಪಾಪಗ್ರಹನ ಅಂತರ್ದಶೆ
ಯು ಬಂದಾಗ ಮಾರಕನೇ ಆಗುತ್ತಾನೆ. ಆ ಸಂಬಂಧವನ್ನಾಗ ಅಪೇಕ್ಷಿಸುವ || ೩೮ ||
ದಿಲ್ಲವೆಂಬಭಾವವು.

ಶ್ಲೋಃ ಪರಸ್ಪರದಶಾಯಾಂಸ್ವಭುಕ್ತೌ ಸೂರ್ಯಜಭಾಸ್ಕರೌ ||
ವ್ಯತ್ಯಯೇನ ವಿಶೇಷೇಣಶುಭಾಶುಭಂ || ೩೯ ||
ಪ್ರನಿಶೇತಾಂವ್ಯತ್ಯಯೇನ ವಿಶೇಷೇಣಶುಭಾಶುಭಂ

ಟೀಃ ಅನ್ಯೋನ್ಯದಶಾಭುಕ್ತಿಗಳಲ್ಲಿ ಶನಿಶುಕ್ರರು ವ್ಯತ್ಯಸ್ತವಾಗಿ ತಂತಮ್ಮ
ದಶಾಭುಕ್ತಿಗಳ ಫಲವನ್ನು ವಿಶೇಷವಾಗಿ ಕೊಡುವರು.

ವಿವರಣಃ ಶನಿಶುಕ್ರರಿಗೆ ಫಲಕೊಡುವ ವಿಶಿಷ್ಟ ರೀತಿಗಳಿವೆ. ಪರಸ್ಪರ
ದಶೆಯಲ್ಲಿ ಅಂದರೆ, ಶನಿದಶೆಯಲ್ಲಿ ಶುಕ್ರನದೂ ಶುಕ್ರನ ಮಹಾದಶೆಯಲ್ಲಿ ಶನಿ
ಯದೂ, ಭುಕ್ತಿಬಂದಾಗ ಫಲವು ವ್ಯತ್ಯಾಸವಾಗಿ ಅದೂ ವಿಶೇಷವಾಗಿ ಫಲವುಂಟಾ
ಗುವದು ಶನಿಯ ಫಲವನ್ನು ಶುಕ್ರನೂ, ಶುಕ್ರನ ಫಲವನ್ನು ಶನಿಯೂ,
ವಿಶೇಷವಾಗಿ ಕೊಡುವರು. ಶುಕ್ರನ ಮಹಾದಶೆಯಲ್ಲಿ ಶನಿಭುಕ್ತಿ ನಡೆಯುವಾಗ
ಆಗ ಶನಿಯು ತನ್ನ ಸಂಬಂಧವಾದ ಫಲವನ್ನು ಕೊಡದೆ (ಕೆಟ್ಟದ್ದಾಗಲೀ-
ಶುಭವಾಗಲೀ) ಶುಕ್ರನ ಫಲವನ್ನೇ ವಿಶೇಷವಾಗಿ ಕೊಡುವನು. ಇದರಂತೆ
ಶುಕ್ರನೂ ಶನಿಮಹಾದಶೆಯಲ್ಲಿ ತನ್ನ ಭುಕ್ತಿಬಂದಾಗ ತನ್ನ ಫಲವನ್ನು ಕೊಡದೆ
ಶನಿಯ ಫಲವನ್ನೇ ವಿಶೇಷವಾಗಿ ಕೊಡುವನೆಂದಭಿಪ್ರಾಯ. || ೩೯ ||

ಶ್ಲೋಃ ಪ್ರತಿಲಗ್ನಂಸಮಾಲಕ್ಷ್ಯ ಪೂರ್ವೋದ್ದಿಷ್ಟಾವಿರೋಧತಃ ||
ತತ್ತದ್ಗ್ರಹಸ್ವರೂಪಾಣಿಕ್ರಮೇಣೈವವಿವೃಣ್ಮಹೇ || ೪೦ ||

ಟೀಃ ಈ ಹಿಂದೆ ಹೇಳಿದ ಗ್ರಂಥಭಾಗಕ್ಕೆ ವಿರೋಧವಾಗದಂತೆ ಮೇಷಾದಿ
ಪ್ರತಿಲಗ್ನಕ್ಕೆ ಆಗುವ ಶುಭಾಶುಭಗ್ರಹಗಳ ಸ್ವರೂಪಗಳನ್ನು ಇನ್ನು ಕ್ರಮದಿಂದ
ವಿವರಿಸುವೆವು. || ೪೦ ||

|| ಮೇಷಲಗ್ನಂ ||

ಶ್ಲೋಃ ಮಂದಸೌಮ್ಯಸಿತಾಃಪಾಪಾಃಶುಭೌಗುರುದಿವಾಕರೌ ।
ನಶುಭಂಯೋಗಮಾತ್ರೇಣಪ್ರಭವೇಚ್ಛನಿ ಜೀವಯೋಃ || ೪೧ ||

ಪರಂತು ತೇನಜೀವಸ್ಯ ಪಾಪತ್ವಮಪಿ ಸಿಧ್ಯತಿ ||
ಕವಿಃ ಸಾಕ್ಷಾನ್ನಹಂತಾಸ್ಯಾನ್ಮಾರಕತ್ವೇನಲಕ್ಷಿತಃ || ೪೨ ||
ಮಂದಾದಯೋನಿಹಂತಾರೋಭವೇಯುಃಪಾಪಿನೋಗ್ರಹಾಃ ।
ಶುಭಾಶುಭಫಲಾನ್ಯೇವಂಜ್ಞಾತವ್ಯಾನಿಕ್ರಿಯೋದ್ಭವೇ || ೪೩ ||

ಟೀಃ ಮೇಷ ಲಗ್ನದಲ್ಲಿ ಜನಿಸಿದವನ ವಿಷಯದಲ್ಲಿ ಶನಿ, ಬುಧ,
ಶುಕ್ರ, ರು ಪಾಪಿಗಳು. ಗುರು, ಸೂರ್ಯರು, ಶುಭರು. ಶನಿ ಗುರುಗಳ
ಯೋಗ (ಸಂಬಂಧ) ಮಾತ್ರದಿಂದ ಶುಭವಾಗಲಾರದು. ಇಷ್ಟೇ ಅಲ್ಲದೆ ಆ
ಯೋಗದಿಂದ ಗುರುವಿಗೆ ಅಶುಭತ್ವವುಂಟಾಗುವದು. ಶುಕ್ರನು ಮಾರಕಲಕ್ಷಣ
ದಿಂದ ಕೂಡಿದವನಾದರೂ ಸಾಕ್ಷಾತ್ತಾಗಿ ಮಾರಕನಾಗುವದಿಲ್ಲ. ಶನಿ ಮೊ
ದಲಾದ ಅಶುಭಗ್ರಹಗಳು ಮಾರಕರಾಗುವರು. ಹೀಗೆ ಮೇಷಲಗ್ನಕ್ಕೆ
ಶುಭಾಶುಭಫಲಗಳನ್ನೂಹಿಸತಕ್ಕದ್ದು.

ವಿವರಣ:- ಮೇಷ ಲಗ್ನಕ್ಕೆ ಶನಿಯು ದಶಮ (ಕೇಂದ್ರ) ಕ್ಕೆ ಅಧಿಪ
ತಿಯಾದರೂ ಏಕಾದಶಾಧಿಪತಿಯಾದ್ದರಿಂದ ದೋಷಿಯಾಗುತ್ತಾನೆ. ಬುಧನು
ತ್ರಿ ಷಟ್ ಪತಿಯಾದ್ದರಿಂದ ಶುಭವಲ್ಲ. ಶುಕ್ರನು ದ್ವಿತೀಯ ಸಪ್ತಮಾ
(ಮಾರಕ ಸ್ಥಾನ)ಧಿಪತಿಯಾದ್ದರಿಂದ ;ಮಾರಕನಾಗುತ್ತಾನೆ. ಹೀಗೆ ಮೂರು
ಗ್ರಹರು ಮೇಷ ಲಗ್ನಕ್ಕೆ ಅಶುಭರಾಗುತ್ತಾರೆ. ಗುರುವು ವ್ಯಯಾಧಿಪತಿಯಾ
ದರೂ ನವಮ (ತ್ರಿಕೋಣ) ಅಧಿಪತಿಯಾದ್ದರಿಂದ ಶುಭನು. ಸೂರ್ಯನು
ಪಂಚಮ (ತ್ರಿಕೋಣ) ಅಧಿಪತಿಯಿರುವದರಿಂದ ಶುಭನು. ಶನಿಯು ದಶ
ಮಾಧಿಪತಿಯಿದ್ದು ಗುರುವು ನವಮಾಧಿಪತಿಯಿರುವದರಿಂದ ಈ ಶನಿಗುರುಗಳ
ಯೋಗವು ಶುಭಪ್ರದವಾಗಬೇಕಷ್ಟೇ? ಹಾಗಾಗಲಾರದು. ಈ ಎರಡು ಗ್ರಹಗಳು
ಅನುಕ್ರಮದಿಂದ ಏಕಾದಶ ವ್ಯಯಾಧಿಪತಿಗಳಾಗಿರುವದರಿಂದ ಕೇಂದ್ರ ತ್ರಿ-
ಕೋಣಾಧಿಪತ್ಯದಿಂದ ಆಗಬೇಕಾದ ಶುಭಫಲವು ಆಗದೇ ಹೋಗುವದು.
ಇಷ್ಟೇ ಅಲ್ಲದೆ ಗುರುವು ಶುಭಗ್ರಹನಾದರೂ ಶನಿಯ ಸಂಬಂಧದಿಂದ ಪಾಪ

ಪರತಂತ್ರೇಣ ಜೀವಸ್ಯ ಪಾಪಕರ್ಮಾಪಿ ನಿಶ್ಚಿತಂ) ಎಂಬ
ನೇ ಆಗುವನು. (ಪರತಂತ್ರೇಣ ಜೀವಸ್ಯ ಪಾಪಕರ್ಮಾಪಿ ನಿಶ್ಚಿತಂ) ಎಂಬ ಅರ್ಥವಾದರೂ ಇಷ್ಟೇ ಆಗು
ದಾಗಿ ಬೃಹತ್ಪಾರಾಶರಿಯಲ್ಲಿ ಹೇಳಿದೆ. ಅದರ ಅರ್ಥವಾದರೂ ಇಷ್ಟೇ ಆಗು
ವದು. ಇನ್ನು ಶುಕ್ರನು ನೇರವಾಗಿ ಮಾರಕನಾದರೂ !ಅನ್ಯ ಶುಭ ಸಂಬಂಧ
ವಿದ್ದರೆ ಸಾಕ್ಷಾತ್ ಮಾರಕವಾಗಲಾರನು. ಎಷ್ಟಾದರೂ ಶುಭಗ್ರಹನಲ್ಲವೇ?
ಶನಿ, ಗುರು ಮೊದಲಾದವರುಗು ಅಲ್ಪ ಶುಭತ್ವವನ್ನು ಪಡೆದಿದ್ದರೂ, .ಬೇರೆ
ಅಶುಭ ಸಂಬಂಧವಿದ್ದರೆ ಮಾರಕರೇ ಆಗುವರು. ರಾಹುಕೇತುಗಳಿಗೆ ಸ್ಥಾನಾ
ಧಿಪತ್ಯವಿಲ್ಲದಿರುವದರಿಂದ ಅವರ ಸುದ್ದಿಯನ್ನೇ ಎತ್ತಿಲ್ಲ. ಕ್ಷೀಣ ಚಂದ್ರ
(ಪಾಪಿ) ಯಾದರೂ ಕೇಂದ್ರಾಧಿಪತಿಯಾಗುವದರಿಂದ ಶುಭನೆಂದೂ ಪೂರ್ಣ
ಚಂದ್ರನಾದರೆ ಅಶುಭನಾಗುವನೆಂದೂ ಎಣಿಸಬಹುದು. ಕುಜನು ಲಗ್ನಾಷ್ಟ
ಮಾಧಿಪತಿಯಾದ್ದರಿಂದ "ಲಗ್ನಾಧೀಶೋಽಪಿಚೇತ್ಸ್ವಯಂ" ಎಂಬಂತೆ ಲಗ್ನಾಧಿ
ಪತಿಯೇ ಅಷ್ಟಮಾಧಿಪತಿಯಾಗಿರುವದರಿಂದ ದೋಷರಹಿತನೆಂದೆಣಿಸಬಹುದು
ಚಂದ್ರ ಕುಜರು ಒಟ್ಟಿನ ಮೇಲೆ ಮಾರಕತ್ವ ವಿಷಯದಲ್ಲಿ ತಟಸ್ಥ
ರೆನ್ನಬಹುದೇ? ॥ ೪೧-೪೨-೪೩ ॥

॥ ವೃಷಭಲಗ್ನ ॥

ಶ್ಲೋ: ಜೀವಶುಕ್ರೇಂದವಃಪಾಪಾಃಶುಭೌ ಶನಿದಿವಾಕರೌ ।
(ಶನಿವ್ಯಗಾಂಕಜೌ)
ರಾಜಯೋಗಕರಃಸಾಕ್ಷಾದೇಕಏವಾಂಶುಮತ್ಸುತಃ । ೪೪
॥ ಜೀವಾದಯೋಗ್ರಹಾಃಪಾಪಾಘ್ನಂತಿಮಾರಕಲಕ್ಷಣಾಃ ॥
ಬುಧೈಸ್ತತ್ರ (ತತ್ತತ್) ಫಲಾನ್ಯೇವಂಜ್ಞೇಯಾನಿವೃಷಜನ್ಮನಃ ॥ ೪೫ ॥

ಟೀ: ವೃಷಭಲಗ್ನಕ್ಕೆ ಗುರು, ಶುಕ್ರ, ಚಂದ್ರ'ರು ಪಾಪಿಗಳು. ಶನಿ, ಮತ್ತು ರವಿಗಳು ಶುಭರು. ಶನಿಯೊಬ್ಬನೇ ಸಾಕ್ಷಾತ್ ರಾಜಯೋಗಕಾರಕನು. ಗುರು ಮೊದಲಾದ ಮಾರಕಗ್ರಹಗಳು ಮಾರಕತ್ವವನ್ನುಂಟುಮಾಡುವರು ಹೀಗೆ ವೃಷಭಲಗ್ನದಲ್ಲಿ ಜನಿಸಿದವನಿಗೆ ಫಲಗಳನ್ನೂಹಿಸುವದು.

ವಿವರಣ: ವೃಷಭಲಗ್ನಕ್ಕೆ ಗುರುವು ಅಷ್ಟಮ ಏಕಾದಶಾಧಿಪತಿಯಾಗು ತ್ತಾನೆ. ಶುಕ್ರನು, ಲಗ್ನ, ಷಷ್ಠಾಧಿಪತಿಯಾಗುತ್ತಾನೆ. ಚಂದ್ರನು ತೃತೀ

ಯಾಧಿಪತಿಯಾಗುವನು. ಕಾರಣ ಈ ಮೂರು ಗ್ರಹಗಳೂ, ಅನಿಷ್ಟಗಳಾಗು
ತ್ತವೆ. ಈ ಲಗ್ನಕ್ಕೆ ಶನಿಯೊಬ್ಬನೇ ಸಾಕ್ಷಾತ್ ರಾಜಯೋಗಕಾರಕನಾಗು
ತ್ತಾನೆ. ಯಾಕಂದರೆ ನವಮ ದಶಮಾಧಿಪತಿಯಿರುತ್ತಾನೆ. ಮಾರಕ ಲಕ್ಷಣ
ದಿಂದ ಕೂಡಿದ ಗುರು ಮೊದಲಾದ ಗ್ರಹಗಳು ಮರಣವನ್ನುಂಟುಮಾಡುವರು.
"ಶನಿವ್ಯಗಾಂಕಜೌ" ಎಂಬದೊಂದು ಪಾಠವಿದೆ. ಆದರೆ ಶನಿಯು ನಿರಪವಾದ
ನಾಗಿ ಈ ಲಗ್ನಕ್ಕೆ ಶುಭನಾದಂತೆ ಬುಧನು ಆಗುವದಿಲ್ಲ. ರವಿಯಷ್ಟು ಶುಭನೂ
ಆಗುವದಿಲ್ಲ. ಯಾಕಂದರೆ ತ್ರಿಕೋಣಾಧಿಪತಿಯಾದರೂ ದ್ವಿತೀಯ ಮಾರಕ
ಸ್ಥಾನಾಧಿಪತಿಯಾಗುತ್ತಾನೆ. ಆದ್ದರಿಂದ "ಶನಿದಿವಾಕರೌ" ಎಂಬ ಪಾಠವೇ
ಸಾಧುವಾದದ್ದು. "ಶನಿಶಶೀಸುತ್ರೌ" ಎಂಬ ಪಾಠವೂ ಅಶುದ್ಧವಾದದ್ದು.
ಇನ್ನು ಕುಜನು ಸಪ್ತಮ ಕೇಂದ್ರಾಧಿಪತಿಯಾದರೂ ವ್ಯಯಾಧಿಪತಿಯಾಗುವದ
ರಿಂದ ಅವನ ಉಲ್ಲೇಖವಿಲ್ಲ. ಕಾರಣ ಪಾಪಿಯೂ ಅಲ್ಲ. ಶುಭನೂ ಅಲ್ಲ
ವೆಂದಿಟ್ಟುಕೊಳ್ಳೋಣ. ವೃಷಭಲಗ್ನಕ್ಕೆ ಶುಕ್ರನು ಲಗ್ನಾಧಿಪತಿಯಾದರೂ
ಷಷ್ಠಸ್ಥಾನಾಧಿಪತಿಯಾದುವರಿಂದ ಲಗ್ನಾಧಿಪತ್ಯ ಪ್ರಾಶಸ್ತ್ಯ ವಿಲ್ಲವೆಂದರಿಯು
ವದು ॥ ೪೪ ೪೫ ॥

॥ ಮಿಥುನಲಗ್ನ ॥

ಶ್ಲೋ: ಭೌಮಜೀವಾರುಣಾಃ ಪಾಪಾಏಕಏವಕಃವಿಃಶುಭಃ ।
ಶನೈಶ್ಚರೇಣಜೀವಸ್ಯಯೋಗೋಮೇಷಭವೋಯಥಾ ॥ ೪೬ ॥
(ಪಾಠಾಂತರ) ಕುಜಭಾನ್ವಿಂದವಃಪಾಪಾಏಕಏವಶುಭಃಕವಿಃ
ರಾಜಯೋಗಕರೌಶುಕ್ರಸೋಮಪುತ್ರೌಶುಭಾನ್ವಿತಾ ॥ ೪೭ ॥
ಶನಿಜೀವ ಸಮಾಯೋಗಾತ್‌ಫಲಂ ಮೇಷಭುವೋ ಯಥಾ ॥
ಶನಿಃ ಸಾಕ್ಷಾನ್ನಹಂತಾಸ್ಯಾನ್ಮಾರಕ ತ್ವೇನಲಕ್ಷಿತಃ ॥ ೪೮ ॥

ಭೌಮಾದಯೋನಿಹಂತಾರೋಭವೇಯುಃ ಪಾಪಿನೋಗ್ರಹಾಃ ॥
ಶುಭಾಶುಭಫಲಾನ್ಯೇವಂಜ್ಞೇಯಾನಿಯುಗಜನ್ಮನಃ ॥ ೪೯ ॥

ಟೀ: ಮಿಥುನ ಲಗ್ನಕ್ಕೆ ಕುಜ, ಗುರು, ರವಿ ಗ್ರಹಗಳು ಪಾಪಿಗಳು. ಶುಕ್ರನೊಬ್ಬನೇ ಶುಭನು ಶನಿ ಗುರು ಯೋಗವು. ಮೇಷ ಲಗ್ನದಂತೆಯೇ ಶುಭಪ್ರದವಲ್ಲ. ಪಾಠಾಂತರದಂತೆ ಕುಜ, ಚಂದ್ರ, ಸೂರ್ಯರು ಪಾಪಿಗಳು.

ಶನಿಯು ರಾಜಯೋಗಕಾರಕರಾಗುತ್ತಾರೆ.
ಶುಕ್ರ ಬುಧರು ಶುಭಯುಕ್ತರಾದರೆ ರಾಜಯೋಗಕಾರಕರಾಗುತ್ತಾರೆ. ಶನಿಯು
ಶುಕ್ರ ಬುಧರು ಶುಭಯುಕ್ತರಾದರೆ ಮೊದಲಾದ ಪಾಪಗ್ರಹರು ಮಾರಕ
ಪ್ರತ್ಯಕ್ಷ ಮಾರಕನಾಗಲಾರನು. ಕುಜ ಮೊದಲಾದ ಪಾಪಗ್ರಹರು ಮಾರಕ
ಪ್ರತ್ಯಕ್ಷ ಮಾರಕನಾಗಲಾರನು. ಕುಜ ಶುಭಾಶುಭಫಲಗಳನ್ನೂಹಿಸತಕ್ಕದ್ದು.
ರಾಗುತ್ತಾರೆ. ಹೀಗೆ ಮಿಥುನ ಲಗ್ನಕ್ಕೆ ಶುಭಾಶುಭಫಲಗಳನ್ನೂಹಿಸತಕ್ಕದ್ದು.

ವಿವರಣ:- ನಮ್ಮಲ್ಲಿಯ ಕೈಬರಹದ ಪ್ರತಿ ಹಾಗೂ ಬೆಂಗಳೂರ
ಪ್ರತಿಗಳಲ್ಲಿ ಮಾತ್ರ ಮೇಲೆ ಬರೆದಂತೆ ನಾಲ್ಕು ಶ್ಲೋಕಗಳು ಸಿಗುವವು.
ಚೌಖಾಂಬಾ, ಕಾಶಿ, ಮುಂಬಯಿ ಪ್ರತಿಗಳಲ್ಲಿ "ಭೌಮಜೀವಾರುಣಾಃ ಮೇಷ
ಭವೋಯಥಾ । ನಾಯಂಶಶೀನಿಹಂತಾಸ್ಯಾದುನ್ಮಿಷತ್ಪಾಪನಿಷ್ಫಲಂ । ನಾಯಂ
ಶಶೀನಿಹಂತಾಸ್ಯಾತ್ಕಾರಯೋತ್ಪಾಪನಿಷ್ಫಲಂ । ಜ್ಞಾತತ್ವಾನಿ ದ್ವಂದ್ವಜಸ್ಯ ಫಲಾ
ನ್ಯೇತಾನಿ ಸೂರಿಭಿ ಃ ॥" ಎಂಬದಾಗಿ ಎರಡೇ ಶ್ಲೋಕಗಳು ಕಂಡುಬರುತ್ತವೆ. "ಲಕ್ಷ
ಬೃಹತ್ಪಾ ರಾಶರಿಯಲ್ಲೂ ಎರಡೇ ಶ್ಲೋಕಗಳು ಕಂಡುಬರುತ್ತವೆ. ನಾವು ಮೂಲ ಶ್ಲೋಕದಲ್ಲಿ
ಣಂಪಾಪನಿಷ್ಫಲಂ" ಎಂದಿಷ್ಟೇ ವಿಶೇಷವಿದೆ. ನಾವು ಮೂಲ ಶ್ಲೋಕದಲ್ಲಿ
ಕೊಟ್ಟ ನಾಲ್ಕು ಶ್ಲೋಕಗಳಿಗೂ ಟೀಕೆ ಮಾಡಿರುತ್ತೇವೆ. ಅದರಲ್ಲಿ "ನಾಯಂ
"ಶಶೀನಿಹಂತಾಸ್ಯಾದುನ್ಮಿಷತ್ಪಾಪನಿಷ್ಫಲಂ" ಈ ತೊಡಕಿನ ಶ್ಲೋಕವಿಲ್ಲ.
ಬೃಹತ್ಪರಾಶರಿಯಲ್ಲಿ ಇದು ಇರುವದರಿಂದ ಬಿಡಲಿಕ್ಕೂ ಬಾರದು. ಇದನ್ನು
ಕೂಡಿಸಿದರೆ ಒಟ್ಟು ಐದು ಶ್ಲೋಕಗಳಾಗುವವು. ಇಲ್ಲಿ ಈ ಐದು ಶ್ಲೋಕಗಳ
ನ್ನು ವಿವರಿಸಲಾಗಿದೆ. ಇರಲಿ. ಮಿಥುನಲಗ್ನಕ್ಕೆ ಕುಜನು ಷಡ್ಯೈಕಾದಶಸ್ವಾಮಿ
ಯಾಗುವದರಿಂದ ಪಾಪಿಯಾಗುತ್ತಾನೆ. ಗುರುವು ಸಪ್ತಮ ದಶಮ ಕೇಂದ್ರಾಧಿ
ಪತಿಯಾಗುವದರಿಂದ ಅನಿಷ್ಟನು. ರವಿಯು ತೃತೀಯಾಧಿಪತಿಯಾದ್ದರಿಂದ
ಅನಿಷ್ಟನು. ಈ ಲಗ್ನಕ್ಕೆ ಶುಕ್ರನು ಪಂಚಮಾಧಿಪತಿ, ಹಾಗೂ ವ್ಯಯಾಧಿಪತಿ
ಯಾದ್ದರಿಂದ ಇದ್ದುದರಲ್ಲಿ ಇವನೊಬ್ಬನೇ ಶುಭನು. ಶನಿಯು ತ್ರಿಕೋಣಾಧಿ
ಪತಿಯಾದರೂ ಅಷ್ಟಮಾಧಿಪತಿಯಿರುವದರಿಂದ ಶುಭನೆನ್ನಲಿಕ್ಕಾಗುವದಿಲ್ಲ.
ಕಾರಣ, ದಶಮ ಕೇಂದ್ರಾಧಿಪ ಗುರು ನವಮಾಧಿಪತಿ ಶನಿ ಇವರ ಯೋಗವನ್ನು
ಮೇಷ ಲಗ್ನದಂತೆಯೇ ತಿಳಿಯತಕ್ಕದ್ದು. ಪಾಠಾಂತರದಂತೆ (ಕುಜಭಾನ್ವಿಂದ
ವಃಪಾಪಾಃ) ಚಂದ್ರನು ದ್ವಿತೀಯಾಧಿಪತಿಯಾದುದರಿಂದ ಪಾಪಿಯಾಗುತ್ತಾನೆ.
ಶುಕ್ರ ಬುಧರ ಯೋಗವು ರಾಜಯೋಗಕಾರಕವು. ಯಾಕಂದರೆ ಬುಧನು ಲಗ್ನ
ಚತುರ್ಥಕೇಂದ್ರಾಧಿಪತಿಯಾಗಿದ್ದು, ಶುಕ್ರನು ತ್ರಿಕೋಣಾಧಿಪತಿಯಿರುವದರಿಂದ
ಕೇಂದ್ರತ್ರಿಕೋಣಾಧಿಪರ ಯೋಗವು ಉತ್ತಮವೆಂದಭಿಪ್ರಾಯ. ಶನಿಯು ಅಷ್ಟ
ಮಾಧಿಪತಿಯಾದರೂ ನೇರವಾಗಿ ಮಾರಕನಾಗಲಾರನು. "ಉನ್ಮಿಷತ್ಪಾಪನಿ
ಷ್ಫಲಂ" ಅಥವಾ ಲಕ್ಷಣಂ ಪಾಪನಿಷ್ಫಲಂ" ಎಂಬದಕ್ಕೆ ಚಂದ್ರನು ದ್ವಿತೀಯಾಧಿ
ಪತಿಯಾದರೂ ಪಾಪಸಾಹಚರ್ಯದಿಂದ ಮಾರಕನಾಗಬಹುದು ಇತ್ಯಾದಿ ಏನೇ

ನೋ ಅರ್ಥವನ್ನು ಹಚ್ಚುತ್ತಾದರೂ, ಅನ್ವಯಿಸಿ ಅರ್ಥಮಾಡಲು ಯುಕ್ತವಾಗಿ
ಕಾಣದಿರುವದರಿಂದ ಉಪೇಕ್ಷಣೀಯವೆಂದೇ ನಮ್ಮ ಅಭಿಪ್ರಾಯವು.
॥ ೪೬ ॥ ೪೭ ॥ ೪೮ ॥ ೪೯ ॥

॥ ಕರ್ಕಲಗ್ನ ॥

ಶ್ಲೋ:- ಶುಕ್ರಮಂದಬುಧಾಃ ಪಾಪಾ ಃ ಶುಭೌಧಿಷಣಭೂ
ಸುತಾ । ರಾಜಯೋಗಕರಃ ಸಾಕ್ಷಾದೇಕಏವಧರಾಸುತಃ ॥ ೫೦ ॥
ಭವೇತಾಂ ರಾಜಯೋಗಸ್ಯ ಕಾರಕೌ ಗುರು ಭೂಮಿಜೌ ॥
ರವಿಃ ಸಾಕ್ಷಾನ್ನ । ಹಂತಾಸ್ಯಾನ್ಮಾರಕತ್ವೇನಲಕ್ಷಿತಃ ॥ ೫೧ ॥
ಶುಕ್ರಾದಯೋನಿಹಂತಾರೋ ಭವೇಯುಃ ಪಾಪಿನೋಗ್ರ
ಹಾಃ ॥ ಕುಲೀರ ಸಂಭವಸ್ಯೈವಂ ಫಲಾನ್ಯೂಹ್ಯಾನಿಸೂರಿಭಿಃ
॥ ೫೨ ॥

ಕರ್ಕಲಗ್ನಕ್ಕೆ ಶುಕ್ರ, ಶನಿ, ಬುಧ,ರು ಪಾಪರಾಗುವರು. ಗುರು ಕುಜರು
ಶುಭರಾಗುವರು. ಕುಜನು ಸಾಕ್ಷಾತ್ತಾಗಿ ರಾಜಯೋಗಕಾರಕನಾಗುತ್ತಾನೆ.
ಗುರು ಕುಜರ ಯೋಗವೂ ರಾಜಯೋಗಕ್ಕೆ ಕಾರಣವಾಗುವದು.
ಸಾಕ್ಷಾತ್ತಾಗಿ ಮಾರಕನಾಗುವದಿಲ್ಲ. ಉಳಿದ ಶುಕ್ರಾದಿ ಪಾಪಗ್ರಹರು ಮಾರ
ಕರಾಗುವರು. ಹೀಗೆ ಕರ್ಕಲಗ್ನದಲ್ಲಿ ಜನಿಸಿದವನಿಗೆ ಫಲಗಳನ್ನೂಹಿಸ
ತಕ್ಕದ್ದು. ರವಿಯು

ವಿವರಣ: ಕರ್ಕ ಲಗ್ನಕ್ಕೆ ಶುಕ್ರನು ಚತುರ್ಥಕೇಂದ್ರ ಹಾಗೂ ಏಕಾ
ದಶ ಸ್ಥಾನಗಳಿಗೆ ಅಧಿಪತಿಯಾದ್ದರಿಂದಲೂ, ಶನಿಯು ಸಪ್ತಮ ಅಷ್ಟಮಾಧಿ
ಪತಿಯಾಗಿರುವದರಿಂದಲೂ ಬುಧನು ತೃತೀಯ ವ್ಯಯ ಸ್ಥಾನಗಳಿಗೆ ಅಧಿ
ಪತಿಯಾಗಿರುವದರಿಂದಲೂ, ಈ ಮೂರು ಗ್ರಹಗಳು ಪಾಪಿಗಳಾಗುವರು
ಗುರು ಹಾಗೂ ಗುರು ಕುಜರು ಶುಭರಾಗುವರು. ಗುರುವು ಷಷ್ಠ ನವಮ
(ತ್ರಿಕೋಣ) ಗಳಿಗೆ ಅಧಿಪತಿಯು ಕುಜನು. ಪಂಚಮ ತ್ರಿಕೋಣ ದಶಮ
ಕೇಂದ್ರಕ್ಕೆ ಅಧಿಪತಿಯಾಗಿರುವದರಿಂದ (ಕೇಂದ್ರ ತ್ರಿಕೋಣನೇತಾರೌ) ಇವನೊ
ಬ್ಬನೇ ರಾಜಯೋಗಕಾರಕನಾಗುವನು. ಗುರು ಕುಜರ ಯೋಗವೂ ಸಹ ರಾಜ
ಯೋಗಕ್ಕೆ ಕಾರಣವಾಗುವದು. ರವಿಯು ದ್ವಿತೀಯಾಧಿ ಪತಿಯಾಗಿದು
ಮಾರಕನಾಗಿದ್ದರೂ ಸಾಕ್ಷಾತ್ತಾಗಿ ಮಾರಕನಾಗುವದಿಲ್ಲ. (ಪೀಡಾಕಾರಕಿ
ನಾಗಬಹುದು.)

ಕೃಬರಹದ ಪ್ರತಿ ಬೆಂಗಳೂರ ಪ್ರತಿಗಳ ಹೊರತು ಎಲ್ಲಾ ಪುಸ್ತಕ
ಗಳಲ್ಲಿ "ಭಾರ್ಗವೇಂದು ಸುತಾ ಪಾಪಾ ಭೂಸುರಾಂಗಿರ ಸೌಶುಭಾ॥ ಏಕಏವ
ಭವೇತ್ಸಾಕ್ಷಾತ್ ಭೂಸುತೋಯೋಗಕಾರಕಃ ॥ ನಿಹಂತಾಕವಿರನ್ಯೇತುಪಾಪಿ
ನೋಮಾರಕಾಹ್ವಯಾಃ ॥ ಕುಲೀರ ಸಂಭವಸ್ಯೈವಂ ಫಲಾನ್ಯೂಹ್ಯಾನಿಸೂರಿಭಿಃ
ಎಂದಿಷ್ಟೇ ಎರಡು ಶ್ಲೋಕಗಳಲ್ಲಿ ಹೇಳಲಾಗಿದೆ. ಬೃಹತ್ಪಾರಾಶರಿಯಲ್ಲಿಯೂ
ಇಷ್ಟೇ ಇದೆ. ಆದರೆ ಇದರಲ್ಲಿ ಬುಧ ರವಿಗಳ ಹೆಸರೇ ಇಲ್ಲದಿರುವದರಿಂದ
ಪಾಪಿಗಳೊಳಗೆ ಅವರ ಸಮಾವೇಶವಾಗುವದರಿಂದ ಮೇಲೆ ಬರೆದ ಮೂರು
ಶ್ಲೋಕಗಳು ಅಪೇಕ್ಷಣೀಯಗಳೇ ಎಂದೆನಿಸುವದು ೫೦ । ೫೧ । ೫೨ ॥

॥ ಸಿಂಹಲಗ್ನ ॥

ಶ್ಲೋಃ ಮಂದ ಸೌಮ್ಯಸಿತಾಃ ಪಾಪಾ ಕುಜಏವ ಶುಭಾವಹಃ ॥
(ರಾಹಿಣೇಯಸಿತಾ ಪಾಪಾ ಕುಜಜೀವೌಶುಭಾವಹೌ ॥)
ಪ್ರಭವೇದ್ಯೋಗ ಮಾತ್ರೇಣ ನ ಶುಭಂ ಕುಜಶುಕ್ರಯೋಃ ॥ ೫೩ ॥
ಗುರುಯುಕ್ತೋ ಯದಾ ಭೌಮೋ ವಿಶೇಷ ಫಲದಾಯಕಃ ॥
ಮಂದಃ ಸಾಕ್ಷಾನ್ನಹಂತಾಸ್ಯಾ (ಬುಧಃ ಸಾಕ್ಷಾನ್ನ ಹಂತಾಸ್ಯಾ)
॥ ೫೪ ॥
ನ್ಮಾರಕತ್ವೇನ ಲಕ್ಷಿತಃ
ಘ್ನಂತಿ ಸೌಮ್ಯಾದಯಃ ಪಾಪಾ ಮಾರಕತ್ವೇನ ಲಕ್ಷಿತಾಃ ॥
ಏವಂ ಫಲಾನಿ ವೇದ್ಯಾನಿ ಸಿಂಹಜಸ್ಯಮುನೀಷಿಭಿಃ ॥ ೫೫ ॥

ಟೀಃ ಸಿಂಹಲಗ್ನಕ್ಕೆ ಶನಿ, ಬುಧ, ಶುಕ್ರರು ಪಾಪಿಗಳು ಕುಜನೊ
ಬ್ಬನೇ ಶುಭವನ್ನುಂಟುಮಾಡುವನು. ಗುರು ಶುಕ್ರರ ಯೋಗ ಮಾತ್ರ
ದಿಂದ ಶುಭತ್ವವೇನೂ ಉಂಟಾಗಲಾರದು. ಗುರುಯುಕ್ತನಾದ ಕುಜನು
ವಿಶೇಷ ಫಲವನ್ನುಂಟುಮಾಡುವನು. ಶನಿಯು ಸಾಕ್ಷಾತ್ತಾಗಿ ಮಾರಕವಾಗ
ಲಾರನು. ಬುಧಾದಿಪಾಪಗ್ರಹಗಳು ಮಾರಕರಾಗುವರು. ಹೀಗೆ ಸಿಂಹಲಗ್ನ
ದಲ್ಲಿ ಜನಿಸಿದವನಿಗೆ ಫಲವನ್ನೂಹಿಸತಕ್ಕದ್ದು.

ವಿವರಣಃ ಸಿಂಹ ಲಗ್ನದಲ್ಲಿ ಹುಟ್ಟಿದವನಿಗೆ ಶನಿ, ಬುಧ, ಶುಕ್ರರು
ಅಶುಭಕಾರಕರಾಗುವರು. ಶನಿಯು ಷಷ್ಠ ಸಪ್ತಮಾಧಿ ಪತಿಯಾಗುವನು.
ಬುಧನು ದ್ವಿತೀಯ ಏಕಾದಶಾಧಿಪತಿಯಾಗುವನು. ಶುಕ್ರನು ತೃತೀಯ-

ದಶಮಾಧಿಪತಿಯಾಗುವನು. ಕಾರಣ ಇವು ಅಶುಭಕಾರಕರಾಗುವರು. ಕುಜ
ನು ಚತುರ್ಥಕೇಂದ್ರ ನವಮ ತ್ರಿಕೋಣಾಧಿಪತಿಯಾಗುವದರಿಂದ ಪೂರ್ಣ
ಶುಭನಾಗುವನು. ಪಾಠಾಂತರದಂತೆ ಬುಧ ಶುಕ್ರರು ಮಾತ್ರ ಪಾಪಿಗಳಾ
ಗುವರು? ಶನಿಯನ್ನು ಅದರಲ್ಲಿ ಗಣಿಸಲಿಲ್ಲ. ಶನಿಯು ಸಪ್ತಮಾಧಿಪತಿ
ಯಾದ್ದರಿಂದ ಷಷ್ಠಾದಿಪತ್ಯದ ದೋಷವನ್ನು ಗಣನೆಗೆ ತರಲಿಲ್ಲ ಮತ್ತು
ಕುಜ ಗುರುಗಳೆರಡನ್ನೂ ಶುಭತ್ವದಿಂದ ಎಣಿಸಲಾಗಿದೆ.

ಗುರುವು ಪಂಚಮ ತ್ರಿಕೋಣ ಹಾಗೂ ಅಷ್ಟಮಾಧಿಪತಿಯಾಗುತ್ತಾನೆ.
ಇಲ್ಲಿ ತ್ರಿಕೋಣಾಧಿಪತ್ಯ ಪ್ರಾಶಸ್ತ್ಯದಿಂದ ಅಷ್ಟಮಾಧಿಪತ್ಯ ದೋಷವನ್ನೆಣಿಸಿಲ್ಲ.
ಆದರೆ- ಕುಜನಷ್ಟು ನಿರ್ದುಷ್ಟನಲ್ಲವೆಂದು ಧಾರಾಳವಾಗಿ ಹೇಳಬಹುದು.
ಶುಕ್ರ ಕುಜಯೋಗವು ಶುಭಪ್ರದವಲ್ಲ. ಶುಕ್ರನು ತೃತೀಯ ದಶಮಾಧಿಪತಿ
ಯಾದ್ದರಿಂದ ಅವನಿಂದ ಕೂಡಿದ ಕುಜನಾದರೂ ಶುಭಪ್ರದನಾಗಲಾರನೆಂದರ್ಥ.
ಕುಜ, ಗುರು, ಯೋಗವು ಕೇಂದ್ರ ತ್ರಿಕೋಣಾಧಿಪತ್ಯ.ಕಾರಣದಿಂದ ವಿಶೇಷ
ಶುಭಪ್ರದವಾಗುವದು. ಇಲ್ಲಿ ಶನಿಯು ಸಾಕ್ಷಾತ್ತಾಗಿ ಮಾರಕನಾಗಲಾರನು.
ಯಾಕಂದರೆ ಕೇಂದ್ರಾಧಿಪತ್ಯವಿರುವದು. "ಬುಧಃಸಾಕ್ಷಾನ್ನಹಂತಾಸ್ಯಾತ್"
ಎಂಬ ಪಾಠವು ಅಷ್ಟು ಸರಿ ತೋರುವದಿಲ್ಲ. ಯಾಕಂದರೆ ಅಂಶತಃ ಆದರೂ
ಆತನಿಗೆ ಶುಭತ್ವವಿಲ್ಲ. ದ್ವಿತೀಯ ಏಕಾದಶಾಧಿಪತ್ಯದ ಮೂಲಕ ಮಾರಕನೇ
ಆಗುವನು. ಕಾರಣ ಈ ಪಾಠವು ಅಶುದ್ಧವು. ಮುಂದೆ "ಘ್ನಂತಿಸೌಮ್ಯಾದ
ಯಃಪಾಪಾಃ" ಎಂಬದಾಗಿ ಸ್ಪಷ್ಟ ಹೇಳಿಯೇ ಇದೆ. ಹೀಗೆ ಸಿಂಹಲಗ್ನದಲ್ಲಿ
ಜನಿಸಿದವನಿಗೆ ಫಲಾಫಲಗಳನ್ನೂಹಿಸುವದು. ॥ ೫೩ ॥ ೫೪ ॥ ೫೫ ॥

॥ ಕನ್ಯಾಲಗ್ನ ॥

ಶ್ಲೋಃ ಕುಜಜೀವೇಂದವಃಪಾಪಾ ಏಕೋಭೃಗುಸುತಃ ಶುಭಃ॥
ರಾಜಯೋಗಕರಃ ಸೌಮ್ಯೋಭೃಗುಪುತ್ರಸಮನ್ವಿತಃ ॥ ೫೬ ॥
ನ ಹಂತಿಕವಿರನ್ಯೇತು ಮಾರಕಾಖ್ಯಾಃ ಕುಜಾದಯಃ
ಘ್ನಂತಿ ಪಾಪಾಃ ಫಲಾನ್ಯೂಹ್ಯಾನ್ಯೇವಂ ಕನ್ಯಾಭವೇಬುಧೈಃ॥೫೭॥

ಟೀಃ- ಕುಜ, ಗುರು ಚಂದ್ರ,ರು ಕನ್ಯಾಲಗ್ನಕ್ಕೆ ಪಾಪಿಗಳಾಗುದರು.
ಶುಕ್ರನೊಬ್ಬನೇ ಶುಭಪ್ರದನಾಗುವನು. ಶುಕ್ರನಿಂದ ಕೂಡಿದ ಬುಧನು

ಶುಕ್ರನಾದರೂ ಮಾರಕನಾಗಲಾರನು. ಕು
ರಾಜಯೋಗಕಾರಕನಾಗುವನು. ಹೀಗೆ ಗನ್ಯಾಲಗ್ನದಲ್ಲಿ ಜನಿಸಿದ
ಜಾಧಿ ಪಾಪಗ್ರಹಗಳು ಮಾರಕರಾಗುವರು.
ವನಿಗೆ ಫಲಗಳನ್ನೂಹಿಸುವದು.

ಕುಜನು ತೃತೀಯ ಅಷ್ಟಮಾಧಿಪತಿ
ವಿವರಣ:- ಕನ್ಯಾಲಗ್ನಕ್ಕೆ ಸಪ್ತಮಾಧಿಪತಿಯಾಗುವನು. ಚಂದ್ರ
ಯಾಗುವನು. ಗುರುವು ಚತುರ್ಥ ಕಾರಣ ಈ ಮೂರು
ನು ಏಕಾದಶಾಧಿಪತಿಯಾಗುವನು. ಶುಕ್ರನು ದ್ವಿತೀಯಾಧಿಪತಿಯಾ
ಗ್ರಹಗರು ಮಾರಕರಾಗುವರು. ಶುಭನೇ ಆಗುವನು. ಈ ಲಗ್ನಕ್ಕೆ
ದರೂ ನವಮಾಧಿಪತಿಯಾಗಿರುವದರಿಂದ ಶನಿಯು ತ್ರಿಕೋಣಾಧಿಪತಿ
ಇಷ್ಟು ಶುಭರಾದರೂ ಬೇರೆ ಯಾರೂ ಇಲ್ಲ. ರವಿಯು ವ್ಯಯಾಧಿಪತಿಯಾಗುತ್ತಾ
ಯಾದರೂ ಷಷ್ಠಾಧಿಪತಿಯಾಗಿರುತ್ತಾನೆ. ತ್ರಿಕೋಣಾಧಿಪಯೋಗವಾಗು
ನೆ. ಶುಕ್ರನಿಂದ ಕೂಡಿದ ಬುಧನು (ಕೇಂದ್ರ ಶುಕ್ರನು ದ್ವಿತೀಯಾಧಿಪತಿಯಾ
ವದರಿಂದ) ರಾಜಯೋಗಕಾರಕನಾಗುತ್ತಾನೆ. ಮಾರಕನಾಗುದದಿಲ್ಲ. ಕುಜ
ದರೂತ್ರಿಕೋಣಾಧಿಪತ್ಯದ ಕಾರಣದಿಂದಾಗಿ ಕನ್ಯಾಲಗ್ನದಲ್ಲಿ ಜನಿಸಿದವನ
ಮೊದಲಾದವರು ಪಾಪಿಗಳಾಗುತ್ತಾರೆ. ಹೀಗೆ || ೫೬ || ೫೭ ||
ಫಲಾಫಲಗಳನ್ನೂಹಿಸುವದು.

|| ತುಲಾಲಗ್ನ ||

ಶ್ಲೋ: ಜೀವಾರ್ಕಮಹಿಜಾಃ ಪಾಪಾಃ ಶನೈಶ್ಚರಬುಧೌಶುಭೌ||
ರಾಜಯೋಗಕರಃಸಾಕ್ಷಾದೇಕಏವಾಂಶುಮತ್ಸುತಃ || ೫೮ ||
ಭವೇತಾಂರಾಜಯೋಗಸ್ಯಕಾರಕಾವಿಂದು ತತ್ಸುತೌ||
ಕುಜಃ ಸಾಕ್ಷಾನ್ನಹಂತಾಸ್ಯಾನ್ಮಾರಕತ್ವೇನಲಕ್ಷಿತಃ || ೫೯ ||
ಜೀವಾದಯೋನಿಹಂತಾರೋಭವೇಯುಃಪಾಪಿನೋಗ್ರಹಾಃ ||
ಶುಭಾಶುಭಫಲಾನ್ಯೇವಂಜ್ಞಾತವ್ಯಾನಿತುಲಾಭವಃ || ೬೦ ||

ಟೀ: ತುಲಾಲಗ್ನಕ್ಕೆ ಗುರು, ರವಿ, ಕುಜ,ರು ಪಾಪಿಗಳು. ಶನಿಬುಧರು
ಶುಭರು, ಶನಿಯೊಬ್ಬನೇ ಸಾಕ್ಷಾತ್ ರಾಜಯೋಗಕಾರಕನು. ಚಂದ್ರ ಬುಧ
ಯೋಗವು ಶುಭಕರವು. ಮಾರಕತ್ವ ಲಕ್ಷಣದಿಂದ ಯುಕ್ತನಾದರೂ ಕುಜನು
ಸಾಕ್ಷಾತ್ ಮಾರಕನಾಗಲಾರನು. ಗುರು ಮೊದಲಾದ ಪಾಪಿಗಳು ಮಾರಕ
ರಾಗುವರು. ಹೀಗೆತುಲಾ ಲಗ್ನದಲ್ಲಿ ಜನಿಸಿದವನಿಗೆ ಶುಭಾಶುಭಗಳನ್ನೂಹಿ
ಸತಕ್ಕದ್ದು.

ವಿವರಣ: ತುಲಾಲಗ್ನಕ್ಕೆ ಗುರುವು ತೃತೀಯ ಷಷ್ಠಾಧಿಪತಿಯಾಗುವನು.
ಸೂರ್ಯನು ಏಕಾದಶಾಧಿಪತಿಯಾಗುವನು. ಕುಜನು ದ್ವಿತೀಯ ಹಾಗೂ
ಸಪ್ತಮ ಮಾರಕಾಧಿಪತಿಯಾಗುವನು.

ಕಾರಣ ಈಮೂರು ಗ್ರಹರೂ ಅಶುಭಕಾರಿಗಳು ಶನಿಯು ಚತುರ್ಥಕೇಂದ್ರ
ಪಂಚಮ ತ್ರಿಕೋಣಗಳಿಗೆ ಅಧಿಪತಿಯು. ಬುಧನು ವ್ಯಯ ನವಮ ತ್ರಿಕೋ
ಣಗಳಿಗೆ ಅಧಿಪತಿಯು. ಆದುದರಿಂದ ಬುಧ ಚಂದ್ರರ ಯೋಗವು ರಾಜಯೋ
ಗಕರವಾಗುವದು. ಕುಜನು ಸಾಕ್ಷಾತ್ ಮಾರಕನಾಗಲಾರನು. ದ್ವಿತೀಯ
ಸಪ್ತಮಾಧಿಪತಿಯಾದರೂ ಕೇಂದ್ರಾಧಿಪತ್ಯ ಬರುವದರಿಂದ ವಿಶೇಷಮಾರಕ
ನಾಗುವದಿಲ್ಲ. ಕೆಲ ಪುಸ್ತಕಗಳಲ್ಲಿ "ಸಾಕ್ಷಾನ್ನಿಹಂತಾ" ಎಂಬ ಪಾಠ
ಭೇದವಿರುವದು. ಎರಡು ಮಾರಕ ಸ್ಥಾನಾಧಿಪತಿಯಾದ್ದರಿಂದ ವಿಶೇಷ ಮಾ
ರಕನೆಂದು ಅದರ ಅರ್ಥವಾಗುವದು. ಇದೂ ಅಸಂಗತವೆನ್ನಲೂಬಾರದು.
ಮತ್ತು ಕೆಲ ಪುಸ್ತಕಗಳಲ್ಲಿ ಬೃಹತ್‌ಪಾರಾಶರಿಯಲ್ಲಿ ಸಹ "ಕಾವ್ಯೋನತುತು
ಲಾಭುವಃ" ಎಂಬದಾಗಿ ಕೊನೆಯಲ್ಲಿ ಪಾಠಭೇದವನ್ನು ಹೇಳಲಾಗಿದೆ. ಅಂ
ದರೆ ಶುಕ್ರನು ಲಗ್ನಕೇಂದ್ರ ಹಾಗೂ ಅಷ್ಟಮಾಧಿಪತಿಯಾದರೂ ಮಾರಕನಾಗು
ವದಿಲ್ಲವೆಂದು ಅದರ ಅರ್ಥ ಯಾಕಂದರೆ "ಲಗ್ನಾಧೀಶೋಪಿಚೇತ್ಸ್ವಯಂ"
ಎಂದು ಹಿಂದೆಯೇ ಹೇಳಿದೆ. ಮೇಷ ಲಗ್ನಕ್ಕೆ ಕುಜನೂ ತುಲಾ ಲಗ್ನಕ್ಕೆ ಶುಕ್ರ
ನೂ ಲಗ್ನಾಧಿಪ ಹಾಗೂ ಅಷ್ಟಮಾಧಿಪರಾಗುವರು. ಅಷ್ಟಮಾಧಿಪತ್ಯ ದೋಷ
ವು ಇವರಿಗೆ ಇಲ್ಲವೆಂಬ ವಿಶೇಷವಚನವನ್ನಿಲ್ಲಿ ಸಂಬಂಧಿಸಿಕೊಳ್ಳಬಹುದು.
|| ೫೮ || ೫೯ || ೬೦ ||

|| ವೃಶ್ಚಿಕಲಗ್ನ ||

ಶ್ಲೋ: ಬುಧಶುಕ್ರಾರ್ಕತನಯಾಃ ಪಾಪಾಃ ಸುರಗುರುಃ ಶುಭಃ ||
(ಭೌಮಸೌಮ್ಯಸಿತಾಃ ಪಾಪಾಃ ಶುಭೌಗುರು ನಿಶಾಕರೌ)
ಸೂರ್ಯಚಂದ್ರಮಸಾವೇವಭವೇತಾಂಯೋಗ ಕಾರಕೌ ||೬೦||
ಜೀವೋನಹಂತಾ ಸೌಮ್ಯಾದ್ಯಾಹಂತಾರೋಮಾರಕಾಹ್ವಯಾಃ ||
(ಸೌಮ್ಯಾದ್ಯಾಃ ಪರೇಮಾರಕ ಲಕ್ಷಣಾಃ) ತತ್ತತ್ಫಲಾನಿವಿಜ್ಞೇ
ಯಾನ್ಯೇವಂವೃಶ್ಚಿಕ ಜನ್ಮನಃ|| || ೬೧ ||

ಟೀ: ಈ ಲಗ್ನಕ್ಕೆ ಬುಧ, ಶುಕ್ರ, ಶನಿಗಳು ಪಾಪಿಗಳು ಗುರುವು ಶುಭನು.

ಸೂರ್ಯಚಂದ್ರರ ಯೋಗವು ರಾಜಯೋಗಕಾರಕವಾಗುವದು. ಗುರುವು ಪ್ರತ್ಯ
ಕ್ಷ ಮಾರಕನಾಗಲಾರನು. ಬುಧ ಮೊದಲಾದ ಗ್ರಹರು ಮಾರಕರಾಗುವರು.
ಹೀಗೆ ವೃಶ್ಚಿಕ ಲಗ್ನದಲ್ಲಿ ಹುಟ್ಟಿದವನಿಗೆ ಫಲಗಳು.

ಏಕಾದಶಾಧಿಪತಿಯಾಗು

ವಿವರಣ: ವೃಶ್ಚಿಕ ಲಗ್ನಕ್ಕೆ ಬುಧನು ಅಷ್ಟಮ ಏಕಾದಶಾಧಿಪತಿಯಾಗು ವನು. ಶುಕ್ರನು ಸಪ್ತಮ ವ್ಯಯಾಧಿಪತಿಯಾಗುವನು. ಶನಿಯು ತೃತೀಯಾ ಧಿಪತಿಯಾಗುವನು. ಕಾರಣ ಇವರು ಪಾಪರಾಗುವರು. ಪಾಠಾಂತರದಂತೆ ಕುಜನು ಷಷ್ಠಾಧಿಪತಿಯಾದ್ದರಿಂದ ಪಾಪಿಯಾಗುವನು. ಪಾಠಾಂತರದಂತೆ "ಗುರು ನಿಶಾಕರಾ" ಎಂಬದಾಗಿ ಚಂದ್ರನನ್ನು ಶುಭರಲ್ಲಿ ಸೇರಿಸಲಾಗಿದೆ. ಆದರೂ "ಸೂರ್ಯ ಚಂದ್ರನು ಸಾವೇವ" ಎಂದು ಹೇಳಿದ್ದರಿಂದ ಈ ಎರಡು ಗ್ರಹರೂ ಶುಭರೆಂದು ಹೇಳಿದಂತಾಗಿದೆ. ಈ ಚಂದ್ರ ಸೂರ್ಯರ ಯೋಗವು ಕೇಂದ್ರ ತ್ರಿಕೋಣಾಧಿಪಯೋಗವಾಗುವದರಿಂದ ರಾಜಯೋಗವೇ ಉಂಟಾಗುವ ದು. ಸಹಜ ಗುರುವು ದ್ವಿತೀಯಾಧಿಪತಿಯಾದರೂ ಮಾರಕನಾಗುವದಿಲ್ಲ. "ಜೀವೋನಿಹಂತಾ" ಎಂಬದಾಗಿ ಪಾಠಾಂತರವಿದೆಯಾದರೂ ಮೊದಲು ಹೇಳಿದ ಶ್ಲೋಕಕ್ಕೆ ಇದು ವಿರುದ್ಧವಾಗುವದರಿಂದ ಸಾಧುವಲ್ಲ. ಇನ್ನು ಬುಧ, ಶುಕ್ರ, ಶನಿಗಳು ಮಾರಕರಾಗುವರು.

|| ೬೧ || ೬೨ ||

|| ಧನುರ್ಲಗ್ನ ||

ಶ್ಲೋ ಏಕಏವಕವಿಃಪಾಪಃಶುಭೌಭೌಮದಿವಾಕರೌ ||
ಯೋಗೋಭಾಸ್ಕರಸೌಮ್ಯಾಭ್ಯಾಂಸ್ಯಾನ್ನಹಂತಾಂಶುಮತ್ಸುತಃ || ೬೩ ||

ಘ್ನಂತಿಶುಕ್ರಾದಯಃಪಾಪಾಃಮಾರಕತ್ವೇನಲಕ್ಷಿತಾಃ ||
ಜ್ಞಾತವ್ಯಾನಿಫಲಾನ್ಯೇವಂಚಾಪಜಸ್ಯಮನೀಷಿಭಿಃ || ೬೪ ||

ಟೀ: ಧನುರ್ಲಗ್ನಕ್ಕೆ ಶುಕ್ರನೊಬ್ಬನೇ ಪಾಪನು. ಕುಜ ರವಿಗಳು ಶುಭ ರಾಗುವರು. ರವಿ ಬುಧರ ಯೋಗವು ರಾಜಯೋಗಕರವಾಗುವದು. ಶನಿಯಾ ದರೂ ಮಾರಕನಾಗುವದಿಲ್ಲ. ಉಳಿದ ಶುಕ್ರಾದಿಗ್ರಹರು ಮಾರಕರಾಗುವರು. ಹೀಗೆ ಧನುರ್ಲಗ್ನದಲ್ಲಿ ಜನಿಸಿದವನಿಗೆ ಫಲಾಫಲಗಳನ್ನೂಹಿಸುವದು.

ವಿವರಣ:- ಧನುರ್ಲಗ್ನಕ್ಕೆ ಶುಕ್ರನು ಷಷ್ಠ ಏಕಾದಶಾಧಿಪತಿಯಾಗು

ವನು. ಕಾರಣ ಇವನೊಬ್ಬನೇ ವಿಶೇಷ ಅಶುಭಕಾರಕನಾಗುವನು. ಕುಜನು ಪಂಚಮ ವ್ಯಯಾಧಿಪತಿಯಾಗುವನು. (ವ್ಯಯಾಧಿಪತಿಯಾದರೂ ತ್ರಿಕೋಣಾಧಿ ಪತಿಯಾದ್ದರಿಂದ ಶುಭನೇ ಆಗುವನು.) ಸೂರ್ಯನು ನವಮಾಧಿಪತಿಯಾದ್ದ ರಿಂದ ಶುಭವಾಗುವನು. ಇಲ್ಲಿ "ಸೌಮ್ಯದಿವಾಕರಾ" ಎಂಬದೊಂದು ಪಾ ಠಾಂತರವಿದೆ. ಅಂದರೆ ಬುಧನನ್ನು ಶುಭರಲ್ಲಿ ಸೇರಿಸಲಾಗಿದೆ. ಆದರೆ ಇದು ಸರಿಯಲ್ಲ ಯಾಕಂದರೆ ಬುಧನು ಸಪ್ತಮ-ದಶಮ ಕೇಂದ್ರಾಧಿಪತಿಯಾಗುತ್ತಾನೆ ಶುಭಗ್ರಹರಿಗೆ ; ಕೇಂದ್ರಾಧಿಪತ್ಯವು ಶುಭಕರವಲ್ಲವೆಂದು ಹಿಂದೆ ಹೇಳಿದ್ದಕ್ಕೆ ಇದು ವಿರುದ್ಧವಾಗುವದು. ಇನ್ನು ರವಿಯೊಡನೆ ಆ ಬುಧನ ಯೋಗವಾ ದರೆ ಶುಭವಾಗುವದು. ಯಾಕಂದರೆ ಕೇಂದ್ರ ತ್ರಿಕೋಣಾಧಿಪರ ಯೋಗವು ಹೆಚ್ಚಿನ ಶುಭಕಾರಿಯೆಂದು ಹೇಳಿದೆ. ಶನಿಯು ಸಾಕ್ಷಾತ್ ಮಾರಕನಾಗ ಲಾರನು. ಆದರೆ ಶುಭನಲ್ಲ. ಯಾಕಂದರೆ ಅವನು ದ್ವಿತೀಯ ತೃತೀಯಾ ಧಿಪತಿಯಾಗುತ್ತಾನಷ್ಟೇ. ಕೆಲಪಾಠಾಂರದಲ್ಲಿ "ಸ್ಯಾನ್ನಿಹಂತಾ" ಎಂಬದಾಗಿ ಮಾರಕದಲ್ಲಿ ಸೇರಿಸಿದ್ದು ತಪ್ಪೆನ್ನುವಂತಿಲ್ಲ. ಮೂಲದಲ್ಲಿ "ಶುಕ್ರನೊಬ್ಬನೇ ಪಾಪಿಯು" ಎಂದು ಹೇಳಿದ್ದರೂ, "ಘ್ನಂತಿ ಶುಕ್ರಾದಯಃ ಎಂದು ಎರಡನೇ ಶ್ಲೋಕದಲ್ಲಿ ಹೇಳಿರುವದರಿಂದ ಶುಕ್ರ, ಶನಿ, ಬುಧ,ರು ಅಂಥಂಥ ಸಂದ- ರ್ಭದಲ್ಲಿಮಾರಕರೇ ಆಗುವರು. ಗುರುವುಲಗ್ನಾಧಿಪತಿಯಾದರೂಚತುರ್ಥಕೇಂದ್ರಾ ಧಿಪತಿಯಾಗುವದಿಲ್ಲವೇ? ಕಾರಣ ಇವನು ತ್ರಿಕೋಣಾಧಿಪತಿಗಳ ಸಂಬಂಧ ರಹಿತನಾದಲ್ಲಿ ಅಶುಭನೆಂದೇ ತಿಳಿಯತಕ್ಕದ್ದು. || ೬೩ || || ೬೪ ||

|| ಮಕರಲಗ್ನ ||

ಶ್ಲೋ: ಕುಜಜೀವೇಂದವಃಪಾಪಾಃಶುಭೌಭಾರ್ಗವಚಂದ್ರಜೌ ||
ರಾಜಯೋಗಕರಃಸಾಕ್ಷಾದೇಕಏವಭೃಗೋಃಸುತಃ || ೬೫ ||
ಚಂದ್ರಾತ್ಮಜೇನಸಂಯುಕ್ತೋವಿಶೇಷಫಲದಾಯಕಃ ||
ಸ್ವಯಂಚೈವನಹಂತಾಸ್ಯಾನ್ಮಂದೋಭೌಮಾದಯಃಪರೇ || ೬೬ ||
ನಿಹಂತಾರಃ ಪಾಪಿನಸ್ತೇಮಾರಕತ್ವೇನಲಕ್ಷಿತಾಃ ||
ಜ್ಞಾತವ್ಯಾನಿಬುಧೈರೇವಂಫಲಾನಿಮೃಗಜನ್ಮನಃ || ೬೭ ||

ಟೀ: ಕುಜ, ಗುರು, ಚಂದ್ರ,ರು ಈ ಮಕರ ಲಗ್ನಕ್ಕೆ ಪಾಪಿಗಳು. ಶುಕ್ರ, ಬುಧ,ರು ಶುಭರು. ಶುಕ್ರನೊಬ್ಬನೇ ಸಾಕ್ಷಾತ್ ರಾಜಯೋಗಕಾರ

ಕನು. ಬುಧನಿಂದ ಯುಕ್ತನಾದ ಶುಕ್ರನು ವಿಶೇಷ ಫಲದಾಯಕನಾಗುವನು. ಶನಿಯು ತಾನೊಬ್ಬನೇ ಮಾರಕನಾಗಲಾರನು. ಉಳಿದ ಮಾರಕ ಲಕ್ಷಣಯುಕ್ತರಾದ ಕುಜ ಮೊದಲಾದವರು ಮಾರಕರಾಗುತ್ತಾರೆ. ಹೀಗೆ ಮಕರ ಲಗ್ನದಲ್ಲಿ ಜನಿಸಿದವನಿಗೆ ಶುಭಾಶುಭಫಲಗಳನ್ನೂಹಿಸುವದು.

ವಿವರಣ: ಮಕರ ಲಗ್ನಕ್ಕೆ ಕುಜನು ಚತುರ್ಥ ಏಕಾದಶಾಧಿಪತಿಯಾಗುವನು. ಗುರುವು ತೃತೀಯ ವ್ಯಯಾಧಿಪತಿಯಾಗುವನು. ಚಂದ್ರನು ಸಪ್ತಮಾಧಿಪತಿಯಾಗುತ್ತಾನೆ. ಕಾರಣ ಈ ಮೂರು ಗ್ರಹಗಳೂ ಪಾಪಿಗಳಾಗುತ್ತಾರೆ ಶುಕ್ರನು ಪಂಚನು ದಶಮಾಧಿಪತಿ.(ಕೇಂದ್ರ ತ್ರಿಕೋಣಾಧಿಪತಿ)ಯಾಗುತ್ತಾನೆ. ಬುಧನು ಷಷ್ಠ ನವಮಾಧಿಪತಿಯಾಗುವನು. ಕಾರಣ ಈ ಎರಡೂ ಗ್ರಹರು ಈ ಲಗ್ನಕ್ಕೆ ಶುಭರಾಗುತ್ತಾರೆ. ಆದರೆ ಇವರಲ್ಲಿ ಶುಕ್ರನೇ ವಿಶೇಷ ರಾಜಯೋಗ ಕಾರಕನಾಗುತ್ತಾನೆ. (ಕೇಂದ್ರ ತ್ರಿಕೋಣಾಧಿಪತ್ಯ ಮೂಲಕ) ಬುಧನು ತ್ರಿಕೋಣಾಧಿ ಪತಿಯಾದರೂ ಷಷ್ಠಾಧಿಪತಿಯಾಗುವದರಿಂದ ಪಾಶಸ್ತ್ಯವನ್ನು ಕಳಕೊಳ್ಳುವನು. ಶುಕ್ರನು ಬುಧನ ಸಂಯೋಗವನ್ನು ಹೊಂದಿದಲ್ಲಿ ಕೇಂದ್ರ ತ್ರಿಕೋಣಾಧಿಪತಿ ಯೋಗ ಮೂಲಕ ವಿಶೇಷ ಫಲದಾಯಕನಾಗುತ್ತಾನೆ. ಶನಿಯು ಲಗ್ನಕೇಂದ್ರ ಹಾಗೂ ದ್ವಿತೀಯಾಧಿಪತಿಯಾದ್ದರಿಂದ ಸ್ವಯಂ ಮಾರಕನಾಗುವದಿಲ್ಲ. ಅನ್ಯಮಾರಕ ಸಂಬಂಧವಾದಲ್ಲಿ ಮಾರಕನಾಗುವನೆಂದರ್ಥ. "ಸ್ವಯಂಚೈವನಿಹಂತಾಸ್ಯಾತ್" ಎಂಬ ಪಾಠವು ಅಷ್ಟು ಸಮಂಜಸವಲ್ಲ. ಕುಜ ಮೊದಲಾದ ಪಾಪಗ್ರಹರು ಮಾರಕರಾಗುತ್ತಾರೆ. ॥ ೬೫ ॥ ೬೬ ॥ ೬೭ ॥

॥ ಕುಂಭಲಗ್ನ ॥

ಶ್ಲೋ: ಕುಜಜೀವೇಂದವಃಪಾಪಾಃಏಕೋದೈತ್ಯಗುರುಃ ಶುಭಃ ॥
ರಾಜಯೋಗಕರೌಭೌಮ ಕವೀಏಕೋಬೃಹಸ್ಪತಿಃ ॥ ೬೮ ॥
ನಹಂತಾಘ್ನಂತಿಭೌಮಾದ್ಯಾಮಾರಕತ್ವೇನಲಕ್ಷಿತಾಃ ॥
ಜ್ಞಾತವ್ಯಾನಿಬುಧೈರೇವಂ ಫಲಾನಿಘಟಜನ್ಮನಃ ॥ ೬೯ ॥

ಟೀ: ಕುಜ, ಗುರು, ಚಂದ್ರರು ಈ ಕುಂಭ ಲಗ್ನಕ್ಕೆ ಪಾಪಿಗಳು. ಶುಕ್ರನೊಬ್ಬನೇ ಶುಭನು. ಕುಜ, ಶುಕ್ರರ ಯೋಗವು ರಾಜಯೋಗಕಾರಕವು. ಗುರುವೊಬ್ಬನೇ ಮಾರಕನಾಗಲಾರನು. ಮಾರಕ ಲಕ್ಷಣದಿಂದ ಕೂಡಿದ ಕುಜ

ಮೊದಲಾದವರು ಮಾರಕರಾಗುತ್ತಾರೆ.

ವಿವರಣ: ಕುಂಭಲಗ್ನಕ್ಕೆ ಕುಜನು ತೃತೀಯ-ದಶಮಾಧಿಪತಿಯಾಗುತ್ತಾನೆ. ಗುರುವು ದ್ವಿತೀಯ ಏಕಾದಶಾಧಿಪತಿಯಾಗುತ್ತಾನೆ. ಚಂದ್ರನು ಷಷ್ಠಾಧಿಪತಿಯಾಗುತ್ತಾನೆ. ಕಾರಣ ಈ ಮೂರು ಗ್ರಹರೂ ಪಾಪಿಗಳಾಗುತ್ತಾರೆ. ಶುಕ್ರನು ಚತುರ್ಥ ನವಮಾಧಿಪತಿಯಾದ್ದರಿಂದ (ಕೇಂದ್ರ ತ್ರಿಕೋಣ) ಇವನೊಬ್ಬನೇ ಶುಭದಾಯಕನಾಗುತ್ತಾನೆ. ಕುಜ, ಶುಕ್ರರು-ಕೇಂದ್ರ-ತ್ರಿಕೋಣಾಧಿಪತಿಗಳಾಗುವದರಿಂದ ಇವರ ಯೋಗವು ರಾಜಯೋಗಕರವಾಗುವದು. ಗುರುವು ದ್ವಿತೀಯಾಧಿಪತಿಯಾದರೂ ಅನ್ಯಮಾರಕ ಸಂಬಂಧವಿಲ್ಲವಾದರೆ ಸ್ವಯಂ ಮಾರಕನಾಗಲಾರನು. (ದ್ವಿತೀಯ-ವ್ಯಯಾಧಿಪತಿಗಳು ಅನ್ಯಸ್ಥಾನ ಸಂಬಂಧವನ್ನನುಸರಿಸಿಫಲಪ್ರದರಾಗುವರು.) "ನಿಹಂತಾಘ್ನಂತಿ" ಎಂಬದಾಗಿ ಪಾಠಾಂತರವೂ ಇದೆ. ಇದರಿಂದ ಮಾರಕನೆಂದಾಗುತ್ತದೆ. ಕುಜಾದಿಗಳು ಮಾರಕರಾಗುತ್ತಾರೆ. ಆದಿ ಶಬ್ದದಿಂದ ಸೂರ್ಯನನ್ನೂ ಮಾರಕರಲ್ಲಿ ಸೇರಿಸಬಹುದು. ಯಾಕಂದರೆ ಸೂರ್ಯನು ಸಪ್ತಮಾಧಿಪತಿಯಾಗುತ್ತಾನೆ. ಆದರೂ ಪಾಪಗ್ರಹರಿಗೆ ಕೇಂದ್ರಾಧಿಪತ್ಯವು ಶುಭವೆಂದು ಶ್ಲೋಕದಲ್ಲಿ ಕೈಬಿಟ್ಟರುವರೋ ಏನೋ? ಅಥವಾ "ಬೃಹತ್ ಪಾರಾಶರಿಯಲ್ಲಿ" ಚಂದ್ರ ಸೂರ್ಯೌವಿನಾಸರ್ವೇಮಾರಕಾಃಪರಿಕೀರ್ತಿತಾಃ" ಎಂಬದಾಗಿ ಚಂದ್ರ-ಸೂರ್ಯರನ್ನು ಮಾರಕತ್ವದಿಂದ ಹೊರಪಡಿಸಿರುತ್ತಾರೆ. ಅದನ್ನು ಈ ಸಂದರ್ಭದಲ್ಲಿ ಅನ್ವಯಿಸಿಕೊಳ್ಳುವದು.

॥ ೬೮ ॥ ೬೯ ।

॥ ಮೀನಲಗ್ನ ॥

ಶ್ಲೋ: ಮಂದಶುಕ್ರಾಂಶುಮತ್ಸೌಮ್ಯಾಃ ಪಾಪಾ ಭೌಮವಿಧೂಶುಭಾ ॥
ಮಹೀಸುತ ಗುರೂಯೋಗಕಾರಕೌ ನೈವಭೂಸುತಃ ॥ ೭೦ ॥
ಮಾರಕೋಮಾರಕಾಭಿಖ್ಯಾಮಂದಾದ್ಯಾಘ್ನಂತಿಪಾಪಿನಃ ।
ಇತ್ಯೂಹ್ಯಾನಿಬುಧೈಃಸಮ್ಯಕ್ ಫಲಾನಿಝುಷಜನ್ಮನಃ ॥ ೭೧ ॥

ಟೀ: ಶನಿ, ಶುಕ್ರ, ಬುಧ, ರವಿ,ಗಳು ಮೀನಲಗ್ನಕ್ಕೆ ಪಾಪಿಗಳು ಕುಜ, ಚಂದ್ರರು ಶುಭರು. ಕುಜ, ಗುರು ಯೋಗವು ರಾಜಯೋಗಕರವಾದದ್ದು ಅಂಗಾರಕನು ಸಾಕ್ಷಾತ್ ಮಾರಕನಾಗಲಾರನು. ಶನಿ, ಮೊದಲಾದ ಗ್ರಹರು ಮಾರಕರಾಗುವರು. ಹೀಗೆ ಮೀನಲಗ್ನದಲ್ಲಿ ಜನ್ಮಿಸಿದವನಿಗೆ ಫಲವನ್ನೂ

ಹಿಸುವದು.

ವಿವರಣ: ಮೀನ ಲಗ್ನಕ್ಕೆ ಶನಿಯು ಏಕಾದಶವ್ಯಯಾಧಿಪತಿಯಾಗು
ವನು. ಶುಕ್ರನು ತೃತೀಯ ಅಷ್ಟಮಾಧಿಪತಿಯಾಗುವನು. ಸೂರ್ಯನು
ಷಷ್ಠಾಧಿಪತಿಯಾಗುತ್ತಾನೆ. ಬುಧನು ಚತುರ್ಥ ಸಪ್ತಮಾಧಿಪತಿಯಾಗು
ತ್ತಾನೆ. ಕಾರಣ ಈ ನಾಲ್ಕು ಗ್ರಹರು ಪಾಪಿಗಳಾಗುವರು. ಕುಜನು
ದ್ವಿತೀಯ-ನವಮಾಧಿಪತಿಯಾಗುತ್ತಾನೆ. ಚಂದ್ರನು ಪಂಚಮಾಧಿಪತಿಯಾಗು
ವನು. ಕಾರಣ ಈ ಎರಡು ಗ್ರಹಗಳು ಶುಭರಾಗುತ್ತಾರೆ. ಕುಜ, ಗುರು,ಗಳ
ಯೋಗವು ರಾಜಯೋಗಕಾರಕವಾಗುವದು. ಯಾಕಂದರೆ ಕುಜನು ನವಮಾಧಿ
ಪತಿ. ಗುರುವು ದಶಮಾಧಿಪತಿಯು. ಇವರ ಯೋಗವು ಕೇಂದ್ರ ತ್ರಿಕೋಣಾ
ಧಿಪಯೋಗವಾಗುವದು. ಕುಜನೊಬ್ಬನೇ ಸಾಕ್ಷಾತ್ ಮಾರಕನಾಗುವದಿಲ್ಲ.
ಯಾಕಂದರೆ ದ್ವಿತೀಯ ನವಮಾಧಿಪತಿಯಿರುತ್ತಾನೆ. ಅಂತೆಯೇ ಮೂಲದಲ್ಲಿ
ಶುಭಗ್ರಹರೊಳಗೆ ಸಮಾವೇಶ ಮಾಡಲಾಗಿದೆ. ಮಾರಕ ಲಕ್ಷಣಲಕ್ಷಿತರಾದ
ಶನಿ ಮೊದಲಾದ ಗ್ರಹರು ಮಾರಕರಾಗುತ್ತಾರೆ. || ೨೦ || ೨೧ ||

ಶ್ಲೋ: ಏವಂದ್ವಾದಶಭಾವಾನಾಂ ಶುಭಾಶುಭಫಲಂವಿದುಃ ||
ತನ್ವಾದಿದ್ವಾದಶಾನಾಂಚಭಾವಾನಾಂ ಯೋಜಯೇತ್ಫಲಂ || ೨೨ ||

ಟೀ: ಹೀಗೆ ಹನ್ನೆರಡು ಭಾವಗಳ ಶುಭಾಶುಭಫಲಗಳನ್ನು ಲಗ್ನಾದಿಕ್ರಮ
ದಿಂದ-ಹಿಂದೆ ಹೇಳಿದಂತೆ ಯೋಜಿಸತಕ್ಕದ್ದು. ಯಾವ ಯಾವ ಲಗ್ನಕ್ಕೆ
ಯಾವ್ಯಾವ ಗ್ರಹರು ಶುಭ, ಅಥವಾ ಅಶುಭರು. ಅಥವಾ ವಿಶೇಷ ಮಾರಕರು?
ಎಂಬದನ್ನು ತಿಳಕೊಂಡು ಮತ್ತೂ ಊಹಿಸಿ ಫಲವನ್ನು ಹೇಳತಕ್ಕದ್ದೆಂದು
ಅಭಿಪ್ರಾಯ. || ೨೨ ||

ಶ್ಲೋ: ಪಾಪತ್ವೇಸತಿನೀಚತ್ವೇಪ್ಯುಚ್ಚತ್ವೇವಾಪಿಕಿಂಫಲಂ ||
ತೇಯೋಗಾಃಕಿಂಕರಿಷ್ಯಂತಿ ಸ್ವದಶಾನಾಮನಾಗಮೇ || ೨೩ ||

ಟೀ: ಗ್ರಹರಿಂದುಂಟಾಗುವ ಯೋಗಗಳು ಪಾಪತ್ವ ಮೂಲಕ
ದುಃಖಫಲಗಳನ್ನುಂಟುಮಾಡುವವು. ನೀಚತ್ವ. ಶತ್ರುಗೃಹ ಸ್ಥಿತಿ ಮೊದಲಾದ
ಕಾರಣದಿಂದ ಯೋಗದ ಫಲವು ಅನಿಷ್ಟವಾಗುದದು. ಉಚ್ಚಾದಿ ಸ್ಥಿತಿಯ

ಮೂಲಕ ಶುಭಕರವಾಗುವದು. ಆದರೆ ಪಾಪಯೋಗವಾಗಲೀ ಶುಭಯೋಗವಾ
ಗಲೀ ಆಯಾಯ ಗ್ರಹಗಳ ದಶಾಭುಕ್ತಿಗಳು ಬಾರದಿದ್ದಲ್ಲಿ ಎಲ್ಲಿ ಸಂಭವಿಸುವದು?
ಅಂದರೆ ಗ್ರಹಗಳು ತಮ್ಮ ಇಷ್ಟಾನಿಷ್ಟ ಫಲಗಳನ್ನು ತಮ್ಮ ದಶಾಭುಕ್ತಿಗಳು
ಬಂದಾಗ ಕೊಡುವರೆಂದು ತಾತ್ಪರ್ಯ || ೨೩ ||

ಶ್ಲೋ: ಮಿತ್ರಶತ್ರು ಸಮಾಯೋಗೇಫಲಂಮಿಶ್ರಂಶುಭಂವಿದುಃ ||
ಕೇಂದ್ರತ್ರಿಕೋಣೇಪ್ಯುಚ್ಚತ್ವೇಮಿತ್ರಗ್ರಹಸಮನ್ವಿತೇ || ೨೪ ||
ಮಿತ್ರರಾಶಿಗತೇವಾಪಿ-ಮಂತ್ರಿಣಾಯದಿವೀಕ್ಷಿತೇ ||
ಮಿತ್ರಯುಕ್ತೇ ಬಲವತಿ ರಾಜತುಲ್ಯೋಭವೇನ್ನರಃ || ೨೫ ||

ಟೀ: ಮಿತ್ರಗ್ರಹಗಳ ಹಾಗೂ **ಶತ್ರು**ಗ್ರಹಗಳ ಯೋಗದಿಂದ ಫಲವು
ಶುಭಾ ಶುಭ ಮಿಶ್ರಿತವಾಗಿ ಆಗುವದು. ರಾಜಯೋಗವು ರಾಜಸದೃಶನನ್ನಾಗಿ
ಮಾಡುವದೆಂದರೆ ಆಯೋಗದಲ್ಲೇನೂ ದೋಷವಿರಕೂಡದು. ಕೇಂದ್ರ ತ್ರಿಕೋ
ಣಾದಿಗಳ ಸಂಬಂಧ ಹಾಗೂ ಉಚ್ಚ ರಾಶಿಯಲ್ಲಿರುವಿಕೆ, ಮಿತ್ರ ಗ್ರಹಸಂಬಂಧ
ಯುಕ್ತರಾಗುವಿಕೆ, ಗುರುವಿನ ಪೂರ್ಣದೃಷ್ಟಿಯಿರುವಿಕೆ, ಇತ್ಯಾದಿ ಇತ್ಯಾದಿ.
ಅತಿ ಬಲಿಷ್ಠವಾದ ಯೋಗದಿಂದ ಮನುಷ್ಯನು ರಾಜಸದೃಶನೇ ಆಗುವನು.
|| ೨೪ || ೨೫ ||

ಶ್ಲೋ: ಶುಭಪಾಪಾತ್ಮಕತಯಾ ನಿರ್ದಿಷ್ಟಂತುಫಲಂಗ್ರಹಾಃ ||
ಪ್ರದಿಶಂತಿಫಲಂವಾನ್ಯತ್ ಸ್ವದಶಾಸುಸ್ವಭುಕ್ತಿಷು ||೨೬||

ಟೀ: ಶುಭ ಅಥವಾ ಅಶುಭವೆಂದು ನಿರ್ದಿಷ್ಟವಾದ ಫಲವನ್ನು **ಗ್ರಹ**
ಗಳು ತಮ್ಮ ತಮ್ಮ ದಶಾ, ಅಥವಾ ಭುಕ್ತಿಗಳಲ್ಲಿ ಕೊಡುವರು. !

ವಿವರಣ: ಈ ಶ್ಲೋಕದಲ್ಲಿ ಹೇಳಿದ ವಿಷಯವು ಪುನರುಕ್ತವೇ ಹೊರ
ತು ಮತ್ತೇನಿಲ್ಲ. ಆದರೂ ಮೂಲಪ್ರತಿಯಲ್ಲಿದ್ದುದರಿಂದ ಉದ್ಧರಿಸಿ ಬರೆಯ
ಲಾಗಿದೆ. ||೨೬||

ಶ್ಲೋ: ಫಲಾನಿಗ್ರಹಚಾರೇಣ-**ಸೂಚಯಂತಿಮನೀ**ಷಿಣಃ ||
ಕೋಪಕ್ತಾತಾರತಮ್ಯಸ್ಯ ತಮೇಕಂವೇಧಸಂವಿನಾ ||೨೭||

ಟೀಃ ತಿಳಿದವರು ಗ್ರಹಗಳಚಾರವಶದಿಂದ (ದಶಾಭುಕ್ತಿಗಳು ಇಲ್ಲಿ ಅಭಿ

ವೇತಗಳು) ಫಲಗಳನ್ನು ಸೂಚಿಸುವರು. ತಾರತಮ್ಯದಿಂದ (ಸೂಕ್ಷ್ಮವಾಗಿ ನಿರ್ದಿಷ್ಟಫಲಗಳನ್ನು ಹೇಳಲು ಆ ಬ್ರಹ್ಮನಹೊರತು ಯಾವನು ಶಕ್ತನು?

ವಿವರಣ: ಜಾತಕಫಲವನ್ನು ತೋರಿಸುವ ಸಮಕಾಲದಲ್ಲೇ ಎಲ್ಲ ಫಲಗಳನ್ನು ನಿರರ್ಗಲವಾಗಿ ಹೇಳುವೆವೆನ್ನುವ ಜ್ಯೋತಿಷಿಗಳೂ ಪೃಚ್ಛಕರೂ ಈ ಗ್ರಂಥಕರ್ತನ ಉದ್ಗಾರವನ್ನು ಲಕ್ಷಿಸಬೇಕು. ಜಾತಕನೋಡಿದ ಮಾತ್ರದಿಂದ ಚಾಚೂ ತಪ್ಪದೆ ಯಾವ ಜ್ಯೋತಿಷಿಯೂ ಸೂಕ್ಷ್ಮವಾಗಿ ಫಲಗಳನ್ನು ಹೇಳಲಾರನು ಅಷ್ಟುಸೂಕ್ಷ್ಮವಾಗಿ, ನಿರ್ದಿಷ್ಟವಾಗಿ ಬ್ರಹ್ಮನೊಬ್ಬನೇ ಹೇಳಬಲ್ಲನು. ಇದರಲ್ಲಿ ತಥ್ಯಾಂಶವಿದೆ. ಫಲಜ್ಯೋತಿಷದ ಕ್ಲಿಷ್ಟತೆ, ದುರೂಹತೆಗಳಮೇಲೆ ಇದು ಚನ್ನಾಗಿ ಬೆಳಕು ಬೀರುತ್ತಿದೆಯೆಂದರೆ ವಾಸ್ತವಾಂಶವನ್ನೇ ಹೇಳಿದಂತಾಗುವದು. || ೭೭ ||

ಶ್ಲೋ: ಯಜ್ಞನಾರಾಯಣಾಭಿಖ್ಯಯಾಯಜೂಕತನೂಭುವಾ ||
ಶ್ರೀವೆಂಕಟೇಶ್ವರಾರ್ಯೇಣ-ಕೃತಾಜಾತಕ ಚಂದ್ರಿಕಾ || ೭೮ ||

ಟೀ: "ಯಜ್ಞನಾರಾಯಣ" ಎಂಬ ಹೆಸರಿನ ಯಜ್ಞದೀಕ್ಷಿತರ ಮಗನಾದ "ಶ್ರೀವೆಂಕಟೇಶ್ವರ" ದೀಕ್ಷಿತನಿಂದ ಈ ಜಾತಕ ಚಂದ್ರಿಕೆಯು ಸಂಗ್ರಹಿಸಿ ಬರೆಯಲ್ಪಟ್ಟಿತು.

ವಿವರಣ: ಜಾತಕ ಚಂದ್ರಿಕೆಯನ್ನು ರಚಿಸಿದವರು "ಶ್ರೀ ವೆಂಕಟೇಶ ದೀಕ್ಷಿತ"ರಲ್ಲವೆಂಬ ಸಂಗತಿಯನ್ನು ಪ್ರಸ್ತಾವನೆಯಲ್ಲಿ ಸಕಾರಣವಾಗಿ ತೋರಿಸಲಾಗಿದೆಯಾದ್ದರಿಂದ ವಿಶೇಷ ಬರೆಯುವ ಕಾರಣವಿಲ್ಲ.

|| ಇಲ್ಲಿಗೆ ಜಾತಕ ಚಂದ್ರಿಕೆಯು ಮುಗಿಯಿತು. ||

|| ಶ್ರೀಃ || || ಶ್ರೀಃ ||

|| ಪರಿಶಿಷ್ಟ ||

ದಶಾಂತರ್ದಶೆಗಳು

ದಶಾಚಾಂತರ್ದಶಾಚೈವ ತತ್ತದಂತರ್ದಶಾತಥಾ ||
ಸೂಕ್ಷ್ಮಭುಕ್ತಿಃಪ್ರಾಣದಶಾಪ್ಯೇವಂ ಪಂಚದಶಾಃ ಸ್ಮೃತಾಃ ||
ಬೃ|ಪಾರಾಶರಹೋರಾಶಾಸ್ತ್ರ.

ವಿಂಶೋತ್ತರೀದಶೆಯ ಭೇದಗಳು ದಶೆ (೧) ಅಂತರ್ದಶೆ (ಭುಕ್ತಿ) ೨|| ಉಪದಶಾ (ವಿದಶಾ) ೩|| ಸೂಕ್ಷ್ಮದಶಾ ೪|| ಪ್ರಾಣದಶಾ ೫|| ಹೀಗೆ ಪ್ರತಿಯೊಂದು ಗ್ರಹರದಶೆಯಲ್ಲಿ ಅಂತರ್ಗತವಾಗಿ ೫ ಭೇದಗಳಿವೆ. ಇದರ ಪ್ರಯೋಜನವೇನಂದರೆ ಪಳೆ ವಿಪಳೆ ವರೇಗಿನ ಸೂಕ್ಷ್ಮಾಂಶವನ್ನು ಇದರ ಮೇಲಿಂದ ನೋಡಲು ಬರುತ್ತದೆ.

ನಕ್ಷತ್ರಗಳಮೇಲಿಂದ ಗ್ರಹರ ದಶೆಗಳನ್ನು ತೆಗೆಯುವ ರೀತಿಯು ಎಲ್ಲಕಡೆಗೂ ಪ್ರಸಿದ್ಧವೇ ಇದೆ. ಆದರೂ ದಿಙ್ಮಾತ್ರವಾಗಿ ಇಲ್ಲಿ ಬರೆಯುವದು ಅಪ್ರಸ್ತುತವಾಗಲಾರದು. ೩-೩ ನಕ್ಷತ್ರಗಳಿಗೆ ಒಂದೊಂದು ಗ್ರಹರದಶೆ ಬರುತ್ತದೆ. ಕೃತ್ತಿಕಾ, ಉತ್ರಾ, ಉತ್ರಾಷಾಡಾ ಈ ಮೂರು ನಕ್ಷತ್ರಗಳಲ್ಲಿ ಜನಿಸಿದವನಿಗೆ ಜನ್ಮಾದಿರವಿದಶೆಯು ಬರುತ್ತದೆ.

ಮಾರ್ತಂಡೇಂದು ಕುಜಾಹಿಜೀವಶನಿವಿತ್ಕೇತುಃಸಿತೋಽಂತೇ ಕ್ರಮಾತ್ ಷಟ್‌ಶಕ್ತಿರ್ಮುನಯೋ ಧೃತಿರ್ಧರಣಿಪಾಏಕೋನಿತಾ ವಿಶಂತಿಃ|| ಅತ್ಯಷ್ಟಿರ್ಮುನಯೋನಭಾ ಇತಿ ವಿದುರ್ನಾಥಾ ಇಮೇ ಖೇಚರಾಃ ಸಪ್ತಾರ್ಚಿರ್ಯಮ ವಿಶ್ವಭಾದಿನವಕಕ್ಷಾರ್ಣಾಂದಿನೇ ಶಾಯದಃ ||

|| ಬೃ| ಪಾರಾಶರಹೋರಾ ||

ವಿಂಶೋತ್ತರೀದಶೆಯಲ್ಲಿ ಕ್ರಮದಿಂದ ಸೂರ್ಯ, ಚಂದ್ರ, ಕುಜ, ರಾಹು, ಗುರು, ಶನಿ, ಬುಧ, ಕೇತು, ಶುಕ್ರ ಈ ಕ್ರಮದಿಂದ ಗ್ರಹ ದಶೆಯು ಬರು

ವದು. ಇವುಗಳ ದಶಾವರ್ಷ ಸಂಖ್ಯೆಗಳು ಅನುಕ್ರಮದಿಂದ ೬-೧೦-೭-೧೮-೧೬-೧೯-೧೭-೭-೨೦ ಇರುವವು. ಅಂತೂ ೧೨೦ ವರ್ಷಗಳು. ಕೃತ್ತಿಕಾ, ಉತ್ರಾ, ಉತ್ರಾಷಾಢಾ ಈ ಮೂರು ನಕ್ಷತ್ರಗಳಿಗೆ ಸೂರ್ಯನು ದಶಾನಾಥನಾಗುವನು. ಇವುಗಳ ಮುಂದಿನ ಮೂರು ನಕ್ಷತ್ರ ಅಂದರೆ ಕೃತ್ತಿಕೆಯ ಮುಂದಿನ ನಕ್ಷತ್ರ “ ರೋಹಿಣೀ ” ಉತ್ರಾ ನಕ್ಷತ್ರ ಮುಂದಿನ “ ಹಸ್ತ ” ಉತ್ರಾಷಾಢಾದ ಮುಂದಿನ ಶ್ರವಣ. ಈ ಮೂರು ನಕ್ಷತ್ರಗಳಿಗೆ ಚಂದ್ರನು ದಶಾನಾಥನಾಗುವನು

ಮುಂದಿನ ಕೋಷ್ಟಕವನ್ನು ನೋಡಿರಿ.

ನಕ್ಷತ್ರಗಳು			ಗ್ರಹರು	ದಶಾ ವರ್ಷ ಸಂಖ್ಯೆ
ಕೃತ್ತಿಕಾ	ಉತ್ರಾ	ಉ|ಷಾಢಾ	ರವಿ	೬
ರೋಹಿಣಿ	ಹಸ್ತ	ಶ್ರವಣ	ಚಂದ್ರ	೧೦
ಮೃಗಶಿರಾ	ಚಿತ್ರಾ	ಧನಿಷ್ಠಾ	ಕುಜ	೭
ಆರ್ದ್ರಾ	ಸ್ವಾತಿ	ಶತಭವ	ರಾಹು	೧೮
ಪುನರ್ವಸು	ವಿಶಾಖಾ	ಪೂ|ಭದ್ರಾ	ಗುರು	೧೬
ಪುಷ್ಯ	ಅನುರಾಧಾ	ಉ|ಭದ್ರಾ	ಶನಿ	೧೯
ಆಶ್ಲೇಷಾ	ಜ್ಯೇಷ್ಠ	ರೇವತಿ	ಬುಧ	೧೭
ಮಘಾ	ಮೂಲಾ	ಅಶ್ವಿನಿ	ಕೇತು	೭
ಹುಬ್ಬಾ	ಪೂ|ಷಾಢಾ	ಭರಣಿ	ಶುಕ್ರ	೨೦

ಹೀಗೆ ನಕ್ಷತ್ರಗಳ ಮೇಲಿಂದ ಗ್ರಹರ ದಶಾವರ್ಷಗಳನ್ನು ತಿಳಿಯುವದು. ಜನ್ಮಕಾಲೀನ ನಕ್ಷತ್ರಘಟಿಗಳ ಅವಶೇಷದಿಂದ ದಶಾಶೇಷವನ್ನೂ ಕಂಡು ಕೊಳ್ಳುವರು. ಒಬ್ಬನು ಕೃತ್ತಿಕಾ ನಕ್ಷತ್ರದಲ್ಲಿ ಜನಿಸಿದನೆಂದಿಟ್ಟುಕೊಳ್ಳಿರಿ.

ಜನ್ಮಕಾಲಕ್ಕೆ ಆ ನಕ್ಷತ್ರವು ಎಷ್ಟು ಮುಂದೆ ಉಳಿಯುವದೆಂದು ತಿಳಿದು ರವಿ ದಶಾವರ್ಷಗಳೂ, ಅಷ್ಟಕ್ಕನುಗುಣವಾಗಿ ಶೇಷವಿರುವದು ಸಹಜ. ಆ ದಿನ ಜನ್ಮಕಾಲವು ಸೂರ್ಯೋದಯದಿಂದ ೧೫ ಘಟಿಗೆ ಇದೆಯೆಂದು ತಿಳಿಯೋಣ ಕೃತ್ತಿಕಾನಕ್ಷತ್ರ ಆ ದಿನ ೩೫ ಘಟಿಯೆಂದಿಟ್ಟುಕೊಳ್ಳೋಣ ಅಂದರೆ ಜನ್ಮ ಕಾಲಕ್ಕಿಂತ ಮುಂದೆ ೧೦ಘಟಿ ಶೇಷವುಳಿದಂತಾಯಿತು. ಹಿಂದಿನ ದಿನ (ಸೂರ್ಯೋದಯಾತ್ : ಪೂರ್ವ) ೪೦ ಘಟಿ ಸಂದಿದೆಯೆಂದರಿಯಿರಿ ಒಟ್ಟು ಪರಮ ಘಟಿ ೬೫ ಆದಂತಾಯಿತು. ಅಂತೂ ೬೫ ಘಟಿಯುರುವ ಈ ದಿನದ ನಕ್ಷತ್ರಕ್ಕೆ ರವಿಯ ದಶಾವರ್ಷ ಆರು ಇರುವದಾದರೆ ೧೦ ಘಟಿಗೆ ಎಷ್ಟು ವರ್ಷಾದಿಗಳು ಬರುವವು? ಅನುಪಾತ (ತ್ರೈರಾಶಿಕ) ದಿಂದ ಇದನ್ನು ತಿಳಿಯುವದು ಸುಲಭ.

ಘಟಿ		ಘಟಿ		ವರ್ಷ		ವ.		ಮಾ.		ದಿ.	ಉತ್ತರ
೬೫	÷	೧೦	×	೬	=	೦	—	೧೧	—	೨	

ಅಂದರೆ ಜನನಕಾಲಕ್ಕೆ ರವಿ ದಶೆಯು ವರ್ಷ೦\|ಮಾಸ ೧೧ ದಿನ ೨ ಉಳಿದಂತಾಯಿತು. ಮುಂದೆ ಚಂದ್ರನುಹಾದಶೆ ೧೦ ವರ್ಷ ನಡೆಯುವದು. ಮುಂದೆ ಕುಜ ೭ ಇತ್ಯಾದಿ ೯ ಗ್ರಹರಿಂದ ಕೂಡಿ ೧೨೦ ವರ್ಷಗಳು. ಇದೇ ವಿಂಶೋತ್ತರೀಮಹಾದಶೆಯು.

|| ಅಂತರ್ದಶಾ ಅಥವಾ ಭುಕ್ತಿ ||

ಯಾವದೇ ಗ್ರಹದಶೆಯು ನಡೆಯುವಾಗ ಆ ಗ್ರಹರ ಅಂತರ್ದಶೆಯು ಮೊದಲು ಬರುವದು. ನಂತರ ಕ್ರಮೇಣ ಹಿಂದೆಹೇಳಿದ ಕ್ರಮದಂತೆ ಮುಂದು ಮುಂದಿನ ಗ್ರಹಗಳ ಭುಕ್ತಿ ನಡೆಯುವದು.

ಅಂತರ್ದಶೆ ಮಾಡುವಕ್ರಮ—

ದಶಾದಶಾಹತಾಕಾರ್ಯಾದಶಭಿರ್ಭಾಗಮಾಹರೇತ್
ಲಬ್ಧಾಂಕಾಶ್ಚಭವೇನ್ಮಾಸಾಃತ್ರಿಂಶಘ್ನೇಚದಿನಾನಿಚ ||

ದಶಾಕಾರಕನ ವರ್ಷಕ್ಕೆ ಭುಕ್ತಿಕಾರಕನ ದಶಾವರ್ಷದಿಂದ ಗುಣಿಸಿ

ಹತ್ತರಿಂದ ಭಾಗಿಸಿದರೆ ಲಬ್ಧವು ಮಾಸವಾಗುವದು. ಶೇಷಕ್ಕೆ ೩೦ ರಿಂದ ಗುಣಿಸಿ ಹತ್ತರಿಂದ ಭಾಗಿಸಿದರೆ ಲಬ್ಧವು ದಿನಗಳಾಗುವವು. ಉದಾ:-ರವಿದಶೆಯಲ್ಲಿ ರವಿಭುಕ್ತಿ, ಮಾಸ, ದಿನಗಳೆಷ್ಟು ? ಸೂರ್ಯದಶಾವರ್ಷ ಸಂಖ್ಯೆ ೬ ಅವನದೇ ಭುಕ್ತಿಯನ್ನು ತರಬೇಕಾದ್ದರಿಂದ ೬×೬=೩೬÷೧೦=೩ ತಿಂಗಳು ಶೇಷವು ೬×೩೦=೧೮೦÷೧೦=೧೮ ದಿನಗಳಾದವು. ಇದರಂತೆ ಸೂರ್ಯದಶಾ ವರ್ಷಕ್ಕೆ ಚಂದ್ರನ ದಶಾವರ್ಷಗಳಿಂದ ಲೆಕ್ಕ ಮಾಡಿದರೆ ಚಂದ್ರನ ಭುಕ್ತಿಮಾಸ ದಿನಗಳು ಬರುವವು.

ರವಿದಶೆಯಲ್ಲಿ	ರವಿ	ಚಂ.	ಕು.	ರಾ.	ಗು.	ಶ.	ಬು.	ಕೇ.	ಶು.
ತಿಂಗಳು	೬	೧೦	೪	೧೦	೯	೧೧	೧೦	೪	೧೨
ದಿನಗಳು	೧೮	೦	೬	೨೪	೧೮	೧೨	೬	೬	೦

ಅಂತೂ ಆರುವರ್ಷಗಳು ಇದರಂತೆ ಎಲ್ಲಾದಶೆ ಭುಕ್ತಿಗಳನ್ನೂ ಊಹಿಸುವದು.

॥ ಉಪದಶಾ ಅಥವಾ ವಿದಶಾ ಮಾಡುವಕ್ರಮಂ ॥

ಇದಕ್ಕೆ "ಅಂತರಾಂತರದಶಾ" ಎಂತಲೂ ಹೇಳುವರು. ಇದು ಆಯಾಯ ಭುಕ್ತಿಗಳಲ್ಲಿ ದಿನಘಟ್ಯಾತ್ಮಕವಾಗಿ ಎಲ್ಲಾ ಗ್ರಹರ ವಿದಶೆಯನ್ನು ಸೂಚಿಸುವದು

ಸ್ವಾಂತರ್ದಶಾಬ್ದವೃಂದಂಚಹನ್ಯಾತ್ ಸ್ವಾಬ್ದೈರ್ಗ್ರಹಸ್ಯಚ ॥
ವಿಂಶೋತ್ತರಶತೇನಾಪ್ತಂ ಘಸ್ರಾಃ ಶೇಷಂ ಕಲಾದಿಕಂ ॥

ಮಹಾದಶೆಯಲ್ಲಿ ಬರುವ ಭುಕ್ತಿಯಲ್ಲಿ ಭುಕ್ತಿಕಾರಕನದಶಾವರ್ಷ ಅಥವಾ ಮಾಸ ದಿನಗಳನ್ನೆಲ್ಲ ದಿನಗಳನ್ನು ಮಾಡಿಕೊಂಡು ಆ ಅಂತರಾಂತರದಶೆಯನ್ನು ತೆಗೆಯುವ ಗ್ರಹರ ಮಹಾದಶಾವರ್ಶದಿಂದ ಗುಣಿಸಿ ನೂರಾಇಪ್ಪತ್ತರಿಂದ ಭಾಗಿಸಿ ಬಂದ ಲಬ್ಧಗಳು ದಿನಗಳಾಗುವವು. ಶೇಷವನ್ನೂ ೬೦ ರಿಂದ ಗುಣಿಸಿ ೧೨೦ ರಿಂದ ಭಾಗಿಸಿದರೆ ಬರುವ ಲಬ್ಧವು ಘಟಿಗಳಾಗುವವು. ಉದಾ:- ಸೂರ್ಯದಶೆಯಲ್ಲಿ ಸೂರ್ಯಭುಕ್ತಿಯಲ್ಲಿ ಅಂತರಾಂತರದಶೆ ತೆಗೆಯೋಣ. ೩ ತಿಂಗಳು ೧೮ ದಿನಗಳು ಸೂರ್ಯಭುಕ್ತಿಕಾಲವು ಒಟ್ಟು ದಿನಗಳು ೧೦೮ ಆಗುವವು. ಇದನ್ನು ಸೂರ್ಯನಮಹಾದಶಾವರ್ಷ ೬ ರಿಂದ ಗುಣಿಸಿದರೆ ೬೪೮ ಬರುವದು. ಇದನ್ನು ೧೨೦ ರಿಂದ ಭಾಗಿಸಲಾಗಿ ಲಬ್ಧವು ೫ ದಿನಗಳು ಶೇಷ ೪೮ಕ್ಕೆ ೬೦ ರಿಂದ ಗುಣಿಸಿದರೆ

೨೮೮೦ ಆಗುವವು. ಇದನ್ನು ೧೨೦ ರಿಂದ ಭಾಗಿಸಲಾಗಿ ಲಬ್ಧವು ೨೪ ಘಟಿಗಳಾಗುವವು. ಅಂತೂ ಸೂರ್ಯದಶೆಯು ಸೂರ್ಯ ಭುಕ್ತಿಯಲ್ಲಿ ಸೂರ್ಯನ ಉಪದಶೆಯು೫ದಿನ೨೪ ಘಟಿಯಾದಂತಾಯಿತು. ಇದರಂತೆ ಈ ಭುಕ್ತಿಯಲ್ಲಿ ಚಂದ್ರಾದಿಗಳ ವಿದಶೆಗಳನ್ನು ತಿಳಿಯುವದು. ಸೂರ್ಯದಶೆಯು ಸೂರ್ಯ ಭುಕ್ತಿಯಲ್ಲಿ ಸೂರ್ಯಾದಿಗ್ರಹಗಳ ಉಪದಶೆಯ ದಿನ ಘಟಿಗಳು ಇಷ್ಟಾಗುವವು.

ಸೂರ್ಯದಶಾ ಸೂರ್ಯಭುಕ್ತಿಯ ಸೂರ್ಯಾದಿ ಉಪದಶೆಗಳು

	ರವಿ	ಚಂ.	ಕು	ರಾ	ಗು	ಶ.	ಬು	ಕೇ	ಶು
ಮಾಸ	೦	೦	೦	೦	೦	೦	೦	೦	೦
ದಿನ	೫	೯	೬	೧೬	೧೪	೧೭	೧೫	೬	೧೮
ಘಟಿ	೨೪	೦	೧೮	೧೨	೨೪	೬	೧೮	೧೮	೦
ವಿಘಟಿ	೦	೦	೦	೦	೦	೦	೦	೦	೦

ಇದರಂತೆ ಎಲ್ಲ ಭುಕ್ತಿಗಳೊಳಗೆ ವಿದಶೆಗಳನ್ನು ಮಾಡಿಕೊಳ್ಳುವದು.

ವಿದಶೆಯಲ್ಲಿ ಸೂಕ್ಷ್ಮದಶಾ ಮಾಡುವ ಕ್ರಮ

ಸ್ವೋಪದಶಾ ಘಟೀ ವೃಂದಂ ಹತಂ ಸ್ವಾಬ್ದಗ್ರಹೇಣ ಚ ॥
ವಿಂಶೋತ್ತರ ಶತೇನಾಪ್ತಂ ಲಿಪ್ತಾಃ ಶೇಷಂ ಕಲಾದಿಕಂ ।
ಬೃ।ಪರಾಶರಹೋರಾ

ಉಪದಶೆಯ ದಿನಘಟಿಗಳನ್ನೆಲ್ಲ ಘಟಿಗಳನ್ನಾಗಿಸಿಕೊಂಡು ತಮ್ಮ ಮೂಲದಶಾವರ್ಷಗಳಿಂದ ಗುಣಿಸಿ ೧೨೦ ರಿಂದ ಭಾಗಿಸಿ ಬಂದ ಲಬ್ಧಗಳು ಘಟಿಗಳಾಗುವವು. ಪುನಃ ಶೇಷವನ್ನು ೬೦ ರಿಂದ ಗುಣಿಸಿ ೧೨೦ ರಿಂದ ಭಾಗಿಸಲಾಗಿ ಬಂದ ಲಬ್ಧವು ವಿಘಟಿ ಅಥವಾ ಪಳೆಗಳು. ಸೂರ್ಯದಶೆಯಲ್ಲಿಯ ಉಪದಶೆಯಲ್ಲಿ ಸೂರ್ಯನ ಸೂಕ್ಷ್ಮದಶೆಯನ್ನು ತೆಗೆಯೋಣ. ಸೂರ್ಯನ ಉಪದಶೆ ದಿನ ೫ ಘಟಿ ೨೪ ಇದನ್ನು ಘಟಿಗಳನ್ನಾಗಿ ಮಾಡಿದಲ್ಲಿ ೩೨೪ ಇದನ್ನು ಸೂರ್ಯದಶಾವರ್ಷ ೬ ರಿಂದ ಗುಣಿಸಿದರೆ ೧೯೪೪ ಇದನ್ನು ೧೨೦ ರಿಂದ ಭಾಗಿಸಲಾಗಿ ಲಬ್ಧ ಘಟಿ ೧೬ ಶೇಷ ೨೪ನ್ನು ೬೦ ರಿಂದ ಗುಣಿಸಿ ೧೨೦ ರಿಂದ ಭಾಗಿಸಲಾಗಿ ಲಬ್ಧ ಪಳೆ ೧೨ ಇದರಂತೆ ಎಲ್ಲ ಗ್ರಹರ ಸೂಕ್ಷ್ಮದಶೆಯನ್ನೂ ತೆಗೆಯುವದು.

ಸೂರ್ಯದಶಾ ಸೂರ್ಯಭುಕ್ತಿ ಸೂರ್ಯನ ಅಂತರಾಂತರ ದಶೆಯಲ್ಲಿ
ಸೂಕ್ಷ್ಮದಶೆಯ ಘಟಿ ಪಳೆಗಳು

	ಸೂ.	ಚ.	ಕು	ರಾ	ಗು	ಶ	ಬು	ಕೇ	ಶು
ಘಟಿ:	೧೬	೨೭	೧೮	೪೮	೪೩	೫೧	೪೫	೧೮	೪೪
ಪಳೆ :	೧೨	೦	೫೪	೩೬	೧೨	೧೮	೫೪	೫೪	೦

॥ ಸೂಕ್ಷ್ಮದಶೆಯಲ್ಲಿ-ಪ್ರಾಣದಶೆಮಾಡುವಕ್ರಮ ॥

ಸ್ವಸೂಕ್ಷ್ಮಾಖ್ಯವಶಾಯಾಶ್ಚ ಪಿಂಡೇವಿಘಟಕಾತ್ಮಕೇ ॥
ಸ್ವಾಬ್ದೇತಷ್ಟೇ ಪುನಸ್ತಷ್ಟೇ ವಿಂಶೋತ್ತರ ಶತೇನಚ ॥
ಲಬ್ಧಂವಿಘಟಿಕಾಜ್ಞೇಯಾವಿಪಲಾನಿ ತತಃ ಪರಂ

ಸೂಕ್ಷ್ಮದಶಾಘಟಿ ಪಳೆಗಳನ್ನುಮಾಡಿ ದಶಾಕಾರಕನ ವರ್ಷಗಳಿಂದ ಗುಣಿಸಿ ೧೨೦ ಭಾಗಿಸಿ ಬಂದಲಬ್ಧವು ವಿಘಟಿಕಾ ಅಥವಾ ಪಳೆಗಳಾಗುವವು ಶೇಷವನ್ನು ೬೦ ರಿಂದ ಗುಣಿಸಿ ೧೨೦ ರಿಂದ ಭಾಗಿಸಿ ಬಂದಲಬ್ಧವು ವಿಪಳೆಗಳಾಗುವವು. ಸೂರ್ಯದಶೆಯಲ್ಲಿ ಸೂರ್ಯನ ಸೂಕ್ಷ್ಮದಶೆ ಘಟಿ ೧೬ ಪಳೆ ೧೨ ಇವುಗಳನ್ನು ಪಳೆ ಮಾಡಲಾಗಿ ೯೭೨ ಇದನ್ನು ದಶಾವರ್ಷ ೬ ರಿಂದ ಗುಣಿಸಿ ೧೨೦ ರಿಂದ ಭಾಗಿಸಲಾಗಿ ಲಬ್ಧವು ೪೮ ಪಳೆ, ಶೇಷ, ಘಟಿ ೭೨ನ್ನು ೬೦ ರಿಂದ ಗುಣಿಸಿ ೧೨೦ ರಿಂದ ಭಾಗಿಸಲಾಗಿ ವಿಪಳೆ ೩೬ ಇವು ಪ್ರಾಣದಶೆಗಳಾಗುವವು. ಇಷ್ಟಕಾಲದಲ್ಲಿ ಯಾವದಶೆಯು ಎಷ್ಟುಸಂದಿದೆಯೆಂದು ತಿಳಿದು ಆ ಕಾಲಕ್ಕೆ ಯಾವ ಭುಕ್ತಿ ಕಾಲ ಎಷ್ಟು ಸಂದಿದೆಯೆಂದು ಊಹಿಸಿ ಆಗಬರುವ ಅಂತರಾಂತರದಶೆಮಾಡಿ ಆ ಕಾಲದಲ್ಲಿ ಸೂಕ್ಷ್ಮ ದಶೆ ತಿಳಕೊಂಡು ಮುಂದೆ ಎಷ್ಟು ಪಳೆ ಸೂಕ್ಷ್ಮದಶೆಯಲ್ಲಿ ಸಂದಿದೆಯೆಂದು ತಿಳಕೊಂಡು ಅಷ್ಟನೇ ಪಳೆಗೆ ಪ್ರಾಣದಶೆಯು ಯಾವದೆಂಬದನ್ನು ತಿಳಕೊಳ್ಳುವಷ್ಟು ಸೂಕ್ಷ್ಮವಾಗಿದೆ ಇದು ಬೃಹತ್ಪಾರಾಶರೀಯದಲ್ಲಿ ಈ ಪ್ರಾಣದಶಾ ಪಳೆಗಳನ್ನು ಮರಣಕಾಲದಲ್ಲಿ ವಿನಿಯೋಗಿಸಿ ತಿಳಕೊಳ್ಳಬೇಕೆಂದಿದೆ ಯಾದರೂ ಯಾವದೇ ಇಷ್ಟಕಾಲಕ್ಕೆ ತಿಳಿದರೆ ತಪ್ಪೇನೂ ಇಲ್ಲ. ಅಂತೂ ವರ್ಷ, ಮಾಸ, ದಿನ, ಘಟಿ, ಪಳೆ ವರೇಗೆ ಯಾವದಶೆಯಲ್ಲಿ ಯಾವಭುಕ್ತಿ ? ಆ ಭುಕ್ತಿಯಲ್ಲಿ ಯಾವ ಅಂತರಾಂತರದಶೆ ? ಆ ಅಂತರಾಂರದಶೆಯಲ್ಲಿ ಯಾವ ಸೂಕ್ಷ್ಮದಶೆ ? ಆ ಸೂಕ್ಷ್ಮದಶೆಯಲ್ಲಿ ಯಾವ ಪ್ರಾಣದಶೆ ? ಎಂಬದನ್ನು ಈ ಒಂದೇ ವಿಂಶೋತ್ತರೀದಶೆಯಲ್ಲಿ

ತಿಳಿಯಲು ಬರುವದೆಂಬದು ಸ್ಪಷ್ಟ. ಒಂದು ಇಷ್ಟಕಾಲಕ್ಕೆ ದಶೆಯು ಒಂದು ಗ್ರಹರದ್ದಾದರೆ ಭುಕ್ತಿಯು ಇನ್ನೊಂದು ಗ್ರಹರದ್ದು. ವಿದಶೆಯು ಮತ್ತೊಬ್ಬನದು. ಸೂಕ್ಷ್ಮದಶೆಯು ಮತ್ತೊಬ್ಬನದು. ಪ್ರಾಣದಶೆಯು ಬೇರೆ ಗ್ರಹರದ್ದು ಅಂತೂ ಐದು ಗ್ರಹರ ಪರಿಣಾಮವು ಇಷ್ಟಕಾಲದಲ್ಲಿ ಇರುವದೆಂದು ತಾನೇ ತಿಳಿಯುವದು. ವಿಂಶೋತ್ತರೀ ದಶಾಪದ್ಧತಿಯಿಂದ ಫಲ ಹೇಳುವದಾದರೂ, ಇವಿಷ್ಟನ್ನಾಧರಿಸಿಕೊಳ್ಳಬೇಡವೇ? ಬರೇ ದಶಾಭುಕ್ತಿಗಳನ್ನಷ್ಟೇ ನೋಡಿದರೆ ಅದು ಹೇಗೆ ತಿಳಿಯಬೇಕು? ಒಂದು ಘಳಿಗೆಯೊಳಗೆ ೫-೬ ಜಾತಕಗಳ ಫಲಾಫಲ ತಿಳಕೊಂಡು ಹೋಗಲನುವಾದ ಪೃಚ್ಛಕರೂ ಅಷ್ಟರಲ್ಲಿಯೇ ಫಲ ಫಲಗಳನ್ನೆಲ್ಲ ಹೇಳಿ ಮುಗಿಸುವ ಜೋಯಿಸರೂ ಇದನ್ನು ಲಕ್ಷ್ಯದಲ್ಲಿಡತಕ್ಕದ್ದು.

॥ ನನ್ನ ಷಷ್ಟ್ಯಬ್ದ ಪೂರ್ತಿಸಮಾರಂಭ ॥

ಶಾರ್ವರಿಸಂವತ್ಸರದ ವೈಶಾಖ ಶು। ೧೦ ಸೋಮವಾರ ತಾ. ೧೮-೫-೧೯೬೦ನೇ ದಿನ ಮಧ್ಯಾಹ್ನ ಘಂಟೆ ೪-೩೦ ಸಮಯಕ್ಕೆ ಸರಿಯಾಗಿ ಹೊನ್ನಾವರದ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಸಮಾರಂಭವು ತಕ್ಕಮಟ್ಟಿಗೆ ಯಶಸ್ವಿಯಾಗಿ ಜರುಗಿತು. ಶಾಂತಿ ಮೊದಲಾದ ವೈದಿಕ ಕಾರ್ಯಗಳನ್ನೆಲ್ಲ ಮೊದಲೇ ಸಕಾಲದಲ್ಲಿ ಮಾಡಲಾಗಿತ್ತು. ಶ್ರೀ॥ ಶಿವರಾವ್ ಶಾಸ್ತ್ರೀ ಬಿ. ಎ., ಎಲ್‌ಎಲ್. ಬಿ. ವಕೀಲ ವಿ. ಕೆ. ಶೆಟ್ಟಿ ಸಬಜಜ್ಜ ಹೊನ್ನಾವರ, ಹಾಸಣಗಿ ಗಣಪತಿ ಭಟ್ಟ ಮೊದಲಾದವರ ಶುಭ ಸಂದೇಶಗಳು ಬಂದಿದ್ದವು.

ಆ ದಿನ ಸಮಾರಂಭಕ್ಕೆ ಶ್ರೀ ಜಿ. ಎನ್. ಸಭಾಹಿತ ಬಿ.ಎ., ಎಲ್‌ಎಲ್‌ಬಿ. ವಕೀಲ ಕಾರವಾರ ಇವರು ಅಧ್ಯಕ್ಷರಾಗಿದ್ದರು. ಇದಲ್ಲದೇ ಮುಖ್ಯ ಅತಿಥಿಗಳಾದ ಶ್ರೀ॥ ಜಿ. ಆರ್. ಪಾಂಡೇಶ್ವರ, ಜೋಕಿಂ ಆಳ್ವಾ ಎಮ್. ಪಿ. ತಾಲೂಕಾ ಕೊಂಗ್ರೆಸ್ ಪ್ರೆಸಿಡೆಂಟ ಆರ್. ಎಸ್. ಹೆಗಡೆ ಬಿ. ಎ., ಎಲ್‌ಎಲ್. ಬಿ. ವಕೀಲ ಹೊನ್ನಾವರ ಶ್ರೀ॥ ಜಾಲಿಸತ್ಗಿ ವಕೀಲ ಹೊನ್ನಾವರ ಮೊದಲಾದವರು ಪ್ರಮುಖರಾಗಿದ್ದರು. ಅಧ್ಯಕ್ಷ ಶ್ರೀ ಕ್ಷತ್ರಿಯ ಸಂಘ, ಹೊನ್ನಾವರ ಇವರ ಸ್ವಾಗತ ಭಾಷಣವಾದ ನಂತರ ಶ್ರೀ॥ ಜಾಲಿಸತ್ಗಿ ವಕೀಲರು ಹೊನ್ನಾವರ ಕ್ಷತ್ರಿಯ ಬಾಂಧವರ ಪರವಾಗಿ ಮಾನಪತ್ರವನ್ನು ಸಮರ್ಪಿಸಿದರು. ಅಧ್ಯಕ್ಷ ಸಭಾಹಿತ ಪಾಂಡೇಶ್ವರ, ಆರ್. ಎಸ್. ಹೆಗಡೆ, ಶ್ರೀ॥ ಜಾಲಿಸತ್ಗಿ, ಶ್ರೀ॥ ಆಳ್ವಾ, ಕೆರೆಮನೆ. ಶಿವರಾಮ ಹೆಗಡೆ, ಕೆರೆಮನೆ ಮಾಬ್ಲ ಹೆಗಡೆ ಮೊದಲಾದವರೆಲ್ಲ ನನಗೆ ಶುಭಕೋರಿ ಭಾಷಣ ಮಾಡಿದರು. ಇವರೆಲ್ಲರ ಪ್ರಶಂಸೆಗಳು ನನ್ನನ್ನು ನಾಚಿಸುವಂಥವಿದ್ದವು. ಕೊನೆಗೆ ಅಧ್ಯಕ್ಷರ ಸಮಾರೋಪಭಾಷಣವಾಗಿ ಶ್ರೀ ಲಕ್ಷ್ಮೀನಾರಾಯಣ ದೇವರ ಆರತಿ ಪ್ರಸಾದ ಸ್ವೀಕಾರ ಮೊದಲಾದ ಕಾರ್ಯಕ್ರಮಗಳಿಂದ ಕೊನೆಗಂಡಿತು. ನಾನೂ ಸಭಾಧ್ಯಕ್ಷರಾಗಿರಿಯಾಗಿ ಸಮಾರಂಭಕ್ಕೆ ಆಗಮಿಸಿದ ಸಕಲರಿಗೂ, ವಂದನಾರ್ಪಣೆಮಾಡಿ ಇದೊಂದು ನನ್ನ ಆಯುಷ್ಯದಲ್ಲಿಯ ಸಂಸ್ಮರಣೀಯದಿನವೆಂದೆಣಿಸಿ "ಮೂಕಂ ಕರೋತಿ ವಾಚಾಲಂ" ಎಂಬಂತೆ ಇದೆಲ್ಲ ಪರಮಾತ್ಮನ ಕೃಪೆಯೆಂದೇ ಭಾವಿಸಿ ತೃಪ್ತನಾದೆನು.

ಓಂ ಶಾಂತಿಃ ಶಾಂತಿಃ ಶಾಂತಿಃ

ಶಂಭುಶರ್ಮಾ ನಾಜಗಾರ.

"ದ್ವಾದಶ ಭಾವ"

ಕನ್ನಡ ಟೀಕಾ—ಪರಿಶಿಷ್ಟ ಗಣಿತ ಪ್ರಕರಣ ಸಹಿತ.

ಇದರಲ್ಲಿ ಜನನಕಾಲದ ವಿಚಾರದಿಂದ ಇಡೀ ಆಯುಷ್ಯದ ಕೊನೆಯ ವರೇಗಿನ ಸಾಮಾನ್ಯ ಎಲ್ಲಾ ಫಲಗಳ ವಿಚಾರವು ಮಾಡಲ್ಪಟ್ಟವೆ. ಶ್ಲೋಕಗಳೆಲ್ಲ ಪ್ರಸಿದ್ಧ ಗ್ರಂಥಗಳಿಂದ ಆರಿಸಲ್ಪಟವಿರುವವು. ಶ್ಲೋಕಗಳು ೨೦೦ ಮಟ್ಟಗಿರುವದರಿಂದ ಅಭ್ಯಾಸಕ್ಕೂ ಅನುಕೂಲ. ಗ್ರಹ, ಲಗ್ನ, ಮಾಂದಿ, ಭಾವ, ಇವುಗಳನ್ನೆಲ್ಲ ಸ್ಪಷ್ಟ ಮಾಡಲನುಕೂಲವಾಗುವಂತೆ ಚಾಲನ ಪದ್ಧತಿಯು ಕೊಡಲ್ಪಟ್ಟದೆ. ಆದ್ಯಂತ ಇದನ್ನು ಮನನಮಾಡಿದರೆ ಸಾಮಾನ್ಯ ಜ್ಯೋತಿಷಿಯಾಗಲಡ್ಡಿ ಇಲ್ಲ. ಎರಡನೆ ಆವೃತ್ತಿ ಬೆಲೆ ೧—೫೦

"ಶ್ರಾದ್ಧ ಪ್ರಯೋಗ"

ಕನ್ನಡ ಟೀಕಾ ಸಹಿತ ಕಾರಿಕಾಯುಕ್ತ. ಶ್ರಾದ್ಧದಲ್ಲಿ ಸಂಭವಿಸುವ ಪ್ರಾಯಶ್ಚಿತ್ತಾದಿಗಳೆಲ್ಲ ಕೊಡಲ್ಪಟ್ಟವೆ.

ಸ್ವರಸಹಿತ ಬೆಲೆ ೦—೭೫

ಸಿಗುವ ಸ್ಥಳ— ಶಂಭು ಶಾಸ್ತ್ರೀ ನಾಜಗಾರ.

ದುರ್ಗಾಕೇರಿ ಪೋ: ಹೊಂನಾವರ (ಉ. ಕ.)

— ಮುದ್ರಣಾಲಯ —

ಗಣಪತಿ ಪ್ರಿಂಟಿಂಗ್ ಪ್ರೆಸ್, ಹೊನ್ನಾವರ.